
ಸಂಪುಟ 24 ಸಂಚಿಕೆ 11-12
ಮಾರ್ಚ್ 24, 2002 ಬೆಲೆ ರೂ. 3.00

ಐಕ್ಯರಂಗ

ದುಡಿವ ಜನರ ಪ್ರಾಣಮಿತ್ರ




ಗುಜರಾತ್: ಫ್ಯಾಸಿಸ್ಟರ ಹತ್ಯಾಕಾಂಡ

ವಾಜಪೇಯಿ ವಂಚನೆ



ರೈಲ್ವೆ ಬಜೆಟ್ ಕರ್ನಾಟಕಕ್ಕೆ ಅನ್ಯಾಯ



ಸಿಪಿಐ(ಎಂ) 17ನೇ ಮಹಾಧಿವೇಶನದತ್ತ

ಬಜೆಟ್ ವಿರುದ್ಧ ರ್‍ಯಾಲಿ-ಹವಾಲಾ ಹಗರಣ ಸ್ಫೋಟ-ವಿಭಿನ್ನ ಕೈಗಾರಿಕಾ ನೀತಿ

ಹಿಂದಿನ ಸಂಚಿಕೆಯಲ್ಲಿ ಮುಲಾಯಂ ಸಿಂಗ್ ಸರ್ಕಾರಕ್ಕೆ ಬಿಎಸ್‌ಪಿ ಬೆಂಬಲ ವಾಪಸ್ಸು, ಮುಖ್ಯಮಂತ್ರಿಯಾಗಿ ಮಾಯಾವತಿ, ಅವರ ಸರಕಾರವೂ ಪತನ, ವಿಧಾನಸಭೆ ವಿಸರ್ಜನೆ, ಷೇರು ಹಗರಣ, ಮನಮೋಹನ್‌ಸಿಂಗ್ ವಿಚಾರಣೆ, ಭಾರತ ಬಂದ್, ಈ ಬಗ್ಗೆ ಓದಿರುವಿರಿ. ಈ ಸಂಚಿಕೆಯಲ್ಲಿ ಬೆಲೆ ಏರಿಕೆ ವಿರೋಧಿ ಸಪ್ತಾಹ, ಹವಾಲ ಹಗರಣ ಬಯಲು, ಮೂರು ಬಿಜೆಪಿ ರಾಜ್ಯ ಸರ್ಕಾರಗಳ ವಜಾಕ್ಕೆ ಸುಪ್ರೀಂ ಕೋರ್ಟು ಸಿಂಧು, ಬೃಹತ್ ಸಂಸತ್ ಚಲೋ, ಡೆಂಕಲ್ ಪ್ರಸ್ತಾವನೆ ಜಾರಿಗೊಳಿಸಬಾರದೆಂದು ಪ.ಬಂಗಾಳ ವಿಧಾನಸಭೆ ನಿರ್ಣಯ ಅಂಗೀಕಾರ. ಜ್ಯೋತಿ ಬಸುರವರಿಂದ ಪ್ರಜಾಸತ್ತಾತ್ಮಕ ಕೊರಿಯಾದ ಮಹತ್ವದ ಭೇಟಿ, ಸಾರ್ವಜನಿಕ ಉದ್ದಿಮೆಗಳ ಕಾರ್ಮಿಕರ ಮುಷ್ಕರ ಮತ್ತು ಪ.ಬಂಗಾಳ ಕೈಗಾರಿಕಾ ಅಭಿವೃದ್ಧಿ ನಿಗಮ ರಚನೆ... ಈ ಬಗ್ಗೆ ಓದಿರಿ.

ದಿನವರಿ ಅಂತ್ಯದಲ್ಲಿ ಅಕ್ಕಿ ಬೆಲೆಯೇರಿತು. ಅದರ ಬೆನ್ನಲ್ಲೇ ಪೆಟ್ರೋಲ್, ಡೀಸೆಲ್ ಬೆಲೆಗಳು ಏರಿದವು. ಬಜೆಟ್‌ಗೆ ಮುಂಚೆಯೇ ಕೇಂದ್ರ ಸರಕಾರ ಬೆಲೆಗಳನ್ನು ಏರಿಸಿ 26,200 ಕೋಟಿ ರೂಪಾಯಿಗಳನ್ನು ಕ್ರೋಢೀಕರಿಸಿತು. ಫೆಬ್ರವರಿ 7 ರಿಂದ 14 ರವರೆಗೆ 'ಬೆಲೆಯೇರಿಕೆ-ವಿರೋಧಿ ಸಪ್ತಾಹ'ವನ್ನು ಆಚರಿಸಿದೆವು. ಮಾರ್ಚ್ 6 ರಂದು ಬ್ರಿಗೇಡ್ ಮೈದಾನದಲ್ಲಿ ಬೃಹತ್ ರ್‍ಯಾಲಿ ನಡೆಸಿದೆವು.

ಕಾಕತಾಳೀಯವೆನ್ನುವಂತೆ ಕೆಲ ದಿನಗಳ ಮೊದಲು ಫೆಬ್ರವರಿ 26 ರಂದು ವ್ಯಂಗ್ಯಚಿತ್ರಕಾರ ರಾಜೆಂದರ್ ಪುರಿ ಹವಾಲಾ ಹಗರಣವನ್ನು ತಮ್ಮ ರೇಖೆಗಳಲ್ಲಿ ಚಿತ್ರಿಸಿ ಸಾರ್ವಜನಿಕರ ಗಮನಕ್ಕೆ ತಂದಿದ್ದರು. ಹವಾಲಾ ವ್ಯವಹಾರದಿಂದ 42 ರಾಜಕಾರಣಿಗಳು ಹಣ ಪಡೆದಿದ್ದರು. ಈ ಸಂಖ್ಯೆ ಆ ನಂತರ ಇನ್ನೂ ಹೆಚ್ಚಿತು. ಹೀಗೆ ಹಣ ತೆಗೆದುಕೊಂಡವರಲ್ಲಿ ಎಡಪಕ್ಷಗಳ ಒಬ್ಬರೇ ಒಬ್ಬ ನಾಯಕರೂ ಇರಲಿಲ್ಲ.

ಸುಪ್ರೀಂಕೋರ್ಟ್ ಮಾರ್ಚ್ 11 ರಂದು ಒಂದು ಐತಿಹಾಸಿಕ ತೀರ್ಪು ನೀಡಿತು. ಅಯೋಧ್ಯೆ ದುರಂತದ ನಂತರ ಬಿಜೆಪಿ ಆಡಳಿತದ ಮೂರು ರಾಜ್ಯ ಸರ್ಕಾರಗಳನ್ನು ವಜಾ ಮಾಡಿದ್ದನ್ನು ಅದು ಕಾನೂನು ಪ್ರಕಾರ ಸಿಂಧುಗೊಳಿಸಿತು. ರಾಜ್ಯ ಸರ್ಕಾರವನ್ನು ವಜಾ ಮಾಡಲು ಸಂವಿಧಾನ 356 ನೇ ವಿಧಿಯ ಬಳಕೆಯ ವಿಷಯ ಮುಕ್ತ ಚರ್ಚೆಗೆ ಒಳಪಟ್ಟಿತು. ಹಲವು ವರ್ಷಗಳಿಂದ ಕಾಂಗ್ರೆಸ್ ತನ್ನ ಸ್ವಾರ್ಥಕ್ಕೆ ಹಾಗೂ ಅಲ್ಪ ಲಾಭಕ್ಕಾಗಿ ಈ ನಿಯಮವನ್ನು ಉಪಯೋಗಿಸಿಕೊಳ್ಳುತ್ತಾ ಬಂದಿದೆ. ಇದನ್ನು ನಾವು ನಿರಂತರವಾಗಿ ವಿರೋಧಿಸುತ್ತಾ ಬಂದಿದ್ದೇವೆ. ಹೀಗಾಗಿ ನ್ಯಾಯಾಲಯ ನೀಡಿದ ಮಾನ್ಯತೆಯಿಂದಾಗಿ ನಮ್ಮ ಪ್ರಜಾಸತ್ತಾತ್ಮಕ ನಿಲುವನ್ನು ಎತ್ತಿಹಿಡಿದಂತಾಯಿತು.

ಗಣಿಗಳನ್ನು ಖಾಸಗೀಕರಿಸುವ ಮಸೂದೆಯನ್ನು ಮಾರ್ಚ್ 16 ರಂದು ಕೇಂದ್ರ ಸರಕಾರ ಮಂಡಿಸಿತು. ಬ್ಯಾಂಕ್, ವಿಮೆ ಮತ್ತು ಗಣಿ ಕ್ಷೇತ್ರಗಳನ್ನು ಇಂದಿರಾಗಾಂಧಿ ರಾಷ್ಟ್ರೀಕರಣ ಮಾಡಿದ್ದರು. ಆಗ ನಾವು ಅವರನ್ನು ಬೆಂಬಲಿಸಿದ್ದೆವು. ಆದರೆ ರಾವ್ ಸರ್ಕಾರ ಪೂರ್ಣ ವಿರುದ್ಧ ದಿಕ್ಕಿಗೆ ಹೋಗುತ್ತಿತ್ತು. ಇದನ್ನು ನಾವು ಖಂಡತುಂಡವಾಗಿ ವಿರೋಧಿಸಿದೆವು.

ಏಪ್ರಿಲ್ 4 ರಂದು ಕಲ್ಕತ್ತದಲ್ಲಿ ಬೃಹತ್ ರ್‍ಯಾಲಿ ನಡೆಯಿತು. ಮರುದಿನ 'ಸಂಸತ್ ಚಲೋ' ನಡೆಯಿತು. ಅದರಲ್ಲಿ ಎರಡು ಲಕ್ಷಕ್ಕೂ ಹೆಚ್ಚು ಜನರು ಭಾಗವಹಿಸಿದ್ದರು. ಸಂಸತ್ ಚಲೋ ಕಾರ್ಯಕ್ರಮವನ್ನು ವಿಫಲಗೊಳಿಸಲು ಪೋಲೀಸರು ಪ್ರಯತ್ನಿಸಿದರು. ಕಳೆದ ಎರಡು ದಶಕಗಳಲ್ಲೇ ಇದು ಬೃಹತ್ ಪೋಲೀಸ್ ಕಾರ್ಯಾಚರಣೆಯಾಗಿತ್ತು.

ಡಂಕೆಲ್ ಪ್ರಸ್ತಾವನೆಗಳನ್ನು ಅನುಷ್ಠಾನಗೊಳಿಸಬಾರದೆಂದು ಆಗ್ರಹಿಸುವ ನಿರ್ಣಯವನ್ನು ಪಶ್ಚಿಮಬಂಗಾಳ ವಿಧಾನಸಭೆ ಫೆಬ್ರವರಿ 11 ರಂದು ಅಂಗೀಕರಿಸಿತು. ಕಾಂಗ್ರೆಸ್ ಅದನ್ನು ವಿರೋಧಿಸಿತು. ಕಾಂಗ್ರೆಸ್ ಶಾಸಕರಿಗೆ ಮನವಿ ಮಾಡಿಕೊಡಲು ನಾವು ಪ್ರಯತ್ನಿಸಿದೆವು. ಆದರೆ ಅವರ ತುಟಿ ಮೇಲೆ ಇದ್ದದ್ದು ಮನಮೋಹನಸಿಂಗರ ಆರ್ಥಿಕ ನೀತಿಗಳು ಮಾತ್ರ; ಪೂರ್ಣ ತರ್ಕವನ್ನು ಕೇಳಲೂ ಅವರು ಸಿದ್ಧರಿರಲಿಲ್ಲ. ಡಂಕೆಲ್ ಪ್ರಸ್ತಾವಗಳಲ್ಲಿ ಅಡಕವಾಗಿರುವ ಅಪಾಯಗಳನ್ನು ಅರಿತುಕೊಳ್ಳುವುದು ಅಗತ್ಯವಾಗಿತ್ತು. ತನಗೆ ಕರಗತವಾಗಿರುವ ಸಂಸ್ಕೃತಿಗೆ ಅನುಗುಣವಾಗಿ ಕಾಂಗ್ರೆಸ್ ಸದಸ್ಯರು ನಿರ್ಣಯವನ್ನು ವಿರೋಧಿಸುವ ಹೆಸರಿನಲ್ಲಿ ಅರಾಜಕತೆ ಹುಟ್ಟಿಸಿದರು.


ಪ್ರಜಾಸತ್ತಾತ್ಮಕ ಕೊರಿಯಾದಲ್ಲಿ

1994 ಮೇ ನಲ್ಲಿ ನಾನು ಕೋರಿಯಾ ಜನತಾ ಗಣರಾಜ್ಯಕ್ಕೆ (ಡಿಪಿಆರ್‌ಕೆ - ಉತ್ತರಕೊರಿಯಾ) ಭೇಟಿ ನೀಡಿದೆ. ಪಾಲಿಟ್‌ಬ್ಯೂರೋ ಸದಸ್ಯ ಅನಿಲ್‌ಬಿಸ್ವಾಸ್ ನನ್ನ ಜತೆಯಲ್ಲಿದ್ದರು. ನಾವು ಮೇ 4 ರಂದು ಬ್ಯಾಂಕಾಕ್‌ಗೆ ಹೊರಟೆವು. ಅಲ್ಲಿಂದ ಚೀನಾ ರಾಜಧಾನಿ ಬೀಜಿಂಗ್‌ಗೆ ಹೋದೆವು.

ಚೀನಾ ರಾಷ್ಟ್ರೀಯ ಮಂಡಳಿಯ ನಾಯಕರ ಜತೆ ನಾವು ಮೇ 5 ರಂದು ದೀರ್ಘ ಸಮಾಲೋಚನೆ ನಡೆಸಿದೆವು. ಮೇ 7 ರಂದು ಪ್ಯೋಂಗ್ ಯಾಂಗ್ ತಲುಪಿದೆವು. ಕೊರಿಯಾ ಕಾರ್ಮಿಕ ಪಕ್ಷ ನಮ್ಮನ್ನು ಆಮಂತ್ರಿಸಿತ್ತು.

ಅಮೆರಿಕ ಸಾಮ್ರಾಜ್ಯಶಾಹಿಗಳ ತಾಳಕ್ಕೆ ತಕ್ಕಂತೆ ಕುಣಿಯುವ ದಕ್ಷಿಣ ಕೊರಿಯಾ ನೆರೆಯಲ್ಲಿದ್ದರೂ ಅಭಿವೃದ್ಧಿ ಹೊಂದುತ್ತಿದ್ದ ಉತ್ತರ ಕೊರಿಯಾದ ವ್ಯವಸ್ಥೆಯಿಂದ ನಾವು ಕಲಿಯಬೇಕಾದದ್ದು ತುಂಬಾ ಇದೆ. ಅಧ್ಯಕ್ಷ ಕಿಮ್ ಅಲಸಂಗ್ ನಗರದಲ್ಲಿ ಇಲ್ಲದ್ದಿದ್ದರಿಂದ ಅವರ ಭೇಟಿ ಸಾಧ್ಯವಾಗಲಿಲ್ಲ. ಅದೇ ವರ್ಷ ಜುಲೈ 9 ರಂದು ಅವರು ನಿಧನರಾದರು. ಪ್ಯೋಂಗ್‌ಯಾಂಗ್‌ನಲ್ಲಿ ನಾನು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದೆ. ಅನಿಲ್ ಮತ್ತು ನಾನು ಅಲ್ಲಿ ವ್ಯಾಪಕ ಪ್ರವಾಸ ಮಾಡಿದೆವು. 170 ಮೀಟರ್ ಎತ್ತರದ 'ಟವರ್ ಆಫ್ ಜೂಪಾ'ದ ಸೌಂದರ್ಯ ಇನ್ನೂ ನನ್ನ ಮನಸ್ಸಿನಲ್ಲಿ ಹಸಿರಾಗಿದೆ. ಆದರ ತಳದ ಫಲಕದ ಮೇಲೆ

ಮಾಸದ ನೆನಪುಗಳು
(ಒಂದು ರಾಜಕೀಯ ಆತ್ಮಕಥನ)



ಜ್ಯೋತಿಬಸು ಆತ್ಮಕಥನ

ಕನ್ನಡಕ್ಕೆ: ವಿಶ್ವಕುಂದಾಪುರ

ಧಾರವಾಹಿ: 90

'ಜನತೆಯೇ ಪರಮೋನ್ನ' ಎಂದು ಬರೆದಿದ.

ಉಭಯ ಕೊರಿಯಾಗಳ ಮನುಷ್ಯ ವಾಸವಿಲ್ಲದ ಪ್ರದೇಶಕ್ಕೂ ನಾವು ಭೇಟಿ ಕೊಟ್ಟೆವು. ಕೊರಿಯಾ ವಿಭಜನೆಗೆ ಸಾಕ್ಷಿಯಾಗಿ ದೊಡ್ಡ ಗೋಡೆ ಅಲ್ಲಿತ್ತು. ಆದರ ತುದಿಯಲ್ಲಿ ಅಮೆರಿಕದ ಸೈನಿಕರಿದ್ದರು. ಅವರಿಗೆ ಅಲ್ಲಿ ನಿಲ್ಲುವ ಹಕ್ಕನ್ನು ಯಾರಿಗೆ ಕೊಟ್ಟರೆಂಬುದು ಊಹೆಗೂ ನಿಲುಕದ ವಿಷಯವಾಗಿದೆ. ಕೊರಿಯಾ ಗಣರಾಜ್ಯದ ಸೇನಾ ಮುಖ್ಯಸ್ಥರು ನಮಗೆ ಭೋಜನಕೂಟ ಏರ್ಪಡಿಸಿದ್ದರು. ಎರಡೂ ಕೊರಿಯಾಗಳು ವಿಲೀನಗೊಳ್ಳಬೇಕು, ಗೋಡೆ ಕುಸಿಯಬೇಕೆಂಬುದು ಈ ಕಡೆಯ ಜನರ ಬಯಕೆಯಾಗಿದೆ ಎಂದು ನನಗೆ ತಿಳಿಸಲಾಯಿತು. ಬರ್ಲಿನ್ ಗೋಡೆ ಕುಸಿತದಿಂದ ಅಮೆರಿಕ ಖುಷಿಪಟ್ಟಿತ್ತು, ಆದರೆ ಕೊರಿಯಾಗಳು ವಿಭಜಿತಾಗಿಯೇ ಇರಬೇಕೆಂದು ಅದು ಬಯಸಿತ್ತು. ಇದು ಸಾಮ್ರಾಜ್ಯಶಾಹಿಗಳ ವಿಲಕ್ಷಣ ತಂತ್ರವಾಗಿದೆ. ಆದರೆ ದುರದೃಷ್ಟವಶಾತ್, ಬಹಳಷ್ಟು ಪತ್ರಿಕೆಗಳು ಈ ಉದಾಹರಣೆಗಳನ್ನು ಗಮನಕ್ಕೆ ತೆಗೆದುಕೊಳ್ಳಲಿಲ್ಲ!

(ಮುಂದುವರಿಯುವುದು)

17ನೇ ಮಹಾಧಿವೇಶನಕ್ಕೆ ಭರದ ಸಿದ್ಧತೆ

ಹೈದರಾಬಾದ್ ಸಿಪಿಐ(ಎಂ)ನ 17ನೇ ಮಹಾಧಿವೇಶನವನ್ನು ನಡೆಸಲು ಸಿದ್ಧಗೊಳ್ಳುತ್ತಿದೆ. ಸ್ವಾಗತ ಸಮಿತಿಯ ಅಡಿಯಿರುವ 23 ಉಪಸಮಿತಿಗಳು ಮಹಾಧಿವೇಶನಕ್ಕೆ ಭರದ ಸಿದ್ಧತೆಯಲ್ಲಿ ತೊಡಗಿವೆ. ಹಲವಾರು ಸಂಗಾತಿಗಳು ಹಗಲು ರಾತ್ರಿಯೆನ್ನದೆ ದುಡಿಯುತ್ತಿದ್ದಾರೆ. ಹೈದರಾಬಾದ್-ಸಿಕಂದರಬಾದ್ ಅವಳಿ ನಗರಗಳಲ್ಲಿ ಈಗಾಗಲೇ ಗೋಡೆಬರಹಗಳು, ಪ್ರಚಾರ ಫಲಕಗಳು ಜನಗಳ ಗಮನ ಸೆಳೆಯುತ್ತಿವೆ.

ಮಹಾಧಿವೇಶನದ ಸಿದ್ಧತೆಯ ಅಂಗವಾಗಿ ಎಂಟು ವಿಚಾರ ಸಂಕಿರಣಗಳನ್ನು ರಾಜ್ಯಮಟ್ಟದಲ್ಲಿ ನಡೆಸಲಾಗಿದೆ. ಇದರಲ್ಲಿ ಬುದ್ಧಿಜೀವಿಗಳು, ನೌಕರರು, ವಿದ್ಯಾರ್ಥಿಗಳು ಮತ್ತು ಇತರ ವಿಭಾಗದ ಜನಗಳು ಭಾಗವಹಿಸಿದ್ದಾರೆ. ಜಿಲ್ಲಾ ಮತ್ತು ಡಿವಿಜನ್ ಮಟ್ಟಗಳಲ್ಲೂ ಇಂತಹ ವಿಚಾರಸಂಕಿರಣಗಳು ನಡೆದಿವೆ.

ಮಹಾಧಿವೇಶನಕ್ಕೆ ಹಣಸಂಗ್ರಹದ ಕೆಲಸ ಪೂರ್ಣಗೊಳ್ಳುತ್ತಿದೆ ಎಂದು ಸ್ವಾಗತಸಮಿತಿಯ ಪ್ರಧಾನ ಕಾರ್ಯದರ್ಶಿ ಎಂ.ವಿ.ನರಸಿಂಹ ರೆಡ್ಡಿ ಹೇಳಿದ್ದಾರೆ. ಪಕ್ಷದ ಕಾರ್ಯಕರ್ತರು ಮನೆ-ಮನೆಗೆ ಹೋಗುತ್ತಿದ್ದಾರೆ. ಸಿಪಿಐ(ಎಂ)ನ 17ನೇ ಮಹಾಧಿವೇಶನ ಮಹತ್ವದ ಕುರಿತು ಲಕ್ಷಾಂತರ

ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಪಾರಂಪರಿಕ ಕೆಲಸ-ಉದ್ಯೋಗಗಳಲ್ಲಿ ತೊಡಗಿರುವವರು ಹಸಿದು ಕಂಗಾಲಾಗಿದ್ದಾರೆ. ಕೃಷಿ ಮತ್ತು ಗ್ರಾಮೀಣ ಕೆಲಸಗಾರರು ನಗರಕ್ಕೆ ವಲಸೆ ಹೋಗುತ್ತಿದ್ದಾರೆ. ಯುವಜನಗಳಿಗೆ ಉದ್ಯೋಗದ ಭರವಸೆಯಿಲ್ಲ. ಕಾರ್ಮಿಕರು ಕೆಲಸ ಕಳೆದುಕೊಳ್ಳುತ್ತಿದ್ದಾರೆ.

ಸ್ವಾಗತ ಸಮಿತಿಯ ಅಡಿಯಿರುವ 23 ಉಪಸಮಿತಿಗಳು ಮಹಾಧಿವೇಶನಕ್ಕೆ ಭರದ ಸಿದ್ಧತೆಯಲ್ಲಿ ತೊಡಗಿವೆ. ಹಲವಾರು ಸಂಗಾತಿಗಳು ಹಗಲು ರಾತ್ರಿಯೆನ್ನದೆ ದುಡಿಯುತ್ತಿದ್ದಾರೆ.

ಮಧ್ಯಮ ವರ್ಗಗಳ ಜನ, ಸಣ್ಣ ಉದ್ಯಮಗಳೂ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಇಂತಹ ಕಠಿಣ ಪರಿಸ್ಥಿತಿಯಲ್ಲೂ ಪಕ್ಷದ ಮುಖಂಡರು ಮತ್ತು ಕಾರ್ಯಕರ್ತರು ಜನರ ಬಳಿ ಹಣ ಸಹಾಯಕ್ಕೆಂದು


24 ರಂದು ಬೃಹತ್ ರ್‍ಯಾಲಿ ಹೈದರಾಬಾದ್‌ನ ಎನ್‌ಟಿಆರ್ ಸ್ಟೇಡಿಯಂ(ಇಂದಿರಾಪಾರ್ಕ್)

ಹೋದಾಗ ಜನಗಳ ಸ್ಪಂದನ ನಿರೀಕ್ಷೆ ಮೀರಿ ಸಕಾರಾತ್ಮಕವಾಗಿದೆ. ಜನಗಳು ತಮ್ಮ ಸಂಕಟಗಳನ್ನು ಹೇಳುತ್ತಲೇ ತಮ್ಮ ಶಕ್ತ್ಯಾನುಸಾರ ಕಾಣಿಕೆಗಳನ್ನು ನೀಡಿದ್ದಾರೆ.

ಆಂಧ್ರಪ್ರದೇಶದ ವಿಜಯವಾಡಾದಲ್ಲಿ ಈ ಹಿಂದೆ 1982 ರಲ್ಲಿ ಮಹಾಧಿವೇಶನ ನಡೆದಾಗ ಎಂಟು ಜಿಲ್ಲೆಗಳಲ್ಲಿ ಮಾತ್ರ ಪಕ್ಷ ಅಸ್ತಿತ್ವ ಪಡೆದಿತ್ತು. [illegible] ಮಹಾಧಿವೇಶನದ ವೇಳೆಗೆ ಹಲವಾರು [illegible] ಹೋರಾಟಗಳು, ತಿಳುವಳಿಕೆಗಳ ಮೂಲಕ ರಾಜ್ಯದ ಎಲ್ಲಾ ಜಿಲ್ಲೆಗಳಿಗೆ ಹರಡಿದೆ. ವೀರ ತೆಲಂಗಾಣಾ ಹೋರಾಟದ ರಾಜ್ಯದ ರಾಜಧಾನಿಯಲ್ಲಿ 17ನೇ ಮಹಾಧಿವೇಶನ ನಡೆಯುತ್ತಿರುವುದು ವಿಶೇಷ ಮಹತ್ವ ಹೊಂದಿದೆ ಎಂದು ಸ್ವಾಗತಸಮಿತಿಯ ಪ್ರಧಾನ ಕಾರ್ಯದರ್ಶಿ ನರಸಿಂಹ ರೆಡ್ಡಿಯವರು ಹೇಳುತ್ತಾರೆ. ಇವರು ಸ್ವತಃ ಆ ಭವ್ಯ ಹೋರಾಟದ ಒಬ್ಬ ಮುಖಂಡರು.

ಐದು ಜಾಥಾಗಳು

17ನೇ ಮಹಾಧಿವೇಶನದ ಮಹತ್ವವನ್ನು ಬಿಂಬಿಸುವ ಐದು ಜಾಥಾಗಳು ಈಗ ರಾಜ್ಯಾದ್ಯಂತ ಸಂಚರಿಸುತ್ತಿವೆ. ಐದು ಕೇಂದ್ರಗಳಲ್ಲಿ ಈ ಜಾಥಾಗಳ ಉದ್ಘಾಟನೆಯಾಯಿತು. ಹೈದರಾಬಾದಿನಲ್ಲಿ ಇದನ್ನು


ಜಾಥಾ ಉದ್ಘಾಟಿಸಿದ ಯಚೂರಿ

ಪೊಲಿಟ್‌ಬ್ಯೂರೋ ಸದಸ್ಯ ಸೀತಾರಾಂ ಯೆಚೂರಿ ಉದ್ಘಾಟಿಸಿದರು. ಇದರಲ್ಲಿ 30 ಕಲಾವಿದರಿದ್ದು ಮಾರ್ಚ್ 22 ರ ವರೆಗೆ ಇದು ಈ ಅವಳಿನಗರಗಳಲ್ಲಿ ಸಂಚರಿಸುತ್ತಿದೆ. ಇನ್ನೊಂದು ಜಾಥಾವನ್ನು ಶ್ರೀಕಾಕುಳಂ ಜಿಲ್ಲೆಯ ಸೋಮಪೇಟೆಯಲ್ಲಿ ಸಿಪಿಐ(ಎಂ) ಕೇಂದ್ರ ಸಮಿತಿ ಸದಸ್ಯ ಪತೂರು ರಾಮಯ್ಯ ಮತ್ತು ತಿರುಪತಿಯಲ್ಲಿ ರಾಜ್ಯ ಸೆಕ್ರೆಟಾರಿಯೇಟ್ ಸದಸ್ಯ ವಿ.ಶ್ರೀನಿವಾಸರಾವ್ ಮಾರ್ಚ್ 12 ರಂದು ಉದ್ಘಾಟಿಸಿದರು. ಚಿತ್ತೂರು ಜಾಥಾವನ್ನು ಇನ್ನೊಬ್ಬ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಎಂ.ಎ.ನಫೂರ್ ಹಾಗೂ ವಾರಂಗಲ್ ಜಾಥಾವನ್ನು ಕೇಂದ್ರ ಸಮಿತಿ ಸದಸ್ಯ ತಮ್ಮಿನೇನಿ ವೀರಭದ್ರಂ ಉದ್ಘಾಟಿಸಿದರು. ಈ ಎಲ್ಲಾ ಜಾಥಾಗಳು ಮಾರ್ಚ್ 23 ರಂದು ಹೈದರಾಬಾದ್ ತಲುಪಲಿವೆ.

ಗುಜರಾತ್ ಘಟನೆ

ಎಡಪಕ್ಷಗಳಿಂದ ರಾಷ್ಟ್ರೀಯ ಏಕತಾದಿನವಾಗಿ ಬೃಹತ್ ಪ್ರತಿಭಟನೆ-ಸಭೆ

ದೇಶದ ಸಂವಿಧಾನ, ನ್ಯಾಯಾಲಯಗಳನ್ನು ಧಿಕ್ಕರಿಸಿ, ಅಯೋಧ್ಯೆಯ ವಿವಾದಿತ ಪ್ರದೇಶದಲ್ಲಿ ಮಂದಿರ ನಿರ್ಮಿಸಲು ವಿಶ್ವಹಿಂದು ಪರಿಷತ್ ಹಾಗೂ ಸಂಘ ಪರಿವಾರ ನಡೆಸುತ್ತಿರುವ ಪ್ರಯತ್ನಗಳ ವಿರುದ್ಧ ಹಾಗೂ ಗೋದ್ರಾ ಘಟನೆಯ ನೆಪದಲ್ಲಿ ಗುಜರಾತ್‌ನಲ್ಲಿ ಅಮಾಯಕರ, ಮುಗ್ದರ, ಅಲ್ಪಸಂಖ್ಯಾತರ ಸಜೀವದಹನದಂತಹ ಅಮಾನವೀಯ ಕೃತ್ಯಗಳನ್ನು ತಡೆಗಟ್ಟುವಲ್ಲಿ ವಿಫಲವಾಗಿರುವ ಬಿಜೆಪಿ ನೇತೃತ್ವದ ಗುಜರಾತ್ ರಾಜ್ಯ ಸರ್ಕಾರವನ್ನು ವಜಾಗೊಳಿಸಬೇಕೆಂದು ಒತ್ತಾಯಿಸಿ ಸಿಪಿಐ ಹಾಗೂ ಸಿಪಿಐ(ಎಂ) ಪಕ್ಷಗಳ ನೇತೃತ್ವದಲ್ಲಿ ಸಾವಿರಾರು ನಾಗರೀಕರು ಪ್ರತಿಭಟನಾ ಮೆರವಣಿಗೆ ನಡೆಸಿದರು.

ನಗರದ ಚಿಕ್ಕಲಾಲ್‌ಬಾಗ್‌ನಿಂದ ಸಂಜೆ ಆರಂಭಗೊಂಡ ಮೆರವಣಿಗೆಯು ನಗರದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ಟೌನ್‌ಹಾಲ್ ತಲುಪಿತು. ಕಪ್ಪು ಉದ್ದನೆ ಜುಬ್ಬ, ಕೇಸರಿ ಶಲ್ಯ ಕೈಯಲ್ಲಿ ಕಮಲ, ತ್ರಿಶೂಲ, ಹಿಡಿದು ಹಣೆಗೆ ವಿಭೂತಿ, ಕುಂಕುಮ ಧರಿಸಿದ್ದ "ಕೋಮುವಾದಿ ಧರ್ಮಾಂಧ" ಎಂಬ ಭೂತ ಹಾದಿಯುದ್ದಕ್ಕೂ ಸಹಸ್ರಾರು ಜನರನ್ನು ಆಕರ್ಷಿಸಿತು.

ನಂತರ ನಡೆದ ಸಭೆಯಲ್ಲಿ ಪ್ರಸ್ತಾವಿಕವಾಗಿ ಮಾತನಾಡಿದ ಸಿಪಿಐ(ಎಂ) ಬೆಂಗಳೂರು ಜಿಲ್ಲಾ ಕಾರ್ಯದರ್ಶಿ ಕೆ. ಪ್ರಕಾಶ್ ಗೋದ್ರಾದಲ್ಲಿ ನಡೆದ ಬರ್ಬರ ಹತ್ಯಾಕಾಂಡದ ನೆಪದಲ್ಲಿ ಸಂಘ ಪರಿವಾರ ಶಕ್ತಿಗಳು, ಇಡೀ ಒಂದು ಜನಸಮುದಾಯವನ್ನೇ ದೇಶದ್ರೋಹಿಗಳೆಂಬ ಅಪಪ್ರಚಾರ ನಡೆಸಿ ಮಹಿಳೆಯರು, ಮಕ್ಕಳು, ವೃದ್ಧರೆಂದು ಲೆಕ್ಕಿಸದೇ 'ಸಜೀವದಹನ' ಕೃತ್ಯಗಳನ್ನು ನಡೆಸುತ್ತಿರುವುದು ಹೇಯ ಕೃತ್ಯವೆಂದು ಖಂಡಿಸಿದರು.

ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಎಸ್. ಸೂರ್ಯನಾರಾಯಣರಾವ್ ಮಾತನಾಡಿ ಜಾತಿ-ಧರ್ಮಗಳ ಹೆಸರಿನಲ್ಲಿ ಸಜೀವದಹನಗಳನ್ನು ನಡೆಸುತ್ತಿರುವವರೆಲ್ಲರೂ ದೇಶದ್ರೋಹಿಗಳೇ ಅಂತಹ ಮತಾಂಧರಿಗೆ ಜನತೆ ಸರಿಯಾದ ಪಾಠ ಕಲಿಸಬೇಕು. ಗೋದ್ರ ಘಟನೆಯನ್ನು ಎಲ್ಲಾ ಜನರು ಪಕ್ಷ-ಭೇದ ಮರೆತು ಖಂಡಿಸುತ್ತಿರುವಾಗ ಭಜರಂಗದಳ ಮತ್ತು ವಿಶ್ವ ಹಿಂದು ಪರಿಷತ್ ನಂತಹ ಸಂಘಟನೆಗಳು ಅಲ್ಪಸಂಖ್ಯಾತರು, ಮುಗ್ಧ ನಾಗರೀಕರ ಸಜೀವದಹನ, ಕಗ್ಗೊಲೆಗಳಲ್ಲಿ ತೊಡಗಿವೆ. ಇಂತಹ ಅಮಾನವೀಯ ಕೃತ್ಯಗಳನ್ನು ತಡೆಯುವಲ್ಲಿ ಬಿಜೆಪಿ ನೇತೃತ್ವದ ಗುಜರಾತ್ ಸರ್ಕಾರ ಹಾಗೂ ಕೇಂದ್ರದ ಎನ್.ಡಿ.ಎ. ಸರ್ಕಾರ ಸಂಪೂರ್ಣ ವಿಫಲವಾಗಿವೆ ಮಾತ್ರವಲ್ಲ ದೇಶವಿರೋಧಿ ಕೃತ್ಯಗಳಿಗೆ ನೇರ ಕುಮ್ಮಕ್ಕು ನೀಡುತ್ತಿರುವ ರಾಜ್ಯ ಸರ್ಕಾರವನ್ನು ಕೂಡಲೇ ವಜಾ ಮಾಡಬೇಕೆಂದು ಆಗ್ರಹಪಡಿಸಿದರು.

ಸಿ.ಪಿ.ಐ ರಾಜ್ಯ ಕಾರ್ಯದರ್ಶಿ ಎಂ.ಸಿ. ವೆಕಟರಾಮು ಮಾತನಾಡಿ ರಾಜ್ಯದಲ್ಲಿಯೂ ಕೋಮುವಾದಿ ಶಕ್ತಿಗಳು ಅಲ್ಲಲ್ಲಿ ಗಲಭೆಗಳನ್ನು ಸೃಷ್ಟಿಸಲು ಪ್ರಯತ್ನಿಸುತ್ತಿದ್ದು ಇದರ ವಿರುದ್ಧ ರಾಜ್ಯ ಸರ್ಕಾರ ಕಠಿಣ ಕ್ರಮ ಜರುಗಿಸಬೇಕು. ಮತ್ತು ಜಾತ್ಯಾತೀತ ಪರಂಪರೆಯನ್ನು ಕೋಮು ಸೌಹಾರ್ದತೆಯನ್ನು ಕಾಪಾಡಲು ಎಲ್ಲಾ ಸಮುದಾಯದವರು ಒಂದಾಗಿ ಶ್ರಮಿಸಲು ಕರೆನೀಡಿದರು.

ಪ್ರತಿಭಟನೆಯಲ್ಲಿ ಸಿಪಿಐ ನಾಯಕರೂ ಎ.ಐ.ಟಿ.ಯುಸಿ. ರಾಜ್ಯ ಪ್ರ. ಕಾರ್ಯದರ್ಶಿ. ಎಚ್.ವಿ. ಅನಂತಸುಬ್ಬರಾವ್, ಸಾಹಿತಿ, ಜಿ. ರಾಮಕೃಷ್ಣ, ಸಿಪಿಐ(ಎಂ) ರಾಜ್ಯ ಮುಖಂಡರಾದ ಜಿ.ಸಿ. ಬಯ್ಯಾರೆಡ್ಡಿ ಎಸ್. ವೈ. ಗುರುಶಾಂತ, ಅಲ್ಲದೇ ವಿವಿಧ ಸಂಘಟನೆಗಳ ಮುಖಂಡರುಗಳು ಪಾಲ್ಗೊಂಡಿದ್ದರು. ಕೊನೆಯಲ್ಲಿ ಕೆ.ಎಸ್. ವಿಮಲ ವಂದಿಸಿದರು.



ಪರಿಣಾಮಕಾರೀ ಬಂದ್ - ಸ್ತಬ್ಧಗೊಂಡ ಕೋಲಾರ

ವಿದ್ಯುತ್ ಕಡಿತ, ದರಗಳ ಏರಿಕೆ ವಿರುದ್ಧ ಹಲವು ಹಂತಗಳ ಚಳುವಳಿ ನಡೆಸಿದ ಸಿಪಿಐ(ಎಂ), ಅದರ ಮೇಲ್ ಹಂತವಾಗಿ ಕೋಲಾರ ಜಿಲ್ಲಾ ಬಂದ್‌ಗೆ ಕರೆ ನೀಡಿತು. ದೊರೆತ ಸ್ಪಂದನ ಅಪೂರ್ವ - ಅದರ ಒಂದು ವರದಿ.

ಅದು ಚಿನ್ನದ ಭೂಮಿ ಎಂಬುದು ಈಗ ಬರೀ ಆಡಂಬರದ ಮಾತು. ಕೋಲಾರ ಜಿಲ್ಲೆ ಜೀವ ಹಿಡಿದಿರುವುದೇ ಬಹುತೇಕ ಜಿಲ್ಲೆಗಳಂತೆ ಕೃಷಿಯನ್ನೇ ನಂಬಿ. ಅದನ್ನು ಬಿಟ್ಟರೆ ಮುಖ್ಯ ಕಸುಬು ಹೈನುಗಾರಿಕೆ. ಈ ಜಿಲ್ಲೆಯ ಜನ ಹಾಲು ಮತ್ತು ರೇಷ್ಮೆಗಳನ್ನೇ ನಂಬಿ ಬದುಕನ್ನು ಸಾಗಿಸುತ್ತಿದ್ದಾರೆ. ಅಂತು ರಾಜ್ಯಸರ್ಕಾರದ ಇತ್ತೀಚಿನ ವಿದ್ಯುತ್ ನೀತಿ ಈ ಭಾಗದ ಜನತೆಯ ಬದುಕಿಗೆ ಸಂಚಕಾರವನ್ನೇ ತಂದಿದೆ.

ಜನಸಮೂಹದ ಸಹನೆಗೆ ಮಿತಿ ಎಂಬುದಿರುತ್ತದೆ. ಆದರೆ ಸಹನೆಯ ಕಟ್ಟೆ ಒಡೆದರೆ ಏನಾದೀತೆಂಬುದನ್ನು ಇಡೀ ಜಿಲ್ಲೆಯಲ್ಲಿ ಯಶಸ್ವೀ 'ಬಂದ್' ಆಗುವ ಮೂಲಕ ಸರಕಾರದ 'ವಿದ್ಯುತ್ ನೀತಿಯನ್ನು ಪ್ರತಿಭಟಿಸಿ ಆ ಮೂಲಕ ಎಚ್ಚರಿಕೆಯನ್ನು ನೀಡಿದೆ.

ಕೋಲಾರ ಜಿಲ್ಲೆಯಲ್ಲಿ ನೀರಿನ ಮಟ್ಟ 500 ಅಡಿ ಗಿಂತ ಹೆಚ್ಚಿನ ಆಳಕ್ಕೆ ಕುಸಿದಿದೆ. ಕೊಳವೆ

ವಿದ್ಯುತ್ ನೀತಿಗೆ ವ್ಯಾಪಕ ಪ್ರತಿಭಟನೆ


ಬಾವಿ ತೋಡಿದರೂ ನೀರು ದೊರೆಯುವುದು ಕಷ್ಟಕರವಾಗಿದೆ. ಕೃಷಿಯನ್ನೇ ನಂಬಿದ ಅನೇಕ ರೈತರಂತೂ ಫಸಲಿಗೆ ಬೆಲೆ ಸಿಗದ ಸಾಲದ ಬಾದೆಯೊಂದಿಗೆ ನೀರಿನ ಸಮಸ್ಯೆಯೂ ಕಾರಣವಾಗಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಇಂತಹ ಸಂದರ್ಭದಲ್ಲಿ ರಾಜ್ಯ ಸರ್ಕಾರ ರೈತರಿಗೆ ಮಾರಕವಾಗುವಂತೆ ವಿದ್ಯುತ್ ನೀತಿಯನ್ನು ಜಾರಿ ತಂದರೆ ಅಪ್ರತ್ಯಕ್ಷವಾಗಿ ರೈತರ ಮರಣ ಶಾಸನವನ್ನೇ ಜಾರಿಗೆ ತಂದಿದೆ. ಇದನ್ನು ಮನಗಂಡ ಕೋಲಾರ ಜಿಲ್ಲೆಯ ಸಿಪಿಐ(ಎಂ) ಪಕ್ಷ, ಕರ್ನಾಟಕ ಪ್ರಾಂತ ರೈತ ಸಂಘಗಳು ಜಿಲ್ಲೆಯ ರೈತರ ವ್ಯಾಪಕ ಬೆಂಬಲದೊಂದಿಗೆ ಸರಕಾರದ ಈ ನೀತಿಯನ್ನು ಪ್ರತಿಭಟಿಸಿ ಜಿಲ್ಲೆಯನ್ನು ಪೂರ್ಣವಾಗಿ 'ಬಂದ್' ಮಾಡುವ ಮೂಲಕ ಸರಕಾರಕ್ಕೆ ಎಚ್ಚರಿಕೆಯನ್ನೂ ನೀಡಿದೆ.

ವಿದ್ಯುತ್ ದರ ಏರಿಕೆಯ ಪ್ರಸ್ತಾಪ ಕೈಬಿಡಬೇಕು, ಕೃಷಿ ನೀರಾವರಿ ಪಂಪ್‌ಸೆಟ್‌ಗಳಿಗೆ ಮೀಟರ್ ಅಳವಡಿಸುವ ನಿರ್ಧಾರ ವಾಪಾಸ್ ಪಡೆಯಬೇಕು. ಹಾಗೂ ಹಗಲು ಹೊತ್ತಿನಲ್ಲಿಯೇ ನಿರಂತರವಾಗಿ ಹನ್ನೆರೆಡು ತಾಸು ಕೃಷಿ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಪೂರೈಸಬೇಕೆಂದು ಆಗ್ರಹಿಸಿ ಕೋಲಾರ ಜಿಲ್ಲೆಯ ಪ್ರತಿ ತಾಲೂಕುಗಳಲ್ಲಿ ಯಶಸ್ವೀ ಬಂದ್ ಆಚರಿಸಿದೆ. ಮಾರಕ ವಿದ್ಯುತ್ ನೀತಿಯ ಪರಿಣಾಮವನ್ನು ಅನುಭವಿಸಿದ ಜನವರ್ಗ ಸ್ವಯಂ ಪ್ರೇರಣೆಯಿಂದ 'ಬಂದ್' ಪ್ರತಿಭಟನೆಯಲ್ಲಿ ಪಾಲ್ಗೊಂಡು ಸಿಪಿಐ(ಎಂ) ಹಾಗೂ ಕರ್ನಾಟಕ ಪ್ರಾಂತ ರೈತ ಸಂಘಗಳ ಹೋರಾಟದ ಭಾಗವಾಗಿ ಗುರುತಿಸಿಕೊಳ್ಳಲು ಮುಂದಾಗಿರುವುದು ಗುರುತಿಸಬೇಕಾದ ಸಂಗತಿ.

ಜಿಲ್ಲಾ ಕೇಂದ್ರವಾದ ಕೋಲಾರದಲ್ಲಿ ಬೆಳಗಿನಿಂದ ಸಂಜೆಯವರೆಗೆ ಬಂದ್ ಜಾರಿಯಲ್ಲಿದ್ದು ಬಸ್‌ಗಳ ಓಡಾಟ ಸಂಪೂರ್ಣ ಸ್ಥಗಿತಗೊಂಡು, ಅಂಗಡಿ ಮುಂಗಟ್ಟುಗಳ ವ್ಯಾಪಾರ ವಹಿವಾಟು ನಿಂತುಹೋಗಿ ನಗರಾದ್ಯಂತ ಮೌನ ಆವರಿಸಿ ಸರಕಾರಕ್ಕೆ ಪ್ರತಿಭಟನೆ ವ್ಯಕ್ತವಾಗಿದೆ.

ಪುಟ 8 ಕ್ಕೆ

ಸಂಪೂರ್ಣ ಬಂದ್ ಆಗಿರುವ ಅಂಗಡಿ ಮಳಿಗೆಗಳು



ಕೋಲಾರ: ವಾರದಲ್ಲಿ ಎರಡು ಬಂದ್ ಯಾತಕ್ಕಾಗಿ?

ಜನರ ಜೀವ ಉಳಿಸಲು ಬಂದ್ ಬಡ ಜೀವ ತೆಗೆಯಲು ಇನ್ನೊಂದು ಏನವು?

ಒಂದು ವಾರದಲ್ಲೇ ಎರಡು ಬಂದ್‌ಕಂಡಿದ್ದು ಕೋಲಾರದ ಜನತೆ. ಕೃಷಿಯೇ ಪ್ರಧಾನವಾಗಿರುವ ಕೋಲಾರ ಜಿಲ್ಲೆಯಲ್ಲಿ ಎಲ್ಲರಂತೆ ಸಾಮಾನ್ಯವಾದ ಎಲ್ಲಾ ಚಳುವಳಿಯ ಪರಿಣಾಮ ಎದುರಿಸುತ್ತಿರುವ ಇಲ್ಲಿನ ರೈತರು ವಿಶೇಷವಾಗಿ 500 ಅಡಿ ಭೂಮಿ ಯೊಳಕ್ಕಿಳಿದರೂ ನೀರು ಸಿಕ್ಕದ, ಬೆಳೆ ದಕ್ಕದ ಗಂಭೀರ ಸ್ಥಿತಿ ಎದುರಿಸುತ್ತಿದ್ದಾರೆ. ಗಾಯದ ಮೇಲೆ ಬರೆ ಎಳೆದಂತೆ ವಿದ್ಯುತ್‌ನ ಸರಬರಾಜು ಅವಧಿ ಕಡಿತ. ದರ ಹೆಚ್ಚಳದ ಸರ್ಕಾರದ ನಿರ್ಧಾರದಿಂದ ತತ್ತರಿಸುತ್ತಿದ್ದಾರೆ. ಕಾಂಗ್ರೆಸ್ ಬಿಜೆಪಿ ಮತ್ತಿತರೆ ಪಕ್ಷಗಳು ಇದರತ್ತ ಕಿಂಚಿತ್ತೂ ಗಮನಹರಿಸಲು ಸಿದ್ದರಿಲ್ಲದಿರುವಾಗ, ಈ ಬವಣೆಗಳ ವಿರುದ್ಧ ಸಮರಸಾರಿದ್ದು ಸಿಪಿಐ(ಎಂ) ಪಕ್ಷ. ಅನೇಕ ಮೆರವಣಿಗೆ - ಧರಣಿಯಾದರೂ ಎಚ್ಚರಗೊಳ್ಳದ ಆಳುವವರ ವಿರುದ್ಧ 'ಕೋಲಾರ ಬಂದ್' ಗೆ ನೀಡಿದ ಕರೆಗೆ ಜನತೆಯ ಸ್ಪಂದನ ಅಭೂತಪೂರ್ವ ಸ್ವಯಂ ಪ್ರೇರಣೆಯಿಂದ ಬಂದ್ ಗ್ರಾಮಾಂತರಗಳಲ್ಲಿಯೂ ನಡೆದಿದೆ. ಇಡೀ ಜಿಲ್ಲೆಯೇ ಪೂರ್ಣ ಬಂದ್ ಆಚರಿಸಿದೆ. ಆದರೆ ಇಂತಹ ಯಾವುದೇ ಸಮಸ್ಯೆಗೆ ಕಿಂಚಿತ್ತೂ ಗಮನಹರಿಸದ ಬಿಜೆಪಿ ಮಾರ್ಚ್ 1 ರಂದು ಗೋದ್ರಾ ಘಟನೆಗಾಗಿ ಬಂದ್‌ಗೆ ಕರೆನೀಡಿತು. ಮರಗಳನ್ನು ಕಡಿದು, ಬಸ್‌ಗೆ ರಸ್ತೆಯಲ್ಲಿ ಟೈರ್‌ಗಳಿಗೆ ಬೆಂಕಿ ಇಟ್ಟು ಉದ್ರಿಕ್ತಗೊಳಿಸಲು ಯತ್ನಿಸಿತು. ಬಂಗಾರುಪೇಟೆಯಲ್ಲಿ ಲೂಟಿ, ಆಸ್ತಿ ಹಾನಿ ಆಗಿದೆ. ಜನರನ್ನು ಉಳಿಸಲು ಸಿಪಿಐ(ಎಂ) ಹೋರಾಡುತ್ತಿದ್ದಾರೆ. ಕೊಳ್ಳಿ ಇಕ್ಕಲು ಹವಣಿಸಿತು ಬಿಜೆಪಿ ಪರಿವಾರ ಈ ಬಗ್ಗೆ ಜನ ಮಾತನಾಡಿಕೊಳ್ಳುತ್ತಿರುವುದು ಕಂಡುಬಂದಿದೆ.

ರೈಲ್ವೆ ಬಜೆಟ್



ರಾಜ್ಯಕ್ಕೆ ಅನ್ಯಾಯ

ಈ ಸಾಲಿನ ರೈಲ್ವೆ ಬಜೆಟ್ ಕರ್ನಾಟಕ ಪಾಲಿಗೆ ತೃಪ್ತಿ ತಂದಿದೆ ಎಂದು ಬಿಜೆಪಿ ನಾಯಕರು ತೇಗುತ್ತಿದ್ದಾರೆ. ಆದರೆ ಈ ಬಜೆಟ್ ಜನರ ಮೇಲೆ ಅಧಿಕಹೊರೆ ಹೇರಿದ್ದು ಮಾತ್ರವಲ್ಲ ಕರ್ನಾಟಕದ ರೈಲ್ವೇ ಅಭಿವೃದ್ಧಿಗೆ ಕೊಡುಗೆ ನೀಡಿಲ್ಲ. ಅದರ ಒಂದು ಪ್ರಸ್ತಾವಿತ ನೋಟ

ನಿರೀಕ್ಷಿಸಿದಂತೆಯೇ ಆಯಿತು. ಈ ಬಾರಿಯೂ ರೈಲ್ವೆ ಬಜೆಟ್‌ನಲ್ಲಿ ರಾಜ್ಯಕ್ಕೆ ಅನ್ಯಾಯವಾಗಿದೆ. ಹುಬ್ಬಳ್ಳಿ-ಬೆಂಗಳೂರು ನಡುವೆ ಜನಶತಾಬ್ಧಿ ಆರಂಭಿಸುವ ಘೋಷಣೆಯೊಂದು ಬಿಟ್ಟಾರೆ ಉಳಿದೆವಲ್ಲ ಸವಕಲು. ಬೆಂಗಳೂರಿನಿಂದ ಐದು ಹೊಸ ರೈಲುಗಳ ಆರಂಭಿಸುವುದಾಗಿ ಹೇಳಿದ್ದರೂ ಅವು ವಾರಕ್ಕೊಮ್ಮೆ ಮಾತ್ರ.

ಭಾರೀ ಘೋಷಣೆ

ಹೊಸ ರೈಲುಗಳ ಘೋಷಣೆ ಆಗಿದ್ದರೂ ಹೊಸ ಹಳಿಗಳನ್ನು ಹಾಕುವ ಬಗ್ಗೆ ಯಾವುದೇ ಪ್ರಸ್ತಾಪವಿಲ್ಲ. ಅಂದರೆ ಈಗಿರುವ ಹಳಿಗಳ ಮೇಲೆಯೆ ಹೊಸ ರೈಲುಗಳ ಸಂಚಾರ. ಒತ್ತಡ ಜಾಸ್ತಿಯಾಗಿ ಅಪಘಾತದ ಸಂಭವ ಒಂದೆಡೆಯಾದರೆ, ರೈಲು ವೇಗವಾಗಿ ಚಲಿಸಲು ಸಾಧ್ಯವಾಗುವುದಿಲ್ಲ.

ಉದಾಹರಣೆಗೆ ಮೈಸೂರು - ಬೆಂಗಳೂರು ರೈಲ್ವೆ ಹೆದ್ದಾರಿ ಪುರಾತನವಾದದ್ದು. ಇತ್ತೀಚಿಗೆ ಹೊಸ ರೈಲುಗಳೂ ಚಲಿಸುತ್ತಿವೆ. ಆದರೆ ಇನ್ನೂ ಕೂಡಾ ಜೋಡಿ ಮಾರ್ಗದ ರಚನೆ ಆಗಿಲ್ಲ. ಬಹಳ ವರ್ಷಗಳ ಹಿಂದೆಯೇ ಇದರ ಸರ್ವೆ ಆಗಿತ್ತು. ಬೆಂಗಳೂರು ರಾಮನಗರದವರೆಗೆ ಮಾತ್ರ ಜೋಡಿ ಮಾರ್ಗ (2 ಲೈನು - ಹೋಗಲಿಕ್ಕೆ ಒಂದು ಲೈನು, ಬರಲು ಒಂದು ಲೈನು) ಮಾಡಿದರೂ ಮೈಸೂರಿಗೆ 2 ಗಂಟೆಯಲ್ಲಿ ಪ್ರಯಾಣಿಸಬಹುದು ಎಂದು ಅಂದಾಜಿದೆ. ಮತ್ತು ರಾಮನಗರದವರೆಗೆ ಜೋಡಿ ಮಾರ್ಗ ಆದುದೇ ಆದರೆ, ಬೆಂಗಳೂರಿನ ಮೇಲೆ ಜನವಸತಿ ಒತ್ತಡ ಕಡಿಮೆ ಆಗುವುದು ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಕೆಲವು ಪ್ರದೇಶಗಳ ಬೆಳವಣಿಗೆಗೆ ಸಹಾಯವಾಗುವುದು.

ಈಗಾಗಲೇ ಕೆಂಗೇರಿವರೆಗೆ ಇರುವ ಜೋಡಿ ಮಾರ್ಗವನ್ನು ರಾಮನಗರದವರೆಗೆ ಮುಂದುವರಿಸುವುದು ಕಷ್ಟವೇನಲ್ಲ. ಆದರೆ ಇಚ್ಛಾಶಕ್ತಿ ಬೇಕು. ಸಾಕಷ್ಟು ಹಣ ಮಂಜೂರು ಮಾಡಬೇಕು. ಆದರೆ ಬಜೆಟ್‌ನಲ್ಲಿ ಯಾವುದೇ ಪ್ರಸ್ತಾಪವಿಲ್ಲ.

ಹಾಸನ-ಮಂಗಳೂರು ಬ್ರಾಡ್‌ಗೇಜ್ ನಿರ್ಮಾಣಕ್ಕೆ 1993ರಲ್ಲಿ ಯೋಜನಾ ಆಯೋಗದಿಂದ ಒಪ್ಪಿಗೆ ಪಡೆಯಲಾಗಿತ್ತು. ಈ ಯೋಜನೆಯನ್ನು ಜಾರಿಗೊಳಿಸುವುದಕ್ಕೆಂದು 1994ರಲ್ಲಿ ಮೀಟರ್‌ಗೇಜನ್ನು ಕಿತ್ತುಹಾಕಲಾಯಿತು. ಈಗ ಅತ್ತ ಮೀಟರ್‌ಗೇಜೂ ಇಲ್ಲದೇ, ಇತ್ತ ಬ್ರಾಡ್‌ಗೇಜೂ ಇಲ್ಲದೇ, ಪ್ರಯಾಣಿಕರು ದುಬಾರಿಯಾದ ಬಸ್ ಮೇಲೆ ಅವಲಂಬಿತರಾಗಬೇಕಾಗಿದೆ. ಖಾಸಗೀ ಬಸ್ ಮಾಲಿಕರಿಗೆ ಆಪ್ತರಾದ ಬಿಜೆಪಿ ಸರ್ಕಾರ ಅವರ ಸಹಾಯಕ್ಕೆಂದೇ ಈ ಯೋಜನೆಯನ್ನು ನಿದಾನಗೊಳಿಸುತ್ತಿದೆ ಎಂಬ ದೂರುಗಳು ಇವೆ. ಹಿಂದೆ ಕೊಂಕಣ ರೈಲ್ವೆ ಸ್ಥಾಪನೆಗೆ ವಿಳಂಬವಾದುದೂ ಇದೇ ಕಾರಣಕ್ಕೆ. ಇದರ ಜಾರಿಗಾಗಿ ದಕ್ಷಿಣ ಕನ್ನಡ ಜಿಲ್ಲೆಯ ಜನತೆ ನಿರಂತರ ಹೋರಾಟ ನಡೆಸಬೇಕಾಯಿತು.

ಹಾಸನ - ಮಂಗಳೂರು ಬ್ರಾಡ್‌ಗೇಜ್ ಪರಿವರ್ತನೆ ಆದಲ್ಲಿ, ಕೊಂಕಣ ರೈಲ್ವೆ ಪ್ರಯಾಣಿಕರ ಸಂಖ್ಯೆಯೂ ಹೆಚ್ಚಾಗಲಿದೆ.

ಹಿಂದುಳಿದ ಪ್ರದೇಶಗಳಿಗೆ ರೈಲು ಮಾರ್ಗ ಇಲ್ಲ

ಇನ್ನೊಂದು ತುರ್ತಾಗಿ ಆಗಬೇಕಾಗಿರುವ ರೈಲು ಮಾರ್ಗ ಗುಲ್ಬರ್ಗ-ಬೀದರ್ ಮಾರ್ಗ. ಈ ಬಾರಿ

ಬೆಂಗಳೂರಿನಿಂದ ನೇರವಾಗಿ ಬೀದರ್‌ಗೆ 725 ಕಿ.ಮೀ. ಬೀದರ್ ಜನತೆ ಬೆಂಗಳೂರಿಗೆ ಬರಬೇಕಾದರೆ ಹೈದರಾಬಾದ್ ಮೂಲಕ ಚಲಿಸುವ ಬಸ್‌ಗಳ ಮೂಲಕವೇ ಬರಬೇಕು. ಗುಲ್ಬರ್ಗಾ-ಬೀದರ್ ಮಾರ್ಗ ಅನುಷ್ಠಾನಗೊಂಡರೆ ರಾಜ್ಯದ ವಿವಿದೆಡೆಗಳಿಗೆ ಸಂಪರ್ಕ ಕಲ್ಪಿಸುವ ವ್ಯವಸ್ಥೆ ಸ್ಥಾಪನೆಗೊಂಡು ಹಿಂದುಳಿದ ಪ್ರದೇಶಗಳ ಬೆಳವಣಿಗೆಗೆ ಸಹಾಯವಾಗುತ್ತದೆ. ಮಾತ್ರವಲ್ಲ ಒಂದು ಅಂದಾಜಿನ ಪ್ರಕಾರ ಈ ಮಾರ್ಗ ಅನುಷ್ಠಾನಗೊಂಡಲ್ಲಿ ಬೆಂಗಳೂರಿನಿಂದ ದೆಹಲಿ ಪ್ರಯಾಣ 4 ಗಂಟೆ ಕಡಿಮೆಯಾಗುತ್ತದೆ.

ಹಿಂದುಳಿದ ಉತ್ತರಕರ್ನಾಟಕದ ಅಭಿವೃದ್ಧಿ ಆಗಬೇಕೆಂಬ ಕೂಗು ಎಲ್ಲೆಡೆಯಿಂದ ಕೇಳಿಬರುತ್ತಿದೆ. ಇದುಪ್ರಜಾಪ್ರಭುತ್ವ ಬೇಡಿಕೆ. ಪ್ರಾದೇಶಿಕ ಅಸಮಾನತೆಯನ್ನು ಹೋಗಲಾಡಿಸಲು ಈ ಪ್ರದೇಶದ ಅಭಿವೃದ್ದಿಯಲ್ಲಿ ಅಗತ್ಯ. ಯಾವುದೇ ಪ್ರದೇಶದ ಬೆಳವಣಿಗೆಗೆ ಪೂರಕವಾದ ಪ್ರಮುಖ ಅಂಶ ಸುಗಮ ಸಂಚಾರ ವ್ಯವಸ್ಥೆ. ಕರ್ನಾಟಕದ ಏಕೀಕರಣವಾಗಿ 45 ವರ್ಷಗಳಾದರೂ ಸರಿಯಾದ ರಸ್ತೆ ವ್ಯವಸ್ಥೆ ಈ ಭಾಗಕ್ಕೆ ಕಲ್ಪಿಸಲಾಗಿಲ್ಲ. ರೈಲ್ವೆ ವ್ಯವಸ್ಥೆಯಾದರೂ ಉತ್ತಮವಾಗಿದೆಯೇ ಎಂದು ನೋಡಿದರೆ ಅದೂ ಇಲ್ಲ. ಈ ಭಾಗದಿಂದ ಆಯ್ಕೆಯಾಗಿರುವ ಕಾಂಗ್ರೆಸ್ ಬಿಜೆಪಿ ಪ್ರತಿನಿಧಿಗಳು ಏನು ಮಾಡುತ್ತಿದ್ದಾರೆ ಎಂದು ಪ್ರಶ್ನಿಸಬೇಕಾಗಿದೆ.

1999ರ ಲೋಕಸಭಾ ಚುನಾವಣೆಯ ಸಂದರ್ಭದಲ್ಲಿ ಹುಬ್ಬಳ್ಳಿ-ಅಂಕೋಲಾ ರೈಲು ಮಾರ್ಗದ ಶಂಕುಸ್ಥಾಪನೆ ಬಹಳ ವಿಜ್ರಂಭಣೆಯಿಂದ ನಡೆಯಿತು. ಸ್ವತಃ ಪ್ರಧಾನ ಮಂತ್ರಿಯೇ ಆಗಮಿಸಿ ಶಂಕುಸ್ಥಾಪನೆ ನಡೆಸಿದರು. ಆದರೆ ಎರಡು ವರ್ಷಗಳಲ್ಲಿ ಯಾವುದೇ ಪ್ರಗತಿ ಆಗಿಲ್ಲ. ಈ ಬಾರಿ ಬಜೆಟ್‌ನಲ್ಲೂ ಈ ಮಾರ್ಗದ ಬಗ್ಗೆ ಮಂಜೂರಾಗಿರುವ ಹಣ ಅತ್ಯಲ್ಪ.

ಬಿಜಾಪುರ, ಬಾಗಲಕೋಟೆ ಮೇಲೆ ಹಾದುಹೋಗುವ ಸೊಲ್ಲಾಪುರ -ಗದಗ ಗೇಜ್ ಪರಿವರ್ತನೆ ಹಲವಾರು ವರ್ಷಗಳಿಂದ ನೆನೆಗುದಿಗೆ ಬಿದ್ದಿವೆ. ಈ ಬಾರಿಯ ಬಜೆಟ್ ನಲ್ಲಿಯೂ ಇದರ ಬಗ್ಗೆ ಯಾವುದೇ ಪ್ರಸ್ತಾಪವಿಲ್ಲ. ಗುಂತಕಲ್ - ಹೊಸಪೇಟೆ ಜೋಡಿ ಮಾರ್ಗಕ್ಕೂ ಯಾವುದೇ ಮುಕ್ತಿ ಇಲ್ಲ.

ರೈಲ್ವೆ ವಿಭಾಗೀಯ ಕಛೇರಿಯನ್ನು ಬೆಂಗಳೂರಿನಿಂದ ಕಸಿದುಕೊಂಡು ಹುಬ್ಬಳ್ಳಿಗೆ ತರುವುದರಲ್ಲಿ ಬಿಜೆಪಿ ಬಳಗ ಯಶಸ್ವಿಯಾಯಿತು. ಆದರೆ ಅಲ್ಲಿನ ರೈಲ್ವೆ ಕಾರ್ಯಾಗಾರ ಅಭಿವೃದ್ಧಿ ಪಡಿಸಲು 86.58 ಕೋಟಿ ರೂ. ಅಗತ್ಯವಿದೆ. ಕೇಂದ್ರದ ಬಿಜೆಪಿ ಸರಕಾರ ಬಿಡುಗಡೆ ಮಾಡಿದ್ದು ಕೇವಲ 1.01 ಕೋಟಿ ರೂ.

ಬಳ್ಳಾರಿ ಮತ್ತು ಗುಲ್ಬರ್ಗಗಳು ಉತ್ತರ ಕರ್ನಾಟಕ ಪ್ರಮುಖ ಪಟ್ಟಣಗಳು. ಒಂದು ಅಂದಾಜಿನ ಪ್ರಕಾರ, ಬಳ್ಳಾರಿಯಿಂದ ವಿಭಾಗೀಯ ಕೇಂದ್ರವಾದ ಗುಲ್ಬರ್ಗಾಕ್ಕೆ ಪ್ರತಿದಿನ 250 ಜನ

ಜೋಡಿಸುವ ರೈಲುಮಾರ್ಗ ಇಲ್ಲವೇ ಇಲ್ಲ. ಬೆಂಗಳೂರು ಸಿಟಿ ರೈಲ್ವೆ ನಿಲ್ದಾಣದ ಮೇಲೆ ಒತ್ತಡ ಹೆಚ್ಚಿದೆ. ಆದ್ದರಿಂದ ಪರ್ಯಾಯವಾಗಿ ಯಶವಂತಪುರ ರೈಲ್ವೆ ನಿಲ್ದಾಣವನ್ನು ಅಭಿವೃದ್ಧಿಗೊಳಿಸುವುದು ಅವಶ್ಯ. ಆದರೆ ಅದರ ಬಗ್ಗೆ, ಅಲ್ಲಿ ಮೂಲಭೂತ ಸೌಕರ್ಯಗಳನ್ನು ಹೆಚ್ಚಿಸುವ ಬಗ್ಗೆ ಯಾವುದೇ ಯೋಜನೆಗಳಿಲ್ಲ.

ದಕ್ಷಿಣ ಕರ್ನಾಟಕವೂ ನಿರ್ಲಕ್ಷ್ಯ

ಬೆಂಗಳೂರಿನ ಯಶವಂತಪುರ ತುಮಕೂರು ಜೋಡಿಮಾರ್ಗ ಹಲವು ವರ್ಷಗಳಿಂದ ನೆನೆಗುದಿಗೆ ಬಿದ್ದಿದೆ. ಇದಕ್ಕೆ ತಗಲುವ ಒಟ್ಟು ವೆಚ್ಚ 86.50 ಕೋಟಿ ರೂ. ಆದರೆ ಬಜೆಟ್‌ನಲ್ಲಿ ಬಿಡುಗಡೆ ಮಾಡಿರುವುದು ಕೇವಲ 5 ಕೋಟಿ ರೂ. ಹಾಗಾದರೆ ಈ ಯೋಜನೆ ಪೂರ್ಣಗೊಳಿಸಲು ಇನ್ನೆಷ್ಟು ವರ್ಷ ಬೇಕಾದೀತೋ?

ಬೆಂಗಳೂರು-ಸತ್ಯಮಂಗಲ ಹಲವಾರು ವರ್ಷಗಳಿಂದ ನೆನೆಗುದಿಗೆ ಬಿದ್ದಿರುವ ಪ್ರಮುಖವಾದ ರೈಲುಮಾರ್ಗ 224.72ಕೋಟಿ ರೂ ವೆಚ್ಚವಾಗುವುದು ಎಂದು ಪರಿಗಣಿಸಿರುವ ಈ ಮಾರ್ಗಕ್ಕೆ ಬಿಡುಗಡೆ ಮಾಡಿರುವುದು ಕೇವಲ 25 ಲಕ್ಷ ರೂ. ಮಾತ್ರ ಬಕಾಸುರನ ಹೊಟ್ಟೆಗೆ ಅರೆಕಾಸಿನ ಮಜ್ಜಿಗೆ!

ಚಾಮರಾಜನಗರ-ಮೆಟ್ಟುಪಾಳ್ಯಂ ರೈಲು ಮಾರ್ಗಕ್ಕೆ ಬಹಳ ವರ್ಷಗಳ ಹಿಂದೆಯೇ ಸರ್ವೆ ನಡೆದಿತ್ತು. ಇದು ತಮಿಳುನಾಡು - ಕರ್ನಾಟಕದ ಹಿಂದುಳಿದ ಪ್ರದೇಶಗಳ ನಡುವೆ ಸಂಪರ್ಕ ಕಲ್ಪಿಸುವುದು, ಮಾತ್ರವಲ್ಲದೇ ಜನಸಂಚಾರ, ವ್ಯಾಪಾರ ವಹಿವಾಟುಗಳ ಅಭಿವೃದ್ಧಿಗೂ ಸಹಾಯಕವಾಗುವುದು. ಕೆಲಸ ಆರಂಭವಾಗದ ಈ ಯೋಜನೆಗೆ ಬಿಜೆಪಿ ನೇತೃತ್ವದ ಕೇಂದ್ರ ಸರಕಾರದ ಭಾಗವಾಗಿರುವ ಶ್ರೀನಿವಾಸ ಪ್ರಸಾದ್ ಏನು ಮಾಡುತ್ತಿದ್ದಾರೆ ಎಂದು ಪ್ರಶ್ನಿಸಬೇಕಾಗಿದೆ.

ಮೈಸೂರು - ನಂಜನಗೂಡು - ಗುಂಡ್ಲುಪೇಟೆ ಮಾರ್ಗವಾಗಿ ಕೇರಳದ ವೈನಾಡ್‌ಜಿಲ್ಲೆಯ ಬಡಗರದ ಮೂಲಕ ಕೊಂಕಣ ರೈಲ್ವೆಗೆ ಲಿಂಕ್ ಮಾಡುವ ಮಾರ್ಗಕ್ಕಾಗಿ ಕೇರಳ ಮತ್ತು ಕರ್ನಾಟಕದ ಎಡ, ಪ್ರಜಾಸತ್ತಾತ್ಮಕ ಶಕ್ತಿಗಳು ಹೋರಾಟ ನಡೆಸಿದ್ದವು. ಎರಡೂ ರಾಜ್ಯದ ಸಿಪಿಐ (ಎಂ) ಜನತಾದಳ (ಎಸ್) ಡಿವೈಎಫ್‌ಐ ಮೊದಲಾದ ಸಂಘಟನೆಗಳು ಈ ಚಳುವಳಿಯಲ್ಲಿ ಭಾಗ ವಹಿಸಿದ್ದವು. ಇದರ ಬಗ್ಗೆ ಕೇಂದ್ರ ಸರಕಾರ ಗಮನಹರಿಸಿಲ್ಲ.

ಇಂತಹ ಅನೇಕ ಉದಾಹರಣೆಗಳನ್ನು ನೀಡಬಹುದು ಈ ಬಾರಿಯ ರೈಲ್ವೆ ಬಜೆಟ್ ರಾಜ್ಯಕ್ಕೆ ತೀರಾ ಅನ್ಯಾಯವಾಗಿದೆ ಎಂದು ಸಾರಾ ಸಗಟಾಗಿ ಹೇಳಬಹುದು. ಬಿಜೆಪಿಯ ಕೆಲವು ಮುಖಂಡರು ಈ ಬಜೆಟ್ಟನ್ನು ಸ್ವಾಗತಾರ್ಹ ಬಜೆಟ್ ಎಂದು ಬಣ್ಣಿಸಿದರೂ ಅದರ ರಾಜ್ಯ ಅಧ್ಯಕ್ಷ ಬಸವರಾಜು ಪಾಟೀಲ್ ಸೇಡಂ ರಾಜ್ಯದ ಹಲವಾರು ಯೋಜನೆ ಗಳು ನೆನೆಗುದಿಗೆ ಬಿದಿವೆ ಎಂದು ಆರೋಪಿಸಿದ್ದಾರೆ. ಬಿಜೆಪಿಯಲ್ಲಿನ ದ್ವಂದ್ವಕ್ಕೆ ಇನ್ನೊಂದು ಉದಾಹರಣೆ.

ರೈಲು ದರ ಹೆಚ್ಚಳ: ಜನಸಾಮಾನ್ಯರು ಈಗಾಗಲೇ ಬೆಲೆ ಏರಿಕೆ, ಉದ್ಯೋಗ ಕಡಿತದಿಂದ ತೊಂದರೆಗೆ ಸಿಲುಕಿದ್ದಾರೆ. ಆದರೂ ದ್ವಿತೀಯ ದರ್ಜೆಟಿಕೇಟ್ ಮತ್ತು ಸೀಸನ್ ಟಿಕೇಟುಗಳ ಮೇಲೆ ವಿಪರೀತ ದರ ಹೆಚ್ಚಿಸಿದ್ದಾರೆ. ಬೆಂಗಳೂರಿನಿಂದ ದೆಹಲಿಗೆ ಪ್ರಯಾಣಿಸುವ ಪ್ರಯಾಣಿಕರು ಏಪ್ರಿಲ್1ರಿಂದ ಪ್ರತಿ ಟಿಕೇಟಿಗೆ 63 ರೂಪಾಯಿ ಜಾಸ್ತಿ ನೀಡಬೇಕಾಗುತ್ತದೆ.

ಸಾಗಾಣಿಕೆ ದರದಲ್ಲೂ ವಿಪರೀತ ಹೆಚ್ಚಳ ಮಾಡಲಾಗಿದೆ. ಇದರಿಂದ 450 ಕೋಟಿ ರೂ. ಹೆಚ್ಚಳ ಸಂಗ್ರಹಿಸುವ ಆಲೋಚನೆ. ಇದರಿಂದ ಅವಶ್ಯಕ ವಸ್ತುಗಳ ಬೆಲೆಗಳು ಹೆಚ್ಚಲಿವೆ. ಕಳೆದ ಎರಡು ವರ್ಷಗಳಲ್ಲಿ ನಿಗದಿಪಡಿಸಿದಷ್ಟು ಸಾಗಾಣಿಕೆಯ ಗುರಿಯನ್ನು ತಲುಪಲು ರೈಲ್ವೆಗೆ ಸಾದ್ಯವಾಗುತ್ತಿಲ್ಲ. ಸಾಗಾಣಿಕಾ ದರ ಹೆಚ್ಚಳದಿಂದ



ಇದು ಇನ್ನಷ್ಟು ಕುಸಿಯುವ ಸಂದರ್ಭ ಇದೆ.

ಭಾರತದ ರೈಲ್ವೆಗೆ ಇಂದು 150 ವರ್ಷ. ಆದರೆ ರೈಲ್ವೆಯಲ್ಲಿ ಪ್ರಯಾಣಿಸುವ ಜನರಿಗಾಗಲಿ, ಕರ್ನಾಟಕ ರಾಜ್ಯಕ್ಕಾಗಲೀ ದೇಶದ ಪ್ರಗತಿಗಾಗಲೀ ಮಹತ್ತರವಾದ ಕಾಣಿಕೆ ಇಲ್ಲ. ಬದಲಾಗಿ ದರ ಹೆಚ್ಚಳದಿಂದ ಅನ್ಯಾಯವಾಗಿದೆ. ಜನತೆ ಇದನ್ನು ವಿರೋಧಿಸಲೇಬೇಕು.

- ಬಾಲಕೃಷ್ಣ ಶೆಟ್ಟಿ

STATEMENT OF THE OWNERSHP ETC. THE WEEKLU NEWSPAPER 'AIKYARANGA'

Form IV

(See Rule 8)

1. Place of Publication	: 12, 18th Cross, S.R.Nagar, Bangalore-560 027
2. Periodicity of Pbublication	: Weekly
3. Printer's Name	: S.Suryanarayana Rao
(Whether Citizen of India? if Forigner, State the Country of Origin)	: Indian
Address	: 12, 18th Cross, S.R.Nagar, Bangalore-560 027
4. Publisher's Name	: S.Suryanarayana Rao
(Whether Citizen of India? if Forigner, State the Country of Origin)	: Indian
Address	: 12, 18th Cross, S.R.Nagar, Bangalore-560 027
5. Editor's Name	: S.Y.Gurushanth
(Whether Citizen of India? if Forigner, State the Country of Origin)	: Indian
Address	: 12, 18th Cross, S.R.Nagar, Bangalore-560 027
6. Name and address of individuals who own the Newspaper and partners or shareholders holding more than one percent of the total capital.	: Karnataka State Committeee of Communist Party of India(Marxist) 12, 18th Cross, S.R.Nagar, Bangalore- 560 027

I S. Suryanarayana Rao hereby declare that the particulers given above are true to the best of my knowladge and belief

Date: 16 March 2002

Sd/-
S.Suryanarayana Rao
Publisher


ಅಯೋಧ್ಯೆಯಲ್ಲಿ ವಿಹೆಚ್‌ಪಿ-ಆರ್‌ಎಸ್‌ಎಸ್‌ನ ಆಟ ನಿಲ್ಲಿಸಿ!

ವಿವಾದಿತ ಜಾಗದಲ್ಲೇ ಮಂದಿರ ನಿರ್ಮಾಣದ ಕೆಲಸವನ್ನು ಮಾರ್ಚ್ 15 ರಂದೇ ಆರಂಭಿಸುವುದಾಗಿ ಘೋಷಿಸಿದ್ದ ಬಜರಂಗದಳ-ವಿಶ್ವಹಿಂದೂ ಪರಿಷತ್ ಅಯೋಧ್ಯಾವನ್ನು ಹಾಗೇ ದೇಶವನ್ನೇ ದಳ್ಳುರಿಗೆ ತಳ್ಳುವ ಆಟದಲ್ಲಿ ತೊಡಗಿದೆ. ಆ ವಿವಾದಿತ ಪ್ರದೇಶದಲ್ಲಿ ಏನೊಂದೂ ಚಟುವಟಿಕೆಗ ಅವಕಾಶ ನೀಡಕೂಡದೆಂದೂ 'ಯಥಾಸ್ಥಿತಿ' ಕಾಪಾಡಲು ಸುಪ್ರೀಂಕೋರ್ಟ್ ನಿರ್ದೇಶನ ನೀಡಿದೆ. ಆದರೆ ಕೋರ್ಟ್ ಆದೇಶ ಕಾಪಾಡುವುದಾಗಿ ಹೇಳಿದ್ದ ವಾಜಪೇಯಿ ಸರ್ಕಾರ ಪೂಜೆಗೆ ಅವಕಾಶ ಕಲ್ಪಿಸಬೇಕೆಂದು ಕೋರ್ಟ್‌ನಲ್ಲಿ ವಾದ ಹೂಡಿ ಅದರ ಕೊಳಕು ತಂತ್ರ ಬಯಲಾಗಿದೆ. ಒಟ್ಟು ಘಟನೆಗಳ ಸುತ್ತ ಒಂದು ವರದಿ

ಮಾರ್ಚ್ 15 ರಿಂದ ಅಯೋಧ್ಯೆಯಲ್ಲಿ ದೇವಸ್ಥಾನ ಕಟ್ಟುವ ಕೆಲಸ ಆರಂಭಿಸಬೇಕೆನ್ನುವ ವಿಶ್ವಹಿಂದೂ ಪರಿಷತ್ತಿನ ಕರೆ ಮತ್ತೊಮ್ಮೆ ದೇಶವನ್ನು ಬಿಕ್ಕಟ್ಟಿನತ್ತ ತಳ್ಳಿದೆ. ಗುಜರಾತಿನಲ್ಲಿ ರಕ್ತದೋಕುಳಿ ಹರಿದಿದೆ. ಫೆಬ್ರವರಿ ಮಧ್ಯ ಭಾಗದಿಂದ ಸಾವಿರಾರು ಕರಸೇವಕರು ಅಲ್ಪಸಂಖ್ಯಾತರ ವಿರುದ್ಧ ವಿಷವುಗುಳುತ್ತಾ ರೈಲುಗಳಲ್ಲಿ ಅಯೋಧ್ಯೆಯತ್ತ ತೆರಳಲಾರಂಭಿಸಿದ್ದರು. ಗೋದ್ರಾದಲ್ಲಿ ಸಾಬರಮತಿ ಎಕ್ಸ್‌ಪ್ರೆಸ್ ಮೇಲಿನ ಭೀಕರ ಧಾಳಿಯಲ್ಲಿ 58 ಮಂದಿ ಸಾವಪ್ಪಿದರು. ಇವರಲ್ಲಿ ಬಹುಮಂದಿ ಅಯೋಧ್ಯೆಯಿಂದ ಹಿಂದಿರುಗುತ್ತಿದ್ದ ಕರಸೇವಕರು. ಈ ಯೋಜಿತ ಧಾಳಿ ದೇಶಕ್ಕೆ ಅಘಾತ ತಂದಿದೆ. ಈ ಭಯಾನಕ ಅಪರಾಧ ಎಸಗಿದವರನ್ನು ಗುರುತಿಸಿ, ಶಿಕ್ಷಿಸಬೇಕು.

ಹಿಂದುತ್ವದ ಪ್ರಯೋಗಾಲಯ!

ನಂತರ ಒಂದು ವಾರ ಗುಜರಾತನ್ನು ಆವರಿಸಿದ ಪ್ರತಿ ಹಿಂಸಾಚಾರ ಒಂದು ಕೋಮುಗಲಭೆಯಲ್ಲ, ಸರಕಾರದ ಮಂಜೂರಾತಿ ಪಡೆದ ಒಂದು ಭಯೋತ್ಪಾದನೆ, ಗುಜರಾತಿನ ಇಡೀ ಮುಸ್ಲಿಂ ಸಮುದಾಯದ ವಿರುದ್ಧ, ಗಂಡಸರು, ಹೆಂಗಸರು, ಮಕ್ಕಳ ವಿರುದ್ಧ ನಡೆಸಿರುವ ಭಯೋತ್ಪಾದನೆ. **ಗುಜರಾತ್ ಹಿಂದಿನಿಂದಲೂ ಹಿಂದುತ್ವ ಶಕ್ತಿಗಳಿಗೆ ಹಿಂದೂರಾಷ್ಟ್ರ ಸ್ಥಾಪಿಸುವ ಕೆಲಸದಲ್ಲಿ ಒಂದು ಪ್ರಯೋಗಾಲಯವಾಗಿದೆ.** ಆದ್ದರಿಂದ ಗುಜರಾತಿನಲ್ಲಿ ಏನು ನಡೆದಿದೆಯೋ ಅದು ಕೇಂದ್ರದಲ್ಲಿ ಈ ಶಕ್ತಿಗಳು ತಮ್ಮ ಬಲ ಕ್ರೋಢೀಕರಿಸಿಕೊಂಡರೆ ದೇಶ ಏನು ಎದುರಿಸ ಬೇಕಾಗಬಹುದು ಎಂಬುದರ ಒಂದು ಗಂಭೀರ ಎಚ್ಚರಿಕೆ.



ಅಶೋಕ್ ಸಿಂಘಾಲ್

ಆರ್‌ಎಸ್‌ಎಸ್‌ಗೆ ಮತ್ತು ಅದರ ಶಿಶು ವಿಹೆಚ್‌ಪಿಗೆ ಗುಜರಾತಿನ ಹತ್ಯಾಕಾಂಡದ ಬಗ್ಗೆ ಸ್ವಲ್ಪವೂ ಪಶ್ಚಾತಾಪವಿಲ್ಲ. ಅದರ ಪ್ರಚಾರಕ ಮುಖ್ಯಮಂತ್ರಿ ನರೇಶ್ ಮೋದಿ ಈ ನರಮೇಧವನ್ನು ಒಂದು ಭಯೋತ್ಪಾದಕ ಕೃತ್ಯಕ್ಕೆ ಒಂದು ಪ್ರತಿಕ್ರಿಯೆ ಎಂದು ಸಮರ್ಥಿಸಿಕೊಂಡಿದ್ದಾರೆ. ಗೋಧ್ರಾ ಧಾಳಿಯಲ್ಲಿ ಸತ್ತ ಹಿಂದೂಗಳ ಕುಟುಂಬಗಳಿಗೆ 2 ಲಕ್ಷ ರೂ. ಪರಿಹಾರ ಹಾಗೂ ಸಾಮೂಹಿಕ ಹತ್ಯೆಗಳಲ್ಲಿ ಸತ್ತ ಮುಸ್ಲಿಮರ ಕುಟುಂಬಗಳಿಗೆ 1 ಲಕ್ಷ ರೂ. ಪರಿಹಾರ ಘೋಷಿಸಿ ಆತ ಹಿಂದೂಗಳನ್ನು ಮಾತ್ರ ನಾಗರಿಕರೆಂದು ಪರಿಗಣಿಸಲಾಗುವುದು ಎಂದು ಸಾರಿದ್ದಾರೆ.

ಎರಡು ನಾಲಿಗೆ ತಂತ್ರ

ಈ ನಡುವೆ ಕೇಂದ್ರ ಸರಕಾರ ವಿಹೆಚ್‌ಪಿಯ ಮಾರ್ಚ್ 15 ರ ಬೆದರಿಕೆಯ ಸಂದರ್ಭದಲ್ಲಿ ಕೆಲವು ಕ್ರಮಗಳನ್ನು ಪ್ರಕಟಿಸಿದರೂ ಅದನ್ನು ಜಾರಿಗೊಳಿಸುತ್ತಿರುವ ರೀತಿ ಸರಕಾರದ ಪ್ರಾಮಾಣಿಕತೆಯ ಬಗ್ಗೆ ಸಂದೇಹ ಎಬ್ಬಿಸುತ್ತದೆ. ಉದಾಹರಣೆಗೆ ಅಯೋಧ್ಯೆಯಿಂದ ಕರಸೇವಕರನ್ನು ಹಿಂದಕ್ಕೆ ಕಳಿಸಲಾಗುತ್ತಿದೆ, ಹೊಸ ತಂಡಗಳು ಅಯೋಧ್ಯೆಗೆ ಹೊರಡದಂತೆ ತಡೆಯಲಾಗುತ್ತಿದೆ ಎಂದು ಅದು ಹೇಳಿದೆ. ಆದರೆ ಬಹಳ ಸಂಖ್ಯೆಯಲ್ಲಿ ಕರಸೇವಕರು ಈಗಲೂ ಅಯೋಧ್ಯೆಯಲ್ಲಿದ್ದಾರೆ ಮತ್ತು ಹೊಸ ತಂಡಗಳು ಬೇರೆ ಬೇರೆ ವಿಧಾನಗಳಿಂದ, ಉದಾ: ಪೈರು ಬೆಳೆದು ನಿಂತ ಗದ್ದೆಗಳ ಮೂಲಕ ಹಾದು ಬರುತ್ತಿದ್ದಾರೆ. ಸಂಘ ಪರಿವಾರ ಕೂಡಾ ತನ್ನ ತಂತ್ರ ಬದಲಿಸಿ ಈಗ ಮುಖ್ಯವಾಗಿ ಉತ್ತರ ಪ್ರದೇಶದಿಂದ ಕರಸೇವಕರನ್ನು ತರುವ ಯೋಜನೆಯಲ್ಲಿದ್ದಂತಿದೆ. ಇನ್ನು ಉತ್ತರ ಪ್ರದೇಶದಲ್ಲಂತೂ ಉಸ್ತುವಾರಿ ಸರಕಾರದ ಹೆಸರೇ ಇಲ್ಲ. ಇದು ಸಂಘ ಪರಿವಾರದ ಅಂಗ ಸಂಸ್ಥೆಗಳಿಗೆ ಅನುಕೂಲಕರವಾದ ಸನ್ನಿವೇಶ. ರಾಜ್ಯದಲ್ಲಿ ಬೆಂಬಲಕ್ಕಿರುವ ಒಂದು ಸರಕಾರ, ಕೇಂದ್ರದಲ್ಲಿಯೂ ಅಂತದ್ದೇ ಸರಕಾರ - ಇನ್ನೇನು ಬೇಕು!

ನೀಲ ನಕ್ಷೆ

ಧರ್ಮನಿರಪೇಕ್ಷ ನೀತಿ ಮತ್ತು ಕಾನೂನಿನ ಆಳ್ವಿಕೆಗೆ ಸವಾಲು ಹಾಕಿರುವ ವಿಹೆಚ್‌ಪಿಯ ಅಯೋಧ್ಯಾ ಚಳುವಳಿ ಮತ್ತು ಗುಜರಾತಿನಲ್ಲಿ ಅಸಹಾಯಕ ಅಲ್ಪ ಸಂಖ್ಯಾತರ ಸಾಮೂಹಿಕ ಹತ್ಯಾಕಾಂಡದ ನಡುವೆ ಇರುವ ಸಂಬಂಧವನ್ನು ಕಾಣಲು ಬಿಜೆಪಿ- ಆರ್‌ಎಸ್‌ಎಸ್ ನಿರಾಕರಿಸುತ್ತಿವೆ. ಗುಜರಾತಿನಲ್ಲಿ ಹಿಂಸಾಚಾರ ಭುಗಿಲೆದ್ದಾಗ ಆರಂಭದಲ್ಲಿ ವಾಜಪೇಯಿ ಸರಕಾರ ವಿಹೆಚ್‌ಪಿ ಕರೆಯ ಬಗ್ಗೆ ಆತ್ಮರಕ್ಷಣೆಯ ನಿಲುವು ತಳೆಯಿತು. ಆದರೆ ಅದರ ನಂತರ ಕೂಡಲೇ ವಿಹೆಚ್‌ಪಿಯೊಂದಿಗೆ ಒಂದು ವ್ಯವಹಾರ ಕುದುರಿಸಲು ತೀವ್ರ ಪ್ರಯತ್ನ ಆರಂಭವಾಯಿತು. ಕಾಂಚಿಪುರಂನ ಶಂಕರಾಚಾರ್ಯ ಶ್ರೀ ಜಯೇಂದ್ರ ಸರಸ್ವತಿ ಯವರನ್ನು ಮಾಧ್ಯಮವಾಗಿ ಮಾಡಿಕೊಂಡು ವಿಹೆಚ್‌ಪಿಗೆ ಶರಣಾಗುವ ಯೋಜನೆ ಕಾಣುತ್ತಿದೆ. ಸರಕಾರ ಮತ್ತು ಮಾಧ್ಯಮದ ಒಂದು ವಿಭಾಗ ಚಿತ್ರಿಸಬಯಸುವಂತೆ **ಕಾಂಚೀ ಶಂಕರಾಚಾರ್ಯರು ಈ ವಿವಾದದ ಎರಡು ಪಕ್ಷಗಳಿಗೆ ಸಂಬಂಧವಿಲ್ಲದ ಒಬ್ಬ ಧಾರ್ಮಿಕ ವ್ಯಕ್ತಿಯಲ್ಲ. ಅವರು ವಿಹೆಚ್‌ಪಿ ಬಣದ ಪಕ್ಷಪಾತಿ, ವಿವಾದಿತ ಪ್ರದೇಶದಲ್ಲಿ ರಾಮದೇವಸ್ಥಾನ ಬಿಟ್ಟು ಬೇರೇನನ್ನು ಹಿಂದೂಗಳು ಒಪ್ಪುವುದಿಲ್ಲ ಎಂದು ಸತತವಾಗಿ ಹೇಳುತ್ತಾ ಬಂದವರು.**

ಮಾರ್ಚ್ 5 ರಂದು ಶಂಕರಾಚಾರ್ಯರು ಈ ವಿವಾದಕ್ಕೆ ಪರಿಹಾರವೆಂದು ಇಟ್ಟ ಪ್ರಸ್ತಾವ ವಿಹೆಚ್‌ಪಿಯ ಬೇಡಿಕೆಗಳ ಪುನರುಚ್ಚಾರವಲ್ಲದೆ ಬೇರೇನೂ ಅಲ್ಲ. ತಾನು ತಯಾರಿಸಿದ ಒಂದು ನೀಲನಕ್ಷೆಯ ಪ್ರಕಾರ ಶಿಲಾನ್ಯಾಸ ಜಾಗದಿಂದ ರಾಮದೇವಸ್ಥಾನ ಕಟ್ಟುವ ಕೆಲಸ ಆರಂಭಿಸಲು ತನಗೆ ಅವಕಾಶ ನೀಡಬೇಕೆಂದು ವಿಹೆಚ್‌ಪಿ ಬಹಳ ಸಮಯದಿಂದ ಕೇಳುತ್ತಿದೆ. ಈ ನಕ್ಷೆಯ ಪ್ರಕಾರ ದೇವಸ್ಥಾನದ ಗರ್ಭಗೃಹ ಬಾಬ್ರಿ ಮಸೀದಿ ರಚನೆಯ ಕೇಂದ್ರ ಭಾಗದಲ್ಲಿದೆ. ಸರಕಾರ ವಹಿಸಿಕೊಂಡ ಜಮೀನಿನಲ್ಲಿ ಒಂದು ಭಾಗವನ್ನು ತನಗೆ ವಹಿಸಬೇಕು, ಇದಕ್ಕೆ ಪ್ರತಿಯಾಗಿ ಬಾಬ್ರಿ ಮಸೀದಿ ಇದ್ದ ಜಾಗದ ಮಾಲಕತ್ವದ ಕುರಿತ ಮೊಕದ್ದಮೆಯ ಮೇಲೆ ನ್ಯಾಯಾಲಯದ ತೀರ್ಪಿಗೆ ತಾನು ಬದ್ಧವಾಗಿರುವುದಾಗಿ ಹೇಳಲು ಸಿದ್ಧ ಎಂದಿತ್ತು.



ತನ್ನ ಮೂಲ ನಕ್ಷೆಯ ಪ್ರಕಾರ ವಿಹೆಚ್‌ಪಿ ಸರಕಾರ ವಹಿಸಿಕೊಂಡ ಜಮೀನಿನ ಯಾವ ಭಾಗದಿಂದ ಕೆಲಸ ಆರಂಭಿಸಿದರೂ ನ್ಯಾಯಾಲಯದ ತೀರ್ಪು ಬರುವ ವೇಳೆಗೆ ಬಾಬ್ರಿ ಮಸೀದಿ ಇದ್ದ ಜಾಗದತ್ತ ಸಾಗುವಂತೆ ದೇವಸ್ಥಾನದ ಬಹುಭಾಗ ಕಟ್ಟಿಯಾಗಿರುತ್ತದೆ. ಆಗ ನ್ಯಾಯಾಲಯದ ತೀರ್ಪು ನಿರರ್ಥಕವಾಗುತ್ತದೆ. ಆದ್ದರಿಂದ ಇದೊಂದು ಬಹಳ ಜಾಗರೂಕತೆಯಿಂದ ಹೆಣೆದ ಆಟ - ಹಂತಹಂತವಾಗಿ ಕಾನೂನಿನಿಂದ ತಪ್ಪಿಸಿಕೊಂಡು ದೇವಸ್ಥಾನ ಕಟ್ಟುವ ಆಟ.

ಯಥಾಸ್ಥಿತಿ ಕಾಯಲೇಬೇಕು

ಶಂಕರಾಚಾರ್ಯರ ಪ್ರಸ್ತಾವವೆಂದರೆ ಮಾರ್ಚ್ 15 ರಂದು ಪೂಜೆ ಮಾಡಿ ದೇವಸ್ಥಾನ ಕಟ್ಟುವ ಕೆಲಸ ಆರಂಭಿಸಲು ಅವಕಾಶ ನೀಡುವುದು, ಅದಕ್ಕೆ ಪ್ರತಿಯಾಗಿ ಬಾಬ್ರಿ ಮಸೀದಿ ಇದ್ದ ಜಾಗದ ಬಗ್ಗೆ ನ್ಯಾಯಾಲಯದ ತೀರ್ಪನ್ನು ಕಾಯುವುದಾಗಿ ವಿಹೆಚ್‌ಪಿ ವಚನ ನೀಡುವುದು. ಇಂತಹ ಒಂದು ಕ್ರಮದ ಅರ್ಥವೆಂದರೆ ವಾಜಪೇಯಿ ಸರಕಾರ ಯಥಾಸ್ಥಿತಿ ಮುಂದುವರಿಸಬೇಕೆಂಬ ನ್ಯಾಯಾಲಯದ ಆದೇಶವನ್ನು ವಿಹೆಚ್‌ಪಿಗೆ ಅನುಕೂಲವಾಗುವಂತೆ ಉಲ್ಲಂಘಿಸುವುದು. ಈ ಜಮೀನಿನಲ್ಲಿ ಕೇಂದ್ರ ಸರಕಾರ ವಹಿಸಿಕೊಂಡ 2.77 ಎಕ್ರೆ ಹಾಗೂ ಅದರ ಮೊದಲು ವಿಹೆಚ್‌ಪಿ ರಾಜ್ಯ ಸರ್ಕಾರ ವಹಿಸಿಕೊಂಡ ಸುತ್ತಲಿನ 67 ಎಕ್ರೆ ಜಾಗವಿದೆ. ಸುಪ್ರೀಂ ಕೋರ್ಟಿನ ನಿರ್ದೇಶನದ ಪ್ರಕಾರ ವಹಿಸಿಕೊಂಡ ಇಡೀ ಪ್ರದೇಶದಲ್ಲಿ ಯಥಾಸ್ಥಿತಿ ಉಳಿಸಿಕೊಳ್ಳಬೇಕಾಗಿದೆ.

ಮೂಗು ತೂರಿಕೆ ಸಹಿಸಲಸಾಧ್ಯ

ಶಂಕರಾಚಾರ್ಯರು ಹೇಳಿಕೊಂಡಂತೆ ಮುಸ್ಲಿಂ ಸಂಘಟನೆಗಳು ವಿಹೆಚ್‌ಪಿಯ ಪ್ರಸ್ತಾವದ ಈ ಹೊಸ ಆವೃತ್ತಿಯನ್ನು ಒಪ್ಪುವ ಲಕ್ಷಣಗಳಿಲ್ಲ. ಜಾರ್ಜ್ ಫರ್ನಾಂಡೀಸ್‌ರ ಮಧ್ಯಸ್ಥಿಕೆಯೊಂದಿಗೆ ಶಂಕರಾ ಚಾರ್ಯರ ಪ್ರಯತ್ನಗಳಿಗೆ ಪೋಷಕವಾಗಿರುವ ಕೇಂದ್ರ ಸರಕಾರ ಈಗ ನ್ಯಾಯಾಂಗದ ವ್ಯಾಪ್ತಿಗೆ ಒಳಗಾಗಿರುವ ಒಂದು ವಿವಾದದಲ್ಲಿ ಇನ್ನಷ್ಟು ಮೂಗು ತೂರಿಕೆಯನ್ನು ದೇಶ ಸಹಿಸುವುದಿಲ್ಲ ಎಂಬುದನ್ನು ತಿಳಿಯಬೇಕು. ವಿಹೆಚ್‌ಪಿ, ಬಿಜೆಪಿ ಮುಖಂಡತ್ವ ಮತ್ತು ಅದರ ರಾಜ್ಯ ಸರ್ಕಾರದ ವಿಶ್ವಾಸಘಾತದ ನಂತರ, ಡಿಸೆಂಬರ್ 6, 1992 ರ ಕಹಿ ಅನುಭವದ ನಂತರ ಧಾರ್ಮಿಕ ಸಮುದಾಯಗಳ ಸ್ವಯಂಘೋಷಿತ ಪ್ರತಿನಿಧಿಗಳು ಕಾನೂನನ್ನು ಬದಿಗೊತ್ತಲು, ಅದಕ್ಕೆ ಸರಕಾರ ಮಂಜೂರಾತಿ ಕೊಡಲು ಅವಕಾಶ ನೀಡುವ ಪ್ರಶ್ನೆಯೇ ಇಲ್ಲ.

ಸತ್ವಪರೀಕ್ಷೆ

ಮುಂಬರುವ ದಿನಗಳಲ್ಲಿ ಮತ್ತೊಮ್ಮೆ ದೇಶದ ಧರ್ಮನಿರಪೇಕ್ಷ ಆಧಾರ ಪರೀಕ್ಷೆಗೊಳಗಾಗಲಿದೆ. ಎಲ್ಲಾ ಪ್ರಜಾಪ್ರಭುತ್ವವಾದಿ ಮತ್ತು ದೇಶಪ್ರೇಮಿ ಶಕ್ತಿಗಳು ಒಟ್ಟಾಗಿ ಒಂದು ನಿಲುವು ತಳೆಯಬೇಕು. ಮತ್ತೊಮ್ಮೆ ದರ್ಮನಿರಪೇಕತೆ ವಿಶ್ವಾಸಘಾತ ಮತ್ತು ...

ಅಯೋಧ್ಯೆ : ಸುಪ್ರೀಂ ಕೋರ್ಟ್ ಆದೇಶ - ವಾಜಪೇಯಿ

ಅಯೋಧ್ಯೆ ವಿವಾದಕ್ಕೆ ಸಂಬಂಧಿಸಿ ಯಥಾಸ್ಥಿತಿಯನ್ನು ಕಾಯ್ದುಕೊಳ್ಳುವಂತೆ, ಯಾವುದೇ ಪೂಜೆಗೆ ವಿವಾದಿತ ಮತ್ತು ವಿವಾದರಹಿತ ಸ್ಥಳದಲ್ಲಿ ಅವಕಾಶ ನೀಡಬಾರದೆಂದು ಸುಪ್ರೀಂ ಕೋರ್ಟ್ ತೀರ್ಪು ನೀಡಿದೆ. ಈ ತೀರ್ಪು ಭಾರತದ ಸಂವಿಧಾನದ ಜಾತ್ಯಾತೀತ ಮೌಲ್ಯಗಳನ್ನು ಎತ್ತಿ ಹಿಡಿದಿದೆ. ಜಾತ್ಯಾತೀತ ಪ್ರಜಾಪ್ರಭುತ್ವವನ್ನು ಗೌರವಿಸುವ ಎಲ್ಲಾ ಭಾರತೀಯರು ಈ ತೀರ್ಪನ್ನು ಸ್ವಾಗತಿಸಬೇಕಿದೆ ನಡೆಸುವ ಸಂದರ್ಭದಲ್ಲಿ ಭಾರತ ಸರ್ಕಾರದ ಅಟಾರ್ನಿ ಜನರಲ್ ಸೋಲಿ ಸೊರಬ್ಜಿಯವರು ಪೂಜೆಗೆ ಅವಕಾಶ ಕೇಳಿರುವುದು, ಆ ಸಂದರ್ಭದಲ್ಲಿ ಯಾವುದೇ ಅಹಿತಕರ ಘಟನೆ ಸಂಭವಿಸದಂತೆ ನೋಡಿಕೊಳ್ಳುತ್ತೇವೆ ಎಂದು ಹೇಳಿರುವುದು ವಾಜಪೇಯಿ ಸರ್ಕಾರದ ಟೊಳ್ಳುತನ, ಕೋಮುವಾದಿಗಳೊಡನೆ ಅದರ ಸಖ್ಯತೆಯನ್ನು ಬಯಲು ಮಾಡಿದೆ. ಆರ್‌ಎಸ್‌ಎಸ್ ನ ರಾಜಕೀಯ ಅಂಗದಂತೆ ಕೆಲಸ ಮಾಡುತ್ತಿರುವ ಬಿಜೆಪಿ ಸರ್ಕಾರ ಯಾವಾಗಲೂ ಆರ್‌ಎಸ್‌ಎಸ್ ... ಮಾಡುತ್ತಿದೆ. ಈ ಆರ್‌ಎಸ್‌ಎಸ್ ಅಜೆಂಡಾವು ಜಾತ್ಯಾತೀತ ಭಾರತವನ್ನು 'ಹಿಂದು ರಾಷ್ಟ್ರ'ವಾಗಿ ಪರಿವರ್ತಿಸುವ ಫ್ಯಾಸಿಸ್ಟ್ ಅಜೆಂಡಾವಾಗಿದೆ.

ಆದರೆ ಈ ತೀರ್ಪು ಹೊರ ಬಂದ ಮೇಲೆ ಕುಪಿತಗೊಂಡಿರುವ ಸಂಘ ಪರಿವಾರ, ವಿಹೆಚ್‌ಪಿ ದೇಶದಲ್ಲಿ ಮತ್ತಷ್ಟು ಗಲಭೆಗಳನ್ನು ಸೃಷ್ಟಿಸುತ್ತವೆ. ಈ ದುಷ್ಟ ಶಕ್ತಿಗಳ ಈ ಆಟ ಯಶಸ್ವಿಯಾಗದಂತೆ ನೋಡಿಕೊಳ್ಳುವುದು ಪ್ರತಿಯೊಬ್ಬ ಭಾರತೀಯ ನಾಗರೀಕನ ...

ಗುಜರಾತ್ : ಹಿಂದುತ್ವದ ಜ

ಗೋದ್ರಾ ಮತ್ತು ಗುಜರಾತ್‌ನಲ್ಲಿ ನಡೆದ ಬರ್ಬರ ನರಮೇಧ ಮಾನವೀಯತೆ ಇರು
ಇಂತಹ ಭೀಕರ ಹತ್ಯಾಕಾಂಡವನ್ನು ತಡೆಯದೇ ರಾಜ್ಯದ ನರೇಂದ್ರಮೋದಿ ಹಾಗೂ ಕೆ
ಇದು ಪ್ರಭುತ್ವದ ಭಯೋತ್ಪಾದನೆ. ಜನಾಂಗದ್ವೇಷಿ ಹತ್ಯಾಕಾಂಡ. ಆ ಘಟ



ಗುಜರಾತ್:

ಹೌದು! ಮಹಾತ್ಮಗಾಂಧಿ ಹುಟ್ಟಿದ ಗುಜರಾತ್. ದಕ್ಷಿಣ ಆಫ್ರಿಕಾದಲ್ಲಿ ವರ್ಣಬೇಧ ನೀತಿಯ ವಿರುದ್ಧ ಸಿಡಿದೆದ್ದು, ಪ್ರತಿಭಟಿಸಿ ಸತ್ಯಾಗ್ರಹ ಸಾರಿದ ಯಾರೀತ ಎಂದು ಅಲ್ಲಿಯವರು ನೋಡಿದ್ದು ಭಾರತದತ್ತ. ಅದೋ ಗುಜರಾತ್ ರಾಜ್ಯದತ್ತ. ಹೀಗೆ ದೂರದ ಆಫ್ರಿಕಾ ಭಾರತಕ್ಕೂ ಹೃದಯ ನಂಟು ಬೆಳೆದಿದ್ದೇ ಗುಜರಾತ್‌ನೊಂದಿಗೆ...

ಅದೇ ಗುಜರಾತ್ ಈಗ ಕೋಮು ವೈಷಮ್ಯದ ದಳ್ಳುರಿಯಲ್ಲಿ ಧಗದಹಿಸುತ್ತಿದೆ. ಮನುಷ್ಯ ಮನುಷ್ಯರೆಂದು ನೋಡದೇ, ಕಿಚ್ಚನ್ನಿಕ್ಕಿ ಮಹಿಳೆ, ಮಕ್ಕಳು, ಮುದುಕರು, ಅಮಾಯಕರು ಎನ್ನದೇ ನರಮೇಧದ ಬೇಟೆ ಸಾಗಿಯೇ ಇದೆ. ರಾಜ್ಯದಲ್ಲಿ - ಕೇಂದ್ರದಲ್ಲಿ ಸರ್ಕಾರ ಇದೆಯೇ ಎಂದು ಕೇಳುವಂತಾಗಿದೆ. ಕಾನೂನು-ಸುವ್ಯವಸ್ಥೆ ದಿಕ್ಕೇಡಿಯಗಳನ್ನಾಗಿಸುತ್ತಿದೆ. ಎಲ್ಲವೂ ಕರಸೇವಕರ ಅಣತಿಗಳೇ.... 'ಹಿಂದೂರಾಷ್ಟ್ರ'ದ ಕವಾಯಿತೇ! ಅದೇ ಗುಜರಾತಿಗೆ ನೀವು ಅಡಿ ಇಟ್ಟರೇ... ನೀವು ಬದುಕಿ ವಾಪಸಾಗುವ ಗ್ಯಾರಂಟಿಯಿಲ್ಲ. ಅಂತಹ ಭರವಸೆಯನ್ನು ಕೊಡಲಾಗದು ಎಂದು ಧಮಕಿ ಹಾಕುತ್ತದೆ ಮೋದಿ ಸರ್ಕಾರ. ದಾಹವೆಂದು ನೀವು ಬೊಗಸೆ ತುಂಬಾ ಹಿಡಿದ ನೀರು ರಕ್ತದಿಂದ ಕೆಂಪಾಗಿದೆ. ಬೀದಿಗಳಲ್ಲಿ ಇಡುವ ಹೆಜ್ಜೆಗಳಡಿಯಲ್ಲಿ ರಕ್ತ ಚಿಪಗುಡುತ್ತಿದೆ. ಉಸಿರಾಡುವ ಗಾಳಿಯಲ್ಲೆಲ್ಲಾ ಈಗ ಕರಕಲಾದ ಹೆಣಗಳ ವಾಸನೆಯದ್ದೇ ಉಸಿರು... ಆಕ್ರಂದನಗಳ ಮೊರೆತ ಕಿವಿತುಂಬ...

ರಾಮನ ಹತ್ಯೆ!

'ಹಿಂದುತ್ವ' ದ ಫ್ಯಾಸಿಸ್ಟ್ ಸೃಷ್ಟಿ ನಾಥೂರಾಂ ಗೋಡ್ಸೆಯ ಗುಂಡಿಗೆ ಬಲಿಯಾಗಿ ಕೊನೆಯ... ಕಟ್ಟ ಕಡೆಯ ಉಸಿರಾಗಿ ಗಾಂಧಿ ಉಲಿದ 'ಹೇ ರಾಮ್' ಎಂಬ ಪ್ರಾಣ ನಂಬಿಕೆಯನ್ನು, ಮೆಟ್ಟಿ ಹಾಕಿ, ಕ್ರೂರ ನರ್ತನಗೈಯುತ್ತಿದೆ 'ಜೈಶ್ರೀರಾಮ್' ಎಂಬ ರಕ್ಕಸ ಬಲಿ ಆರ್ಭಟ. ರಾಮ ಎಂಬುದು ಈಗ ಅಲ್ಲಿ ಕಾಯುವ ಶಬ್ದವಲ್ಲ, ಕೊಲ್ಲುವ ಭಾಷೆಯೀಗ. ಆಗ.. ಈಗ... ಪೋಲೀಸ್ ಇರಲಿಲ್ಲವೆಂದಲ್ಲ.ಮಿಲಿಟರಿ ಬರಲಿಲ್ಲವೆಂದೇನೂ ಅಲ್ಲ. ಇದ್ದವರು ಬಂದವರು ಶಿಸ್ತಾಗಿ ನಿಂತಿದ್ದರು. ಅಲ್ಪಸಂಖ್ಯಾತರ ಆಸ್ತಿ ಲೂಟಿಯಾಗುವಾಗ, ಅಂಗಡಿಗಳು-ಮನೆಗಳು ಲೂಟಿಯಾಗಿ ಬೆಂಕಿಗಾಹುತಿಯಾಗುತ್ತಿರುವಾಗ, ಜನರನ್ನು ಸುಟ್ಟು ನರಮೇಧ ನಡೆಸುತ್ತಿರುವಾಗ ಮಾನವೀಯತೆ ಮರೆತ ರಕ್ಕಸರು 'ಲಾಠಿಗಳನ್ನು ನೆಲಕ್ಕೆ ಬಡಿದು, ಗುಬ್ಬಿಗಳತ್ತ ಗುಂಡು ಹಾರಿಸಿ 'ಕರ್ತವ್ಯ ನಿರತರಾಗಿದ್ದರು'. ಗೋಧ್ರಾದ ಘಟನೆಗೆ ಜನಸಾಮಾನ್ಯರ ಸಹಜ ಪ್ರತಿಕ್ರಿಯೆಯ ಮಹಾಪೂರ ಎಂದು ನ್ಯೂಟನ್ ನಿಯಮ ಹೇಳಿದ ಮೋದಿ ಮತ್ತು ಮಾಧ್ಯಮದ ಕರಸೇವಕರು ದೇಶಭಕ್ತಿಯ ಗಿಲೀಟು ಹಚ್ಚುತ್ತಿದ್ದರು. ಧರ್ಮೋದ್ದಾರದ ವೇಷ ತೊಟ್ಟ ಆದಿಚುಂಚನಗಿರಿ, ಪೇಜಾವರ, ಕಂಚಿ ಶಂಕರಾಚಾರ್ಯರಂಥಹ ಮಠಾಧಿಪತಿಗಳು ಮನುಷ್ಯತ್ವವನ್ನು ಹರಾಜಿಗಿಟ್ಟು, ರಕ್ಕಸರಂತೆ ಅಧಿಕಾರಸ್ಥರ ಸೇವೆಗೆ ಹಲ್ಲು ಗಿಂಜುತ್ತಾ, ಉರಿವ ಬೆಂಕಿಗೆ ತಿದಿಯೂದುತ್ತಿದ್ದರು. ಗೋಧ್ರಾದಲ್ಲಿಯೂ ಗುಜರಾತ್‌ನೆಲ್ಲೆಡೆ ಸತ್ತವರು ಮನುಷ್ಯರು ಎಂಬ ಸರಳ ಸತ್ಯವನ್ನು ಅವರೇ ಊದುವ ಧರ್ಮದ ಸಾರವನ್ನು ಒಪ್ಪದ ವಂಚಕರು ತಾವೆಂದು ಜಗತ್ತಿಗೆ ತೋರಿದರು. ವಿಶ್ವಮಾನವರೆಲ್ಲಾ ಒಂದೇ ಎಂದು ಹೇಳುವ ಇವರು ಗುಜರಾತ್ ಹಾಗೂ ದೇಶದೆಲ್ಲೆಡೆ ಸತ್ತವರ ಬಗ್ಗೆ ವಿಷಾದದ ಮಾತು ಆಡದೇ ತಾವೆಂಥಾ ಅಮಾನವೀಯರು, ಧರ್ಮಭ್ರಷ್ಟರು ಎಂದು ಸಾಬೀತುಪಡಿಸಿಕೊಂಡರು. ಇದೆಲ್ಲಾ ನಡೆದದ್ದು ಮರ್ಯಾದಾ ಪುರಷೋತ್ತಮ(?) ರಾಮನಿಗೆ ಬಾಬ್ರಿ ಮಸೀದಿ ಕೆಡವಿದ ಜಾಗದಲ್ಲೇ ಮಂದಿರ ಕಟ್ಟಬೇಕೆಂದು. 1992 ರ ಡಿಸೆಂಬರ್ 6 ರಂದು ಅಯೋಧ್ಯಾದ ಬಾಬ್ರಿ ಮಸೀದಿ ನಾಶಗೊಳಿಸಿದ 'ಚಡ್ಡಿ ಪಡೆ' ದೇಶಾದ್ಯಂತ ಕೋಮುಗಲಭೆಗಳನ್ನು ಹುಟ್ಟುಹಾಕಿ ನೂರಾರು ಜನರನ್ನು ಬಲಿತೆಗೆದುಕೊಂಡಿತ್ತು. ಈಗ ಎರಡನೇ ಸುತ್ತು... ಬಲಿಯಾದವರು... ಸರ್ಕಾರ ಹೇಳುತ್ತದೆ 600, ಇವು ಗುರುತಿಸಿದ ಹೆಣಗಳು... ಗುರುತಿಸಲಾಗದೇ ಬೆಂಕಿಯಲ್ಲಿ ಬೂದಿಯಾಗಿ ಗಟಾರಗಳಲ್ಲಿ ಕೊಳೆತು, 'ಕಾಣೆಯಾದವರು' ಒಂದೂವರೆ ಸಾವಿರಕ್ಕೂ ಹೆಚ್ಚು ಎನ್ನುತ್ತದೆ ಶೋಧನಾ ನಿಯೋಗಗಳು.


ಇನ್ನೆಂಥ ಪಿತೂರಿಗಳೋ

ಅಯೋಧ್ಯೆಯ ವಿವಾದಿತ ಜಾಗದಲ್ಲೇ ಶಿಲಾನ್ಯಾಸ ಮಾಡುವುದಾಗಿ ಬೊಬ್ಬೆ ಹೊಡೆದಿದ್ದ ವಿಶ್ವಹಿಂದು ಪರಿಷತ್-ಭಜರಂಗ ದಳಗಳು ಕೊನೆಗೂ ಸುಪ್ರೀಂ ಕೋರ್ಟ್‌ನ ಆದೇಶದಿಂದಾಗಿ ಮಾರ್ಚ್ 15 ರಂದು ಶಿಲಾದಾನ(!) ಮಾಡಿಯಾಗಿದೆ. ಕೇಂದ್ರ ಸರ್ಕಾರದ ಪರವಾಗಿ 'ಸ್ವಯಂಸೇವಕ' ಪ್ರಧಾನಿ ಪ್ರತಿನಿಧಿಯೇ ಶಿಲಾದಾನ ಪಡೆದಿರುವುದರಿಂದ ಇನ್ನು ಮಂದಿರ ನಿರ್ಮಾಣ ಸರ್ಕಾರದ ಹೊಣೆ - ತಮಗೆ ಜಯವೆಂದು ವಿ.ಹಿಂ.ಪ. ನಾಯಕರು ನೆಲ ಕಚ್ಚಿದರೂ ಮೀಸೆ ಮಣ್ಣಾಗಲಿಲ್ಲವೆಂದು ಜೈಕಾರ ಹಾಕಿಕೊಳ್ಳುತ್ತಿದ್ದಾರೆ. ನೆರೆದಿದ್ದ ಕರಸೇವಕರು ಊರುಗಳಿಗೆ ಹಿಂದಿರುಗುತ್ತಿದ್ದಾರಂತೆ! ಸಹಜಸ್ಥಿತಿಯತ್ತ, 'ಅಯೋಧ್ಯಾ' ಮರಳುತ್ತಿದೆಯಂತೆ!. ಸದ್ಯಕ್ಕೆ ಎಲ್ಲವೂ ಮುಗಿದಂತೆ ಎಂದು ಬಿಂಬಿಸಲಾಗುತ್ತಿದೆ. ಆದರೆ ಇನ್ನೆಂತಹ ಷ್ಯಡ್ಯಂತ್ರಗಳು ಅವರ ಕಾರ್ಯಾಚರಣೆಯಲ್ಲಿವೆ ಎಂದು ಮುಂದೆ ತಿಳಿಯಬೇಕಷ್ಟೆ!.

ಸಹಜ ಸ್ಥಿತಿ ಎಂದು ವರ್ಣಿಸುತ್ತಿದ್ದರೂ

ಎಸ್.ವೈ.ಗುರುಶಾಂತ್

ಈಗಲೂ ಗುಜರಾತ್‌ನಾದ್ಯಂತ ದ್ವೇಷ, ಲೂಟಿ, ಕೊಲೆಗಳು ನಿಂತಿಲ್ಲ.. ಬುಡಕಟ್ಟು ಜನಾಂಗವೇ ಹೆಚ್ಚಿರುವ ಗುಜರಾತ್‌ನ ಪ್ರದೇಶಗಳಲ್ಲೀಗ ಅವ್ಯಾಹತವಾಗಿ ಲೂಟಿ, ಕೊಲೆ ಬೆಂಕಿ ಇಕ್ಕುವ ಪ್ರಕರಣ ನಡೆದೇ ಇವೆ. 72 ತಾಸುಗಳಲ್ಲೇ ಗಲಭೆಗಳನ್ನು ನಿಯಂತ್ರಿಸಿದ ಮಹಾ ಕೀರ್ತಿವಂತ ಸರ್ಕಾರವೆಂದು ಮುಖ್ಯಮಂತ್ರಿ ಮೋದಿ, ಕೇಂದ್ರ ಗೃಹ ಸಚಿವ ಅಡ್ವಾಣಿ ಪೌರುಷದ ಪರಾಕಿನ



ಹಿಂದುತ್ವದ ಕ್ರಿಯಾಶೀಲತೆ?

ಹತ್ಯಾಕಾಂಡ ಕಾರಣ - ಕೆಲ ಘಟನೆಗಳು

ಗುಜರಾತ್‌ನಲ್ಲಿನ ಬರ್ಬರ ನರಮೇಧದ ಹತ್ಯಾಕಾಂಡ ಆರಂಭವಾದುದೇ ರಾಮ ಸೇವಕರಿದ್ದ ರೈಲ್ವೇ ಬೋಗಿಗಳಿಗೆ ಗೋದ್ರಾದಲ್ಲಿ ಬೆಂಕಿಹಚ್ಚಿಕೊಂದ ಘಟನೆಗೆ ಪ್ರತೀಕಾರವಾಗಿ ಎಂದು ಬಣ್ಣಿಸಲಾಗುತ್ತಿದೆ. ನಿಜ ಗೋದ್ರಾದಲ್ಲಿ ನಡೆದ ಘಟನೆ ಭೀಕರ- ಹೇಯವಾದುದು, ಆದರೆ ಇದನ್ನೇ ಮುಂದೆ ಮಾಡಿ ಸಾವಿರಾರು ಅಮಾಯಕರ ಪ್ರಾಣ-ಆಸ್ತಿ ಹಾನಿ ಸಮರ್ಥನೀಯವೇ? ನಾಗರೀಕತೆ ಸಮಾಜದಲ್ಲಿ ಕಾನೂನುಗಳಿಲ್ಲವೇ? ರೈಲ್ವೆ ಭೋಗಿಗೆ ಬೆಂಕಿ ಹಚ್ಚುವಂತಹ ವಿಕೋಪಕ್ಕೆ ಹೋಗಲು ಕಾರಣಗಳಾದರೂ ಏನು? ಎಂದು ಪ್ರಶ್ನಿಸಲಾಗುತ್ತಿದೆ. ಇದೊಂದು ಭಯೋತ್ಪಾದಕರ, ಐಎಸ್‌ಐ ಗಳ ಕೃತ್ಯವೆಂದು ಮುಖ್ಯಮಂತ್ರಿಗಳು ಹೇಳಿದರು. ಅಂದರೆ ಕ್ರಮಕೈಗೊಳ್ಳಬೇಕಾದದ್ದು ಭಯೋತ್ಪಾದಕರ ಮೇಲಲ್ಲವೇ? ಬದಲಾಗಿ

ನಿರಾಕರಿಸುತ್ತಾರೆ ಅವರು. ಆದರೆ ಈ ಎಲ್ಲಾ ಘಟನೆಗಳ ಒಳಹೊರಗು- ಹಿನ್ನಲೆಗಳನ್ನು ಗಮನಿಸಿದರೆ ಈ ನರಮೇಧದ ರೂಪುರೇಷೆ-ಪೂರ್ವಸಿದ್ಧತೆಗಳು ಹಲವಾರು ತಿಂಗಳುಗಳಿಂದಲೇ ನಡೆಸಲಾಗಿತ್ತು ಎಂಬುದು ಗೋಚರವಾಗುತ್ತಿವೆ. ಫೆಬ್ರವರಿ 27 ರ ಗೋದ್ರಾದ ಘಟನೆಯೂ ಕೂಡ ಸಮರ್ಥನೀಯವಲ್ಲದಿದ್ದರೂ ರಾಮಸೇವಕರ ಪ್ರಚೋದನಾತ್ಮಕ ಕೃತ್ಯಗಳ ಫಲವೂ ಹೌದು ಎಂಬುದಕ್ಕೆ ಪ್ರತ್ಯಕ್ಷ ಸಾಕ್ಷಿಗಳು ಇವೆ.

'ಸುಮಾರು ಎರಡೂವರೆಲಕ್ಷ ಬಜರಂಗದಳ ಹಾಗೂ 30 ಸಾವಿರ ದುರ್ಗಾ ವಾಹಿನಿ' ಕಾರ್ಯಕರ್ತರಿಗೆ ಗುಜರಾತ ರಾಜ್ಯದಲ್ಲಿನ ಮುಸ್ಲಿಂ ಅಲ್ಪಸಂಖ್ಯಾತರ ಚಲನವಲನಗಳ ಮೇಲೆ ನಿಗಾವಹಿಸಲು ಸೂಚಿಸಲಾಗಿದೆ. ಮತ್ತು ವಿಹೆಚ್‌ಪಿ, ಭಜರಂಗದಳದ ಕಛೇರಿಗಳಿಗೆ ನಿರಂತರವಾಗಿ ಮಾಹಿತಿಗಳುಳ್ಳ ವರದಿ ಕಳಿಸಲು ಸೂಚಿಸಲಾಗಿದೆ. ಜನರ, ಸಂಬಂಧಿಕರ, ಆಗಮನ, ಹೋಗುವವರು... ಹೀಗೆ ಮಾಹಿತಿಗಳನ್ನು ಸಂಗ್ರಹಿಸಲು ನಿರ್ದೇಶಿಸಲಾಗಿದೆ! ಎಂದು ಜನವರಿ 21-27 ರ ಪೀಪಲ್ಸ್ ಡೆಮಾಕ್ರಸಿಯಲ್ಲಿ ನಳಿನಿ ತನೇಜಾರವರು ವರದಿ ಮಾಡಿದ್ದನ್ನು ನೆನಪಿಸಿಕೊಳ್ಳಬಹುದು.

ಫೆಬ್ರವರಿ 27 ರ ಗೋದ್ರಾ ಘಟನೆಗೆ ಮೊದಲು ಅಯೋಧ್ಯೆಯತ್ತ ತೆರಳುತ್ತಿದ್ದ ರೈಲಿನಲ್ಲಿ ಫೆಬ್ರವರಿ 24 ರಂದು ನಡೆದ ಘಟನೆಗಳನ್ನು ಬಹುತೇಕ ಪತ್ರಿಕೆಗಳು ಬರಯಲೇ ಇಲ್ಲ. ಆದರೆ ಉತ್ತರ ಪ್ರದೇಶದ 'ಜನಮೋರ್ಚಾ' ಎಂಬ ಸಣ್ಣ ಪತ್ರಿಕೆ 25 ರ ಸಂಚಿಕೆಯಲ್ಲಿ ಭಜರಂಗದಳದ ಕಾರ್ಯಕರ್ತರ ದಾಂಧಲೆಯನ್ನು ವರದಿ ಮಾಡಿತು. ತ್ರಿಶೂಲಗಳನ್ನು ಹಿಡಿದ ಭಜರಂಗ ದಳದ ಕಾರ್ಯಕರ್ತರು 24 ರಂದು 'ಸಬರಮತಿ ಎಕ್ಸ್‌ಪ್ರಸ್'ನ ಬೋಗಿಗಳಲ್ಲಿ ಕುಳಿತಿದ್ದ ಮುಸ್ಲಿಮರಿಗೆ ತಿವಿದಿದ್ದಾರೆ. ಜೈಶ್ರೀರಾಂ ಎಂದು ಘೋಷಣೆ ಕೂಗಲು ಒತ್ತಾಯಿಸಿದ್ದಾರೆ. ಮಹಿಳೆಯರ ಬುರ್ಖಾ ತೆಗೆಸಿ ತ್ರಿಶೂಲದಿಂದ ತಿವಿದು ಅಮಾನವೀಯವಾಗಿ ನಡೆದುಕೊಂಡ ಪರಿಣಾಮ ಹಲವರು ಆಸ್ಪತ್ರೆಗೂ

ರೈಲಿನಿಂದ ಹೊರಗೆಸೆಯಲಾಗಿದೆ. ಮಾತ್ರವಲ್ಲ ಮುಸ್ಲಿಮರಂತೆ ಕಾಣುವವರನ್ನು ದಂಡಿಸಲಾಗಿದೆ. ಹಾದಿಯುದ್ದಕ್ಕೂ ಅತ್ಯಂತ ತುಚ್ಛವಾಗಿ, ಅವಹೇಳನಕಾರಿಯಾಗಿ ಮುಸ್ಲಿಮರ ವಿರುದ್ಧ ಆಕ್ರಮಣಕಾರಿ ಘೋಷಣೆ ಹಾಕಲಾಗಿದೆ. ಇದು ಘಟನೆ ನಡೆಯುವ ಎರಡು ದಿನಗಳ ಮೊದಲು. ಇನ್ನು ರೈಲ್ವೆ ನಿಲ್ದಾಣಗಳಲ್ಲಿ ಸಿಕ್ಕವರ ಗಡ್ಡ ಎಳೆದಾಟ, ಟೀ ಅಂಗಡಿಗಳಲ್ಲಿ ಹಣ ನೀಡದೇ ದಬ್ಬಾಳಿಕೆಗಳಿಗೆ ಲೆಕ್ಕವಿಲ್ಲ. ಹಾಗೆಯೇ 27 ರಂದು ಸಹ ಇಂತಹವುಗಳು ಮುಂದುವರಿದ ವರದಿಗಳಿವೆ. ಇವೆಲ್ಲದರ ಪರಿಣಾಮವಾಗಿ 27 ರ ಘಟನೆ ಸಂಭವಿಸಿದವೆಂದು ಹೇಳುತ್ತಾರೆ. ಈ ನಡುವೆ 27 ರ ಘಟನೆ ಸಂದರ್ಭದಲ್ಲಿ ಮುಸ್ಲಿಂ ಸಮುದಾಯದ ಹಿರಿಯರು, ಬುದ್ಧಿಜೀವಿಗಳು ಈ ಕೃತ್ಯಗಳಿಂದ ಪ್ರಚೋದಿತರಾಗಕೂಡದೆಂದು ತಾಳ್ಮೆ ವಹಿಸಬೇಕೆಂದು ಶಾಂತಿಗಾಗಿ ಮನವಿ ಮಾಡಿದ್ದಾರೆ. ಇದಾದ ಬಳಿಕವೂ ಈ ಬರ್ಬರ ಘಟನೆ ನಡೆದಿದೆ. 27 ರ ಗೋದ್ರಾದ ಘಟನೆ ಬಗ್ಗೆ ಕೂಲಂಕುಶವಾದ ಆಳವಾದ

ಂಗದ್ವೇಷದ ಹತ್ಯಾಕಾಂಡ

ರೂ ತಲೆ ತಗ್ಗಿಸುವಂತಹದ್ದು.

ರ್ಕಾರ ಪೂರ್ಣ ಶಾಮೀಲಾಗಿದೆ.

ುತ್ತ ಒಂದು ವರದಿ

ಎದುರಲ್ಲೇ ಸುಳ್ಳಿನ ಸರದಾರರ ಕುತಂತ್ರಗಳನ್ನು ಆ ಬರ್ಬರ ಘಟನೆಗಳು ಮುಖಕ್ಕೆ ಹೊಡೆಯತೊಡಗಿವೆ.

ಸರ್ಕಾರದ ನೆರಳಿನಲ್ಲಿ

ಗೋದ್ರಾದ ಘಟನೆಯಲ್ಲಿ ಮಹಿಳೆಯರು, ಮಕ್ಕಳು ಸೇರಿ 58 ಜನ ಜೀವಂತ ದಹನವಾದರು. ಇದನ್ನೇ ಅನುಸರಿಸಿ ಪ್ರತೀಕಾರವಾಗಿ ರಾಜ್ಯಾದ್ಯಂತ ಹಿಂಸೆ ಭುಗಿಲೆದ್ದಿತು. ಅಹ್ಮದಾಬಾದ್ ನಗರವೇ ಪೂರ್ತಿ ಹೊತ್ತಿ ಉರಿಯಿತು. ಗೃಹಸಚಿವರ ಮನೆ ಪಕ್ಕದಲ್ಲಿದ್ದ ಮುಸ್ಲಿಂ ಮನೆಗಳನ್ನೂ ಉಳಿಸಿಕೊಳ್ಳಲಾಗಲಿಲ್ಲ. ಮೇಲಾಗಿ ಅವರ ಮನೆಗಳ ಮೇಲಿನಿಂದಲೇ ಬೆಂಕಿ ತೂರಿ, ದಹಿಸಿದ ವರದಿಗಳಿವೆ. ನಾಡ ಪಿಸ್ತೂಲ್, ಕತ್ತಿಗಳು, ಹರಿತ ಆಯುಧ, ಕಬ್ಬಿಣ ರಾಡು, ಪೆಟ್ರೋಲ್ ಬಾಂಬ್ ಹಿಡಿದು ಓಡಾಡುತ್ತಿದ್ದ ದೃಶ್ಯಗಳು ಟಿ.ವಿ.ಗಳಲ್ಲಿ ಕಂಡವು. ಎಲ್ಲೆಲ್ಲೂ ಮುಸ್ಲಿಂ ಅಂಗಡಿಗಳು, ಹೋಟೆಲುಗಳು, ಮನೆಗಳು ಲೂಟಿಯಾಗಿ ಬೆಂಕಿಗಾಹುತಿಯಾದವು. ಸಾವಿರಾರು ಜನರು ಜೀವಂತ ಸುಡಲ್ಪಟ್ಟರು. **ಕಾಂಗ್ರೆಸ್‌ನ ಮಾಜಿ ಸಂಸತ್ ಸದಸ್ಯರಾಗಿದ್ದ ಇಷಾನ್ ಜಾಫ್ರಿಯವರು ಹತ್ತಾರು ಬಾರಿ ಪೋಲೀಸರು ರಕ್ಷಿಸಬೇಕೆಂದು ಕೇಳಿಕೊಂಡರೂ ಅತ್ತ ತಲೆ ಹಾಕಲೇ ಇಲ್ಲ. ಕೊನೆಗೆ ಅವರು ಹಾಗೂ ಕುಟುಂಬದವರನ್ನು ಜೀವಂತ ಸುಡಲಾಯಿತು.** ಹೀಗೆ... ಅಹ್ಮದಾಬಾದ್, ಭಾವನಗರ, ಬರೋಡಾ, ರಾಜ್‌ಕೋಟ್, ಸೂರತ್, ನಗರಗಳು ದಗದಹಿಸತೊಡಗಿದವು. ಭಾವನಗರದಂತಹ ಕಡೆ ಮಾರ್ಚ್ 1 ರಂದು ಸುಮಾರು 60 ಸ್ಥಳಗಳಲ್ಲಿ ನಿಯೋಜಿತ ಗೂಂಡಾಗಳು ದೊಡ್ಡ ಪ್ರಮಾಣದಲ್ಲಿ ದಾಂಧಲೆಗೆ ಇಳಿದ ವರದಿ ಬಂತು. 8 ಜನರನ್ನು ಕಣ್ಣೆದುರೇ ಸುಟ್ಟದ್ದಾಗಿ ಅಲ್ಲಿಗೆ ತೆರಳಿದ್ದ ಮಾಧ್ಯಮದ ವರದಿಗಾರರು ಹೇಳಿದರು. ಅಲ್ಲಿ ಮುಸ್ಲಿಂರ 16 ಕಾರ್ಖಾನೆಗಳನ್ನು ಧ್ವಂಸಗೊಳಿಸಲಾಗಿದೆ. ಅಲ್ಪಸಂಖ್ಯಾತರ ಶಾಲೆಗಳನ್ನು ಸುಡಲಾಗಿದೆ. 250 ಪ್ರದೇಶಗಳು ಹಲವಾರು ಮಸೀದಿಗಳು ಆಕ್ರಮಣದಲ್ಲಿ ನಲುಗಿವೆ. ಈಗ ಕರಪತ್ರ ಹೊರಡಿಸಿ ಮುಸ್ಲಿಮರಿಗೆ ಪೂರ್ಣ ಬಹಿಷ್ಕಾರ ಹಾಕಲು ವಿ.ಹಿ.ಪ. ಕರೆ ನೀಡಿದೆ. ಆರ್ಥಿಕವಾಗಿ ಅವರನ್ನು ನಾಶಗೊಳಿಸಲು ಹೇಳಿದೆ. ಒಟ್ಟು ರಾಜ್ಯದಲ್ಲಿ 600 ಜನ ಸತ್ತಿದ್ದಾರೆಂದು ಸರ್ಕಾರ ಈಗ ಹೇಳುತ್ತಿದೆ.





ಧ್ವಂಸಗೊಂಡ ಮಸೀದಿ

ದೌರ್ಜನ್ಯ, ಲೂಟಿ, ಆಕ್ರಮಣ, ಅತ್ಯಾಚಾರಗಳಿಗೆ ಲೆಕ್ಕವಿಲ್ಲ. ಅವು ನಿಧಾನವಾಗಿ ಹೊರಬರಬೇಕಷ್ಟೆ.

ಜನಾಂಗ ದ್ವೇಷ

ಇಷ್ಟೆಲ್ಲಾ ನಡೆದದ್ದು ಪೋಲೀಸರ ಕಣ್ಣೆದುರೇ. ಇಂತಹ ಕೊಲೆ, ದಹನ, ಲೂಟಿಗಳಿಗೆ ಕೋಮುವಿಭಜನೆ-ವಿದ್ವೇಷಗಳನ್ನು ಉಂಟು ಮಾಡಲಾಗಿದೆ. ನಿತ್ಯದ ಬದುಕಿನ ಸಮಸ್ಯೆಗಳಿಂದ ಜನರನ್ನು ಮರೆಮಾಚಿ ಕೋಮುವಾದದ ವಿಷ ನಾಗರಗಳನ್ನಾಗಿ ಪರಿವರ್ತಿಸಲಾಗುತ್ತಿದೆ. ಪೋಲೀಸರ ವಾಹನಗಳಲ್ಲಿ ಪೆಟ್ರೋಲ್, ಸೀಮೆ ಎಣ್ಣೆ ಪೂರೈಸಲಾಗುತ್ತಿತ್ತು ಎಂದರೆ ಪರಿಸ್ಥಿತಿ ಎಷ್ಟೊಂದು ಘೋರವಾಗಿತ್ತು ಎಂದು ಊಹಿಸಬಹುದು. ಕರ್ಫ್ಯೂ ವಿಧಿಸಲಾಗಿತ್ತು ನಿಜ ಆದರೆ ಅಲ್ಪಸಂಖ್ಯಾತರು ಹೊರಬರದಂತೆ ತಡೆಯಲೆಂದೇ ಎಂಬುದು ಪೋಲೀಸ್ ಗೋಲಿಬಾರ್‌ನಲ್ಲಿ ಸತ್ತವರಲ್ಲಿ ಬಹಳ ಜನ ಅಲ್ಪಸಂಖ್ಯಾತರು ಹಾಗೇ ಬಂಧಿತರೂ ಕೂಡ.

ಅಮೆರಿಕಾ ಅಧಿಪತ್ಯ ಮತ್ತು ಗಲಭೆ


ಒಂದೆಡೆ ಅತ್ಯಂತ ಜನವಿರೋಧಿ, ಬಹುರಾಷ್ಟ್ರೀಯ ಕಂಪನಿಗಳ, ಸಾಮ್ರಾಜ್ಯಶಾಹಿ ಅಮೆರಿಕಾದಂತಹವರ ಪರವಾದ ಬಜೆಟ್ ಮಂಡಿಸಿ, ಅಮೆರಿಕಕ್ಕೆ ದೇಶ ಒತ್ತೆ ಇಡುವ ಕ್ರಮ ಅನುಸರಿಸುತ್ತಿರುವುದು, ಹಲವಾರು ಹಗರಣಗಳು ಪುಂಖಾನುಪುಂಖವಾಗಿ ಹೊರಬರುತ್ತಿರುವಾಗ, ಇಂತಹ ನೀತಿಗಳ ವಿರುದ್ಧ ದೇಶದ ದುಡಿಯುವ ವರ್ಗ - ವಿವಿಧ ಕಾರ್ಮಿಕ ಸಂಘಟನೆಗಳು, ಎಡಪಕ್ಷಗಳು ಸರ್ಕಾರದ ದೇಶದ್ರೋಹಿ ನೀತಿಗಳ ವಿರುದ್ಧ ಸಮರ ಸಾರಿರುವಾಗ ಈ ಘಟನೆಗಳು ನಡೆಯುತ್ತಿವೆ ಎಂಬುದನ್ನು ನೆನಪಿಸಿಕೊಳ್ಳಬೇಕು. ಹಾಗೆಯೇ 1992 ರಲ್ಲಿ ಸಹ ವಿನಾಶಕಾರಿ ಆರ್ಥಿಕನೀತಿಗಳ ವಿರುದ್ಧ ದುಡಿವ ಜನರ ಹೋರಾಟ ದೇಶದೆಲ್ಲೆಡೆ ಚಿಮ್ಮುತ್ತಿರುವಾಗ ಆಯೋಧ್ಯಾಕಾಂಡ ಜರುಗಿತು. ಈಗೀಗಲಂತೂ ಅಮೆರಿಕಾದ ಸಾಮ್ರಾಜ್ಯಶಾಹಿಯೊಂದಿಗೆ ಜಂಟಿ ಕಾರ್ಯಾಚರಣೆ, ಮಿಲಿಟರಿ ಕವಾಯಿತು, ಮೇಲಾಗಿ ಫೆಡರಲ್ ಬ್ಯೂರೋ ಆಫ್ ಇನ್‌ವೆಸ್ಟಿಗೇಷನ್(ಎಫ್‌ಬಿಐ) ನಂತಹ ಕುಖ್ಯಾತ ಪಿತೂರಿಕಾರ ಸಂಸ್ಥೆಗಳಿಗೆ ಭಾರತದ ಒಳಗೆ ನೆಲೆ ನೀಡಿರುವ ಹಿನ್ನೆಲೆಯನ್ನು ಅರ್ಥ ಮಾಡಿಕೊಳ್ಳಬೇಕಿದೆ. ಜಾಗತಿಕ ಅಧಿಪತ್ಯಕ್ಕೆ ಹಲವು ರಾಷ್ಟ್ರಗಳಲ್ಲಿ ಜನಾಂಗಿಯ ಗಲಭೆಯೆಬ್ಬಿಸಿ ಆ ರಾಷ್ಟ್ರಗಳನ್ನು ನುಂಗಿ ನೀರು ಕುಡಿದಿರುವ ಅನುಭವಗಳು ಕಣ್ಣೆದುರಿವೆ. ಆದ್ದರಿಂದ ಇಂತಹ ಕೋಮುವಾದಿ ಫ್ಯಾಸಿಸ್ಟ್ ಮನೋಭಾವದ ಶಕ್ತಿಗಳ ವಿರುದ್ಧ ಹೋರಾಟ ಬಹುಮುಖೀಯವಾಗಿದೆ. ಮೇಲಾಗಿ ಬಿಜೆಪಿ ಸರ್ಕಾರ ತನ್ನ ದುಷ್ಟ ನೀತಿಗಳಿಂದ ಈಚಿಗಿನ ಸ್ಥಳೀಯ ಚುನಾವಣೆಗಳಲ್ಲಿ ಧೂಳಿಪಟ ವಾಗಿದೆ. ಇಂತಹ ಕೋಮು ದ್ವೇಷದ ಕಿಚ್ಚಿನಿಂದ ಮತ್ತೇ ಅಧಿಕಾರ ಹಿಡಿವ ದುರಾಲೋಚನೆ ಎದ್ದಿದೆ.

ರಾಜಿನಾಮೆ ನೀಡಬೇಕು

ಇಷ್ಟೆಲ್ಲಾ ಆದರೂ ನರೇಂದ್ರಮೋದಿ ಸರ್ಕಾರವನ್ನು ಪ್ರಧಾನಿ ವಾಜಪೇಯಿ ಗೃಹಸಚಿವ ಅಡ್ವಾಣಿ ಪಾರ್ಲಿಮೆಂಟಿನಲ್ಲಿ ಸಮರ್ಥಿಸಿಕೊಂಡದ್ದು ಹೇಸಿಗೆ ತರುವಂತಹದ್ದು. ಸಂವಿಧಾನಕ್ಕೆ ಬದ್ಧತೆ, ಮಾನ ಮರ್ಯಾದೆಯಿದ್ದರೆ ತಕ್ಷಣವೇ ಅಡ್ವಾಣಿ ರಾಜೀನಾಮೆ ನೀಡಬೇಕಿತ್ತು. ಹಾಗೆಯೇ ಇನ್ನಾದರೂ ನರಹಂತಕ ಫ್ಯಾಸಿಸ್ಟ್ ಸಂತತಿಯ

ಹಿಂದುತ್ವದ ಪ್ರಯೋಗಾಲಯ ಈ ಗುಜರಾತ್

ಪೋಲೀಸರು ನಿಷ್ಕ್ರಿಯರಾಗಿ ಬೆಂಬಲಿಸುತ್ತಿದ್ದರು ಎಂದು ಹಲವಾರು ಘಟನೆಗಳನ್ನು ಮಾಧ್ಯಮಗಳು ವರದಿ ಮಾಡಿವೆ. ಜಿಲ್ಲಾ ಕಲೆಕ್ಟರ್, ಎಸ್.ಪಿ.ಗಳು ನಿಷ್ಕ್ರಿಯರಾಗಿದ್ದಾರೆ. ಸ್ವತಃ ಮುಖ್ಯಮಂತ್ರಿ ಮೋದಿಯೇ ಇದು 'ಕ್ರಿಯೆಗೆ ಸಿಕ್ಕ ಪ್ರತಿಕ್ರಿಯೆ' ಅಷ್ಟೇ ಏನೂ ಮಾಡಲಾಗದು ಎಂದು ಹೇಳಿರುವುದು, ತಾನು ಆಯ್ಕೆಯಾದ ಅಹ್ಮದಾಬಾದ್ ಹತ್ತಿ ಉರಿಯುತ್ತಿದ್ದರೂ ಇಣುಕಿಯೂ ನೋಡದೇ ಇದ್ದ ಗೃಹ ಸಚಿವ ಅಡ್ವಾಣಿ ವರ್ತನೆಗಳು... ಇಡೀ ಗುಜರಾತ್‌ನ ನರೇಂದ್ರ ಮೋದಿ ಸರ್ಕಾರ ಹಾಗೂ ಕೇಂದ್ರದ ವಾಜಪೇಯಿ ಸರ್ಕಾರ ಪೂರ್ಣವಾಗಿ ಈ ಬರ್ಬರ ನರಮೇಧದಲ್ಲಿ ಶಾಮೀಲಾಗಿರುವುದನ್ನು ತೋರಿಸುತ್ತದೆ. ಅಲ್ಲಿಗೆಭೇಟಿ ನೀಡಿದ ಶಬನಾಆಜ್ಮಿ, ಖ್ಯಾತ ಇತಿಹಾಸಕಾರ ಕೆ.ಎಂ.ಫಣಿಕ್ಕರ್, ಮುಂತಾದವರು 'ಇದು ಪ್ರಭುತ್ವವೇ ನಡೆಸಿದ ಭಯೋತ್ಪಾದನೆ, ಮುಸ್ಲಿಂ ಅಲ್ಪಸಂಖ್ಯಾತರ ಮೇಲೆ ನಡೆಸಿದ ಜನಾಂಗ ದ್ವೇಷಿ ಹತ್ಯೆ' ಎಂದಿದ್ದಾರೆ. ಸೀತಾರಾಂ ಯೆಚೂರಿ, ಬರ್ದನ್, ಸೋಮನಾಥ ಚಟರ್ಜಿ, ಸೋನಿಯಾ ಗಾಂಧಿ ಮುಂತಾದವರ ಭೇಟಿಯೂ ಇದನ್ನೇ ದೃಢಪಡಿಸಿದೆ.



ಹಿಂದೂ ರಾಷ್ಟ್ರದ ಪ್ರಯೋಗಶಾಲೆ

ಸೇನಾ ಪಡೆಗಳನ್ನು ಮೂರನೇ ದಿನ ಕಳಿಸಿಕೊಳ್ಳಲಾಯಿತಾದರೂ ಗಲಭೆಗ್ರಸ್ತ ಪ್ರದೇಶಗಳ ಬದಲಿಗೆ ರಾಜ್ಯ ಆಡಳಿತ ಬೇರೆಡೆಗೆ ನಿಯೋಜಿಸಲಾಗಿತ್ತು ಎಂಬುದು ಬಿಜೆಪಿಯ ಮೋದಿ ಸರ್ಕಾರ ಎಂತಹ ಹೇಯ ತಂತ್ರವನ್ನು ಹೆಣೆಯಲಾಗಿತ್ತು ಎಂದು ಸಾಬೀತು ಪಡಿಸುತ್ತದೆ. ಇದಕ್ಕೆ ಐಎಎಸ್, ಐಪಿಎಸ್ ಅಧಿಕಾರಿಗಳು, ಸಂವಿಧಾನದ ಮೇಲೆ ಪ್ರಮಾಣ ಸ್ವೀಕರಿಸಿದ ಆಡಳಿತಗಾರರು ಕನಿಷ್ಟ ನೀತಿ ಸಂಹಿತೆಯನ್ನು ಅನುಸರಿಲ್ಲವೆಂಬುದು ಕಂಡುಬರುತ್ತದೆ. ಗುಜರಾತನ್ನು ಈ ಫ್ಯಾಸಿಸ್ಟರು 'ಹಿಂದು ರಾಷ್ಟ್ರದ' ಪ್ರಯೋಗಲಾಯವನ್ನಾಗಿಸಿದ್ದಾರೆ. ಶಿಕ್ಷಣ-ಆಡಳಿತದ ಸರ್ಕಾರ ಎಲ್ಲಾ ಆಯಕಟ್ಟಿನ ಜಾಗಗಳಲ್ಲಿ 'ಆರ್.ಎಸ್.ಎಸ್.ನ ಸ್ವಯಂ ಸೇವಕರನ್ನು ತುಂಬಿರುವ ಭಾರಿ ಪಿತೂರಿಯ ಹಿಡೆನ್ ಅಜೆಂಡಾ ಇಲ್ಲಿ ಬಯಲಾಗಿದೆ.

ಹಿಟ್ಲರ್‌ನ ಕ್ಯಾಂಪ್‌ನಂತೆ...

ಏಳು ದಿನಗಳ ಈ ಬರ್ಬರ ಹಿಂಸಾಕಾಂಡದಲ್ಲಿ ಆದ ಹಾನಿ ಲೆಕ್ಕಕ್ಕೆ ಸಿಗದಷ್ಟು. ಅಹ್ಮದಾಬಾದ್ ನಗರವೊಂದರಲ್ಲೇ ಬದುಕುಳಿದು, ನಿರಾಶ್ರಿತರಾದವರ ಸಂಖ್ಯೆ 50 ಸಾವಿರಕ್ಕೂ ಹೆಚ್ಚು. ಇವರು ಮುಸ್ಲಿಂ ಅಲ್ಪಸಂಖ್ಯಾತರು. ಆಕ್ರಮಣಗಳಿಂದ ಹೇಗೋ ತಪ್ಪಿಸಿಕೊಂಡು ಮಸೀದಿ ಸೇರಿದವರು ಹಲವರು. ಕೆಲವರು ಶಾಲೆಗಳಲ್ಲಿ, ಆದರೆ ಎಲ್ಲವನ್ನೂ ಮಕ್ಕಳು, ಗಂಡ, ಹೆಂಡತಿಯನ್ನು ಕಳೆದುಕೊಂಡ ಈ ಜನರಿಗೆ ಕಿಂಚಿತ್ತೂ ಗಂಜಿ ಹಾಗೂ ಅಗತ್ಯವಿರುವ ಪುನರ್ವಸತಿ ಸೌಲಭ್ಯಗಳನ್ನು ಅಧಿಕಾರಿಗಳು ನೀಡಿಲ್ಲ. ಅಕ್ಕಿ, ಹಾಲು, ಇಲ್ಲದೇ ಹಾಹಾಕಾರ ಪಡುತ್ತಿರುವಾಗ ಹಿರಿಯ ಐಎಎಸ್ ಅಧಿಕಾರಿ ಹೇಳುತ್ತಾನೆ 'ಇವರನ್ನು(ಮುಸ್ಲಿಂ) ನಾಗರೀಕರೆಂದು ಸರಕಾರ ಪರಿಗಣಿಸಿಲ್ಲ. ಇಂತಹವರಿಗೆ ಇನ್ನು ಸೌಲಭ್ಯಗಳ ಪ್ರಶ್ನೆಯೇ ಉದ್ಭವಿಸುವುದಿಲ್ಲ'!!. ಇಂತಹ ಪ್ರದೇಶಗಳಲ್ಲಿ ಸೌಲಭ್ಯಗಳಿಲ್ಲದೇ ಹಲವು ರೋಗಗಳು ಸಾಂಕ್ರಾಮಿಕವಾಗಿ ಹಬ್ಬುವ ಅಪಾಯ ತಲೆದೋರಿದೆ. ಸುಟ್ಟ ಗಾಯಗಳಿಂದ, ಏಟುಗಳಿಂದ ಆಸ್ಪತ್ರೆ ಸೇರಿದವರಿಗೆ ಔಷಧಿ, ಶುಶ್ರಾಷೆಯೇ ಇಲ್ಲ. ನಿರಾಶ್ರಿತರ ಈ ಕ್ಯಾಂಪ್‌ಗಳು ಒಂದುರೀತಿಯಲ್ಲಿ ಹಿಟ್ಲರನ 'ಪೊಗ್ರಾಂ' (Pogrom) ಯೋಜನೆಯಂತೆ 'ಕಾನ್‌ಸೆಂಟ್ರೇಷನ್ ಕ್ಯಾಂಪ್'ಗಳ ಶ್ಯಾಂಪಲುಗಳನ್ನು ನೆನಪಿಸುತ್ತವೆ. ವಾಜಪೇಯಿ, ಮೋದಿ, ಅಡ್ವಾಣಿ, 'ಸಿಂಘಾಲ್, ಹಿಟ್ಲರನ ಸಂತತಿ ಅಲ್ಲವೇ? ಇವೆಲ್ಲಾ ಧರ್ಮನಿರಪೇಕ್ಷಿತ, ಪ್ರಜಾಪ್ರಭುತ್ವ ಭಾರತದಲ್ಲಿ ಜರುಗುತ್ತಿವೆ ಎಂಬುದೇ ಆತಂಕಕಾರಿಯಾಗಿದೆ. ಬಿಜೆಪಿ ಅಧಿಕಾರಕ್ಕೆ ಬಂದರೆ ಎಲ್ಲವೂ ಸುರಕ್ಷಿತ, ಭಯ ದೂರ ಎಂದು ಕೂಗುತ್ತಿದ್ದವರು, ಈಗ ಅಧಿಕಾರಕ್ಕೆ ಒಮ್ಮೆ ಹೆಚ್ಚಿನ ಶಕ್ತಿಯೊಂದಿಗೆ ಕೇಂದ್ರದಲ್ಲಿ ಅಧಿಕಾರ ಹಿಡಿದರೆ ಎಂತಹ ಸ್ಥಿತಿ ಕಾದಿದೆಎಂದು ಯೋಚಿಸಿದರೆ ದಿಗಿಲಾಗುತ್ತದೆ. ಈ ಎನ್‌ಡಿಎ ಭಾಗಿದಾರರೂ ಸಹ ಅಧಿಕಾರಕ್ಕಂಟಿಕೊಳ್ಳಲು ಹೆಣಗುತ್ತಿರುವ ಪರಿ ಸಂದರ್ಭಸಾದಕತನ ನಾಚಿಕೇಗೇಡು.

ಗೋದ್ರಾದ ಘಟನೆಯನ್ನು ಬೇರಾವ ಪಕ್ಷಗಳೂ ಖಂಡಿಸಲಿಲ್ಲವೆಂದು ಯಥಾಪ್ರಕಾರ ಬಿಜೆಪಿ-ಆರ್‌ಎಸ್‌ಎಸ್ ಆರೋಪಿಸುತ್ತಿವೆ. ಆ ಘಟನೆಯನ್ನು ತಕ್ಷಣವೇ ಎಡಪಕ್ಷಗಳು, ಜನತಾದಳ(ಎಸ್), ಕಾಂಗ್ರೆಸ್, ಅಲ್ಲದೇ ಬುದ್ಧಿಜೀವಿಗಳು ಮುಂತಾದವರು ಖಂಡಿಸಿದ್ದಾರೆ. ಹಾಗೆಯೇ ನಂತರದಲ್ಲಿ ಪ್ರತೀಕಾರವಾಗಿ ನಡೆದ ನರಮೇಧವನ್ನು ಸಹ. ಆದರೆ ಇವಾವುಗಳನ್ನು ಸಂಘ ಪರಿವಾರಕ್ಕೆ ಬೇಕಿಲ್ಲ. ಹಾಗೆ ಸುಳ್ಳು ಹೇಳಿದರೆ ಮಾತ್ರವೇ ತಮ್ಮ ಸುಳ್ಳನ್ನು ಉಳಿಸಿಕೊಳ್ಳಬಹುದಲ್ಲ. ಹೀಗಾಗಿ ಬರಿ ಗೋದ್ರಾದ ಘಟನೆಯೊಂದನ್ನೇ ಖಂಡಿಸಿ ಕರ್ನಾಟಕದಲ್ಲಿಯೂ ಬಂದ್ ಕರೆ ನೀಡಲಾಯಿತು. ಕೆಲವು ಜಿಲ್ಲೆಗಳಲ್ಲಿ ಮಾತ್ರ ಬಂದ್ ಆಯಿತು. ಆದರೆ ಬಂಗಾರುಪೇಟೆ, ಅರಸಿಕೆರೆ, ಬಿಜಾಪುರ, ಶಿವಮೊಗ್ಗ, ರಾಣೆಬೆನ್ನೂರು, ಹೊಸಕೋಟೆ ಬೆಂಗಳೂರು ನಗರ ಮುಂತಾದೆಡೆ ಗಲಭೆ ಎಬ್ಬಿಸಲಾಯಿತು. ಅವರ ಪುಂಡಾಟಿಕೆ ಒಂದು ಹಂತದಲ್ಲಿ ಆಡಳಿತಾತ್ಮಕ ನಿಯಂತ್ರಣ ಹಾಕಿದ ಕೃಷ್ಣ ಸರ್ಕಾರದ ವಿರುದ್ಧ ಆಂತರಿಕ ಭಯೋತ್ಪಾದನಾ ವಿರೋಧಿ ದಿನವನ್ನಾಗಿ ಆಚರಿಸಿದರು. ಆದರೆ ಬೆಂಗಳೂರು ಒಳಗೊಂಡು ಇವೆಲ್ಲಾ ಸಾಂಕೇತಿಕವಾಗಿ ನಡೆದವು. ಜನತೆ ಕೋಮುವಾದಿಗಳ ಕೃತ್ಯಗಳಿಗೆ ಅಷ್ಟಾಗಿ

ತ್ರಿಪುರಾ ಚುನಾವಣೆ

ಎಡರಂಗಕ್ಕೆ ಅಮೋಘ ವಿಜಯ

ತ್ರಿಪುರಾ ಪಶ್ಚಿಮ ಲೋಕಸಭಾ ಕ್ಷೇತ್ರಕ್ಕೆ ನಡೆದ ಉಪಚುನಾವಣೆಯಲ್ಲಿ ಎಡರಂಗದ ಸಿಪಿಐ(ಎಂ) ಅಭ್ಯರ್ಥಿ ಕಾ.ಖಗೇನ್‌ದಾಸ್ ಅಮೋಘ ವಿಜಯ ಸಾಧಿಸಿದ್ದಾರೆ. ಸಿಪಿಐ(ಎಂ) ಮತ್ತು ಎಡರಂಗದ ಈ ಗೆಲುವಿನ ಹಾದಿಯಲ್ಲಿ ವಿರೋದಪಕ್ಷಗಳು ಧೂಳಿಪಟವಾಗಿವೆ. ತೃಣಮೂಲ ಬಿಜೆಪಿ ಅಪವಿತ್ರ ಮೈತ್ರಿ ಠೇವಣಿಕಳೆದುಕೊಂಡು ತೀವ್ರ ಮುಖಭಂಗ ಅನುಭವಿಸಿದೆ.

ಈ ಅಭೂತಪೂರ್ವ ಜಯಕ್ಕೆ ಕಾರಣರಾದ ಜನತೆಯನ್ನು ಎಡರಂಗ ಹೃದಯಪೂರ್ವಕವಾಗಿ ಅಭಿನಂದಿಸಿದೆ. ಈ ಚುನಾವಣಾ ವಿಜಯದಿಂದ ಈ ಕ್ಷೇತ್ರವನ್ನು ಎಡರಂಗ ಸತತವಾಗಿ ನಾಲ್ಕನೇ ಬಾರಿಗೆ ಗೆದ್ದಂತಾಗಿದೆ. ಈ ವಿಜಯವು ವಿಛಿದ್ರಕಾರಿ ಮತ್ತು ಪ್ರತಿಗಾಮಿ ಶಕ್ತಿಗಳ ವಿರುದ್ಧ ನಿರಂತರವಾಗಿ ಹೋರಾಡುತ್ತಿರುವ ಎಡರಂಗಕ್ಕೆ ಜನತೆ ನೀಡಿದ ಬೆಂಬಲವಾಗಿದೆ. ಮತ್ತು ಬುಡಕಟ್ಟು ಹಾಗೂ ಬುಡಕಟ್ಟೇತರ ಜನರ ನಡುವಿನ ಐಕ್ಯತೆಯ ಪ್ರತೀಕವಾಗಿದೆ. ಈ ನಿರ್ಲಕ್ಷಿತ ಪ್ರದೇಶಗಳಿಗೆ ಆಧ್ಯತೆಯೊಡನೆ ರಾಜ್ಯದ ಸರ್ವಾಂಗೀಣ ಅಭಿವೃದ್ದಿಗೆ ಜನತೆ ನೀಡಿದ ಸ್ಪೂರ್ತಿಯಾಗಿದೆ. ಈ ತೀರ್ಪು ಕಾಂಗ್ರೆಸ್-ಐಎನ್‌ಪಿಟಿ ನಡುವಿನ ಅಪವಿತ್ರ ಮೈತ್ರಿಗೆ ಜನತೆಯು ವ್ಯಕ್ತಪಡಿಸಿದ ತೀವ್ರ ದ್ವೇಷದ ಫಲವಾಗಿದೆ. ಐಎನ್‌ಪಿಟಿಯು ಸಾಮ್ರಾಜ್ಯಶಾಹಿ ಪ್ರಾಯೋಜಿತ, ತ್ರಿಪುರಾದ ಶಾಂತಿ ಮತ್ತು ಭದ್ರತೆಯೊಡನೆ ಚೆಲ್ಲಾಟವಾಡುತ್ತಿರುವ ಭಯೋತ್ಪಾದಕ ಸಂಘಟನೆ ತ್ರಿಪುರಾ ರಾಷ್ಟ್ರಿಯ ವಿಮೋಚನಾ ರಂಗ (ಎನ್‌ಎಲ್‌ಎಫ್‌ಟಿ) ಯ ರಾಷ್ಟ್ರೀಯ ಅಂಗವಾಗಿದೆ. ಚುನಾವಣೆಯ ಸಂದರ್ಭದಲ್ಲಿ ಕಾಂಗ್ರೆಸ್-ಐಎನ್‌ಪಿಟಿ ನಡೆಸಿದ ಅಕ್ರಮ ಭ್ರಷ್ಟಾಚಾರಗಳಿಗೆ ಜನತೆ ನೀಡಿದ ಉತ್ತರ ಈ ಪಲಿತಾಂಶ. ಚುನಾವಣೆ ಕೆಲವೇ ದಿನಗಳ ಮುನ್ನ ಆಕಸ್ಮಿಕವಾಗಿ ಹೀನ ಪಿತೂರಿಯೊಂದು ಮಾಧ್ಯಮದವರ ಕಣ್ಣಿಗೆ ಬಿತ್ತು. ಕಾಂಗ್ರೆಸ್ ಮತ್ತು ಐಎನ್‌ಪಿಟಿಯು 'ಅಸ್ಸಾಂ ರೈಫಲ್ಸ್'ನ ಉನ್ನತ ಮುಖಂಡರ ಜೊತೆ ಅಗರ್ತಲಾದಲ್ಲಿ ಸಭೆ ನಡೆಸಿ ಎಡರಂಗವನ್ನು ಸೋಲಿಸಲು ಸಂಚು ರೂಪಿಸಿದ್ದು, ಇದೇ ರೀತಿಯ ಪಿತೂರಿಯಿಂದಾಗಿ ಜಿಲ್ಲಾ ನಿಮಿತ್ತ ಮಂಡಳಿ ಚುನಾವಣೆಗಳ ಸಮಯದಲ್ಲಿ ಎಡರಂಗಕ್ಕೆ ಹಿನ್ನಡೆ ಉಂಟುಮಾಡಲು ಸಿದ್ದವಾಗಿತ್ತು.

ಈ ಚುನಾವಣೆ ವಿಶ್ಲೇಷಣೆ ನಡೆಸಿದ ಎಡರಂಗವು ಎ.ಡಿ.ಸಿ. ಚುನಾವಣೆ ಸಮಯದಲ್ಲಿ ಐಪಿಎಫ್‌ಟಿ ಹೇಗೆ ಪಲಿತಾಂಶಗಳನ್ನು ತಿರುಚಿದೆ ಎಂದು ಈ ಚುನಾವಣೆ ತೋರಿಸಿದೆ ಎಂದು ಅಭಿಪ್ರಾಯ ಪಟ್ಟಿದೆ. ಏಕೆಂದರೆ 1998ರ ಚುನಾವಣೆಗಳಲ್ಲಿ ಕಾಂಗ್ರೆಸ್-ಟಿಯುಜೆಎಸ್ ಜಯಗಳಿಸಿದ್ದ 12 ವಿಧಾನಸಭಾ ಸ್ಥಾನಗಳಲ್ಲಿ ಎಡರಂಗ 9 ಕಡೆ ಮುನ್ನಡೆ ಸಾಧಿಸಿದೆ, ಉಳಿದ 3 ಕಡೆಯಲ್ಲಿ ಕೆಲವೇ ಮತಗಳಿಂದ ಎಡರಂಗ ಹಿನ್ನಡೆ ಕಂಡಿದೆ.

ಉಗ್ರಗಾಮಿಗಳ ಹಾವಳಿಯಿಂದಾಗಿ ಹಲವಾರು ಗುಡ್ಡಗಾಡು ಪ್ರದೇಶದ ಜನತೆ ಮತದಾನ ಮಾಡಲು ಸಾಧ್ಯವಾಗದಿದ್ದರೂ ಈ ಚುನಾವಣಾ ವಿಷಯವು ಎಡರಂಗದ ಹೋರಾಟಕ್ಕೆ ಮತ್ತಷ್ಟು ಸ್ಪೂರ್ತಿ ತುಂಬಿದೆ. ಈ ವಿಜಯ ಬುಡಕಟ್ಟು ಮತ್ತು ಬುಡಕಟ್ಟೇತರ ಜನರ ಐಕ್ಯತೆಯ ಸಂಕೇತ. ಜನವಿರೋಧಿ ಕಾಂಗ್ರೆಸ್, ಕೋಮುವಾದಿ ತೃಣಮೂಲ-ಬಿಜೆಪಿಗೆ ಜನತೆ ನೀಡಿದ ತೀವ್ರ ಹೊಡೆತ ಎಂದು ಎಡರಂಗ ವಿಶ್ಲೇಷಣೆ ಮಾಡಿ ಗೆಲುವಿಗೆ ಕಾರಣರಾದ ಜನತೆಗೆ ಅಭಿನಂದನೆ ಸಲ್ಲಿಸಿದೆ.

ಉತ್ತರಪ್ರದೇಶದ ರಾಜ್ಯಪಾಲರು ಯಾವುದಕ್ಕೆ ನಿಷ್ಠರು?

ಉ.ಪ.ರಾಜ್ಯಪಾಲರ ಕ್ರಮ ಅಪ್ರಜಾಸತ್ತಾತ್ಮಕ

ಉ.ಪ.ರಾಜ್ಯಪಾಲ ವಿಷ್ಣುಕಾಂತ ಶಾಸ್ತ್ರಿ ಉ.ಪ. ರಾಜ್ಯದಲ್ಲಿ ರಾಷ್ಟ್ರಪತಿ ಆಳ್ವಿಕೆಗೆ ಶಿಫಾರಸ್ಸು ಮಾಡುವ ಮೂಲಕ ಅಪ್ರಜಾಸತ್ತಾತ್ಮಕವಾದ ಹೆಜ್ಜೆ ಇಟ್ಟಿದ್ದಾರೆ. ಇದನ್ನೇ ಕೇಂದ್ರ ಸರ್ಕಾರ ಒಪ್ಪಿ ರಾಷ್ಟ್ರಪತಿ ಅಂಕಿತ ಹಾಕಿದ್ದಾರೆ. ವಿಧಾನಸಭಾ ಚುನಾವಣೆ ನಂತರ ಅತೀ ದೊಡ್ಡ ಪಕ್ಷವಾಗಿ ಹೊರಹೊಮ್ಮಿದ ಪಕ್ಷವನ್ನು ಸರ್ಕಾರ ರಚಿಸಲು ಆಹ್ವಾನಿಸುವ ಬದಲು ರಾಜ್ಯಪಾಲರು ಪ್ರಜಾಸತ್ತಾತ್ಮಕ ಮೌಲ್ಯಗಳನ್ನು ನಿಂದಿಸುವ ಕ್ರಮಕ್ಕೆ ಮುಂದಾಗಿದ್ದಾರೆ. ರಾಜ್ಯಪಾಲರಿಗೆ ಇದ್ದ ಏಕೈಕ ಮಾರ್ಗವೆಂದರೆ ಮುಲಯಂ ಸಿಂಗ್ ಯಾದವ್‌ರವರನ್ನು ಸರ್ಕಾರ ರಚಿಸಲು ಕೇಳಿ ಕೊಳ್ಳುವುದು ಮತ್ತು ನಿರ್ದಿಷ್ಟ ಸಹಾಯದೊಳಗೆ ವಿಧಾನಸಭೆಯಲ್ಲಿ ಬಹುಮತ ಸಾಬೀತುಪಡಿಸಲು ಅವಕಾಶ ನೀಡುವುದು. ಆದರೆ ರಾಜ್ಯಪಾಲರಿಗೆ ರಾಜ್ಯಭವದಲ್ಲಿ ಕುಳಿತು ವಿಧಾನಸಭೆಯಲ್ಲಿ ಯಾರು ಬಹುಮತವನ್ನು ಸಾಬೀತುಪಡಿಸಬೇಕೆಂದು ತೀರ್ಮಾನಿಸುವುದಲ್ಲ.

ವಿಷ್ಣುಕಾಂತ ಶಾಸ್ತ್ರಿಯವರು ಎಲ್ಲರಿಗೂ ತಿಳಿದಿರುವಂತೆ ಅವರೊಬ್ಬ ಆರ್.ಎಸ್.ಎಸ್. ವಿನಮ್ರ ಸದಸ್ಯರೂ ಮತ್ತು ಅವರೇ ಹೆಮ್ಮೆಯಿಂದ ಬರೆದುಕೊಂಡಂತೆ 1992ರಲ್ಲಿ ಬಾಬ್ರಿ ಮಸೀದಿ ಉರುಳಿಸುವ ಕೆಲಸದಲ್ಲಿ ಕರಸೇವಕರಾಗಿ ಭಾಗವಹಿಸಿದ್ದವರು. ಅಂತಹ ಒಬ್ಬ ರಾಜ್ಯಪಾಲರ ಪಾತ್ರ ಜನಾದೇಶಗಳನ್ನು ಮತ್ತು ಪ್ರಜಾಪ್ರಭುತ್ವ ಮೌಲ್ಯಗಳನ್ನು ಅಣಕವಾಡುವಂತೆ ಮಾಡುತ್ತಿವೆ.

ಆದ್ದರಿಂದ ಸಿಪಿಐ(ಎಂ) ಪಕ್ಷವು ರಾಜ್ಯಪಾಲರ ಶಿಫಾರಸ್ಸನ್ನು ತಿರಸ್ಕರಿಸಲು ಮತ್ತು ವಿಧಾನ ಸಭೆಯಲ್ಲಿ ಅತೀ ದೊಡ್ಡ ಪಕ್ಷವಾಗಿ ಹೊರ ಹೊಮ್ಮಿರುವ ಪಕ್ಷವನ್ನು ಸರ್ಕಾರ ರಚಿಸಲು ಅವಕಾಶ ಕೊಡಬೇಕೆಂದು ಒತ್ತಾಯಿಸಿದೆ.

ರಾಜ್ಯಪಾಲರ ಈ ಶಿಫಾರಸ್ಸು ತಿರಸ್ಕರಿಸಲು ಯೋಗ್ಯವಾದವು. ಆದ್ದರಿಂದ ವಿಧಾನಸಭೆಯಲ್ಲಿ ಅತೀ ದೊಡ್ಡ ಪಕ್ಷವಾಗಿ ಹೊರಹೊಮ್ಮಿರುವ ಪಕ್ಷಕ್ಕೆ ಸರ್ಕಾರ ರಚಿಸಲು ಅವಕಾಶ ಕೊಡಬೇಕು.

ಆದರೆ ಈಗ 98 ಸ್ಥಾನಗಳಿಸಿರುವ ಮಾಯಾವತಿ(ಬಿಎಸ್‌ಪಿ) ಸರ್ಕಾರ ರಚಿಸುವುದಾಗಿ ಹೇಳಿದ್ದಾರೆ. ಬಿಜೆಪಿಯೊಂದಿಗೆ ಒಳ ಒಪ್ಪಂದಕ್ಕೆ ಬಂದಾಗಿದೆ. ಉತ್ತರ ಪ್ರದೇಶದ, ಹಾಗೂ ದೇಶದ ಇಂದಿನ ಗಂಭೀರ ಸ್ಥಿತಿಯಲ್ಲಿ ಅಲ್ಲಿನ ಸರ್ಕಾರದ ಪಾತ್ರ ಅತೀ ಮುಖ್ಯ ಆದರೆ ಮುಂದಿನ ಬೆಳವಣಿಗೆಗಳು ಭಾರಿ ಪರಿಣಾಮ ಬೀರಲಿವೆ.

ಕೋಲಾರ ಬಂದ್...

ಪುಟ 3 ರಿಂದ

ದ್ವಿಚಕ್ರವಾಹನದಲ್ಲಿ ಸುತ್ತುವ ಮೂಲಕ ಸಂಘಟಕರು ಬಂದ್ ಯಶಸ್ವಿಗೊಳಿಸಲು ಶ್ರಮಿಸುತ್ತಿದ್ದರೆ ನಗರದ ಹಲವೆಡೆ ಅಲ್ಲಲ್ಲಿ ರಸ್ತೆಯಲ್ಲಿ ಟೈರ್‌ಗಳನ್ನು ಸುಡುವ ಮೂಲಕ ಹಾಗೂ ರಸ್ತೆಗಳಲ್ಲಿ ಅಡ್ಡಗೋಡೆ ನಿರ್ಮಿಸುವ ಮೂಲಕ ಬಂದ್‌ನ 'ತೀವ್ರತೆ' ವ್ಯಕ್ತವಾಗಿದೆ. ಈ ನಡುವೆ 'ಬಂದ್' ಮಾಡಲು ನಿರಾಕರಿಸುವ ದಾಷ್ಟ್ಯ ಪ್ರದರ್ಶಿಸಿದ ಕೆಲ ಸರಕಾರಿ ಕಛೇರಿಗಳು ಹೋರಾಟಗಾರರ ಎಚ್ಚರಿಕೆಯಿಂದಾಗಿ ಬಾಯಿಗೆ ಬೀಗ ಜಡಿದುಕೊಂಡು ಬಾಗಿಲು ಮುಚ್ಚಿಕೊಂಡ ವರದಿಗಳೂ ಲಭ್ಯವಾಗಿವೆ. ಮೆಕ್ಕ ವೃತ್ತದಲ್ಲಿ ವಿದ್ಯುತ್ ಪೆಡಂಭೂತದ ಪ್ರತಿಕೃತಿಯನ್ನು ಸುಡುವ ಮೂಲಕ ರಾಜ್ಯ ಸರ್ಕಾರ ಹಾಗೂ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮದ ವಿರುದ್ಧ ಬಲವಾದ ಆಕ್ರೋಶ ವ್ಯಕ್ತಗೊಂಡಿದೆ. ಶಾಲಾ ಕಾಲೇಜುಗಳಂತೂ ಇಡೀ ದಿನ ರಜೆ ಘೋಷಿಸಿಕೊಂಡಿವೆ. ಕೃಷಿ ಉತ್ಪನ್ನ ಮಾರುಕಟ್ಟೆಯಲ್ಲಿಯೂ ವ್ಯವಹಾರ ಸಂಪೂರ್ಣ ಸ್ತಬ್ಧಗೊಂಡಿದೆ.

ಬಾಗೇಪಲ್ಲಿ ಪಟ್ಟಣದಲ್ಲಿ ಬಂದ್ ಭಾರೀ ಯಶಸ್ವಿಯಾಗಿದೆ. ಬಂದ್‌ನ ಪ್ರಕಟಣೆ-ಪ್ರಚಾರದಿಂದಾಗಿ ಇಡೀ ತಾಲೂಕಿನ ಜನತೆ ಅಪೂರ್ವವಾಗಿ ಸ್ಪಂದಿಸಿದ್ದಾರೆ. ಗ್ರಾಮಾಂತರದಲ್ಲಿಯೂ ಬಂದ್ ನಡೆದಿದೆ. ಅಂದು ಬೆಳಿಗ್ಗೆ ಸಾವಿರಾರು ಜನರು ಮೆರವಣಿಗೆ - ಸಭೆ

ಇದರ ನಾಯಕತ್ವವನ್ನು ಜಿಲ್ಲಾ ಕಾರ್ಯದರ್ಶಿ, ಮಾಜಿ ಶಾಸಕರಾದ ಜಿ.ವಿ.ಶ್ರೀರಾಮರೆಡ್ಡಿ, ಜಿ.ಪಂ. ಸದಸ್ಯ ಶ್ರೀರಾಮಪ್ಪ, ಸಿ.ಡಿ.ಗಂಗುಲಪ್ಪ, ಓಬಳ ರಾಜ್, ಭಾಸ್ಕರರೆಡ್ಡಿ, ತಾ.ಕಾರ್ಯದರ್ಶಿ ವೆಂಕಟಸ್ವಾಮಿ ರೆಡ್ಡಿ ಮುಂತಾದವರು ವಹಿಸಿದ್ದರು.

ಈ ಪೂರ್ಣ ಬಂದ್‌ಗೆ ಅಪೂರ್ವವಾಗಿ ಸ್ಪಂದಿಸಿದ ಜನತೆಯನ್ನು ಅಭಿನಂದಿಸಿದ ಶ್ರೀರಾಮರೆಡ್ಡಿಯವರು ಈ ಪ್ರತಿಕ್ರಿಯೆಯನ್ನು ಸರ್ಕಾರ ಪರಿಗಣಿಸಿ ಸಮಸ್ಯೆ ಬಗೆಹರಿಸಬೇಕೆಂದು ಆಗ್ರಹಿಸಿದ್ದಾರೆ.

ಜಿಲ್ಲೆಯ ಉಳಿದೆಲ್ಲ ತಾಲೂಕುಗಳ ಅನುಭವಗಳು ಇದಕ್ಕಿಂತ ಭಿನ್ನವೇನಲ್ಲ. ಚಿಂತಾಮಣಿಯಲ್ಲಿ ಪ್ರತಿಭಟನಾಕಾರರು ಕೆಪಿಟಿಸಿಎಲ್ ಕಛೇರಿ ನುಗ್ಗಬಹುದೆಂಬ ಅಧಿಕಾರಿಗಳ ಗ್ರಹಿಕೆಯಿಂದಾಗಿ ಈ ಕಛೇರಿ ಸಂಪೂರ್ಣವಾಗಿ ಪೋಲೀಸರ ಸರ್ಪಗಾವಲನ್ನು ಪಡೆಯಬೇಕಾಯಿತು. ಶಿಡ್ಲಘಟ್ಟದಲ್ಲಿ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್‌ಗಳನ್ನು ಪೋಲೀಸ್ ಠಾಣೆಯ ಮುಂದೆ ನಿಲ್ಲಿಸಬೇಕಾಯಿತು.

ಉಳಿದಂತೆ ಶ್ರೀನಿವಾಸಪುರ, ಚೇಳೂರು, ಮುಳಬಾಗಿಲು, ಶಿಡ್ಲಘಟ್ಟ, ಕೆ.ಜಿ.ಎಫ್., ಟೇಕಲ್, ಬಂಗಾರಪೇಟೆವ ಮುಂತಾದ ಎಲ್ಲಾ ತಾಲೂಕುಗಳಲ್ಲಿ ಎಲ್ಲೆಡೆ

ಘೋಷಿಸಿಕೊಂಡು ಹಾಗೂ ಸರಕಾರೀ ಕಛೇರಿಗಳು ಅಘೋಷಿತ ರಜೆ ಅನುಭವಿಸಿದ ವರದಿಗಳು ಲಭ್ಯವಾಗಿವೆ. ಎಲ್ಲಾ ತಾಲೂಕುಗಳಲ್ಲಿ ಅಂಗಡಿ ಮುಂಗಟ್ಟುಗಳು ಸಂಪೂರ್ಣ ಮುಚ್ಚಿಹೋಗಿ ವ್ಯಾಪಾರ ವಹಿವಾಟು ಸ್ತಬ್ಧಗೊಂಡು ಸರಕಾರದ ವಿದ್ಯುತ್ ನೀತಿಗೆ ಬಲವಾದ ಪ್ರತಿಭಟನೆ ವ್ಯಕ್ತವಾಗಿದೆ. ಬಂದ್‌ಗೆ ಕರೆ ಕೊಟ್ಟ ಸಿಪಿಐ(ಎಂ) ಪಕ್ಷದ ಪ್ರಭಾವ ಕಡಿಮೆ ಇರುವ ಮಾಲೂರಿನಲ್ಲಿಯೂ ಜನತೆ ಸ್ವಯಂ ಪ್ರೇರಣೆಯಿಂದ ಮುಂದೆ ಬಂದು ಭಾಗಶಃ ಬಂದ್‌ಗೆ ಸ್ಪಂದಿಸಿದ ಬೆಳವಣಿಗೆಗಳು ಕಂಡು ಬಂದಿವೆ.

ಒಟ್ಟಾರೆಯಾಗಿ ಕರ್ನಾಟಕ ರಾಜ್ಯ ಸರಕಾರದ ವಿದ್ಯುತ್ ನೀತಿಯನ್ನು ಪ್ರತಿಭಟಿಸಿ ಇಡೀ ಕೋಲಾರ ಜಿಲ್ಲೆ ಪ್ರಭಾವಕಾರಿಯಾಗಿ ಬಂದ್ ಜಾರಿಗೊಳಿಸುವ ಮೂಲಕ ವಿದ್ಯುತ್ ನೀತಿಗೆ ಪ್ರತಿಭಟನೆಯನ್ನು, ರಾಜ್ಯ ಸರ್ಕಾರಕ್ಕೆ ಎಚ್ಚರಿಕೆಯನ್ನು ಪ್ರಕಟಿಸಿದಂತಾಗಿದೆ.

ಚಿಂತಾಮಣಿಯಲ್ಲಿ ಗೋಪಿನಾಥ್, ಶ್ರೀನಿವಾಸ್, ರಾಜ್‌ಕುಮಾರ್, ಕೋಲಾರದಲ್ಲಿ ಗಾಂಧಿನಗರ ನಾರಾಯಣ ಸ್ವಾಮಿ, ವೆಂಕಟರಾಮು, ಗೀತಾ; ಶಿಡ್ಲಘಟ್ಟದಲ್ಲಿ ಪಕ್ಷದ ನಾಯಕರಾದ ಕೆ.ಎಂ.ವೆಂಕಟೇಶ್, ಡಿ.ರಾಜಣ್ಣ, ಮಳ್ಳೂರು ಶಿವಣ್ಣ, ಕೆ.ಎಸ್.ನಾರಾಯಣಸ್ವಾಮಿ, ರಹಮತುಲ್ಲಾ; ಶ್ರೀನಿವಾಸಪುರದಲ್ಲಿ ವೀರಪ್ಪರೆಡ್ಡಿ, ಎಂ.ನಾರಾಯಣಸ್ವಾಮಿ, ಸಮತ ಸೈನಿಕ ದಳದ ರಾಮಾಂಜನಮ್ಮ, ರೈತ ಸಂಘದ ಕಾರ್ಯದರ್ಶಿ ಪಿ.ಆರ್.ಸೂರ್ಯನಾರಾಯಣ, ಟೇಕಲು-ಬಂಗಾರುಪೇಟೆ, ಕೆಜಿಎಫ್‌ನಲ್ಲಿ ಟಿ.ಎಸ್.ಮಣಿ ಮುಂತಾದವರು ನಾಯಕತ್ವ ವಹಿಸಿದ್ದರು.

ವರದಿ : **ಬಿ.ಪೀರ್ ಭಾಷಾ**

ಚಿತ್ರಗಳು: ಹಾಬಿ ರಮೇಶ್




ಉತ್ತರಕನ್ನಡದಲ್ಲೊಂದು ಅಮಾನವೀಯ ಜೀತ ಪ್ರಕರಣ

ಮಹಿಳೆಯರಿಬ್ಬರ ಅಮಾನವೀಯ ಗೃಹಬಂಧನ
15 ವರ್ಷದಿಂದ ಸಂಬಳರಹಿತ ದುಡಿತ
ಸಂಘಟನೆಯ ಮಧ್ಯಪ್ರವೇಶ, ಗೃಹಬಂಧನದಿಂದ ಬಿಡುಗಡೆ

ವಿಠ್ಠಲ ಭಂಡಾರಿ

ಉತ್ತರಕನ್ನಡದ ಜೊಯ್ಡದ ಕತ್ತಲ ಲೋಕದ ಬಗ್ಗೆ ಈಗಾಗಲೇ ಐಕ್ಯರಂಗದಲ್ಲಿ ಕೆಲವು ಲೇಖನ ಪ್ರಕಟವಾಗಿದೆ. ಕತ್ತಲ ಲೋಕದ ನಿರ್ಲಕ್ಷಿತ ಬದುಕಿಗೆ ಈಗ ಹೊಸ ಸೇರ್ಪಡೆ. ಮಾನವ ಕುಲವನ್ನು ನಾಚಿಸುವ ಮಹಿಳಾ ದೌರ್ಜನ್ಯ, ಬಲಾತ್ಕಾರ ಪ್ರಕರಣ, ಅಕ್ರಮ ಗೃಹಬಂಧನ ಮತ್ತು ಜೀತಗಾರಿಕೆಯ ವರದಿ ಇಲ್ಲಿದೆ.

50 ವರ್ಷದ ತಾಯಿ ಮತ್ತು 17 ವರ್ಷದ ಮಗಳಿಗೆ ಭಾರತ ಸಂಚಾರ ನಿಗಮದ ಜೋಯ್ಡ ಕೇಂದ್ರದ ಹಿರಿಯ ಪಿ.ಓ.ಎ ಅಧಿಕಾರಿ ರಾಮಕೃಷ್ಣ ಆರ್.ಭಟ್ 15 ವರ್ಷದಿಂದ ಕೊಡುತ್ತ ಬಂದಿರುವ ಹಿಂಸೆ ಮತ್ತು ತಾಯಿ ಅಸಹಾಯಕತೆಯ ಕೂಗು ಜೊಯ್ಡದ ದಟ್ಟ ಅರಣ್ಯದ ಗಡಿ ದಾಟಿ ಬರಲೇ ಇಲ್ಲ. ಅರಣ್ಯರೋದನವಾಗಿಯೇ ಉಳಿಯಿತು. ಆರ್.ಆರ್.ಭಟ್ ಎನ್ನುವವನ ಮನೆಯಲ್ಲಿ 15 ವರ್ಷಗಳ ಹಿಂದೆ ತೋಟದ ಕೆಲಸಕ್ಕೆ ಸೇರಿದಾಗಿನಿಂದ ಸಂಬಳದ ಮುಖವನ್ನೇ ನೋಡದ ಅನಕ್ಷರಸ್ಥ ತಾಯಿ ಈತ ತನ್ನ ಖಾತೆಗೆ ಹಣ ಜಮಾ ಮಾಡುತ್ತಿದ್ದಾನೆಂದೇ ಹಲವು ವರ್ಷಗಳ ಕಾಲ ನಂಬಿ ಬದುಕಿದಳು. ಹಣ ಹಾಕಿಲ್ಲವೆಂದು ಕೇಳಿದಾಗ ಮತ್ತೆ ಹೊಡೆತ, ಬಡಿತ, ಲೈಂಗಿಕ ಕಿರುಕುಳ ದೌರ್ಜನ್ಯ..... ಒಂದೇ....... ಎರಡೇ ಶಾಲೆ ಕಲಿಯುವ ಕನಸನ್ನು ಹೊತ್ತ ಮಗಳು...... ಮಗಳ ಭವಿಷ್ಯವನ್ನು ರೂಪಿಸುವ ಅಚಲ



15 ವರ್ಷಗಳಿಂದ ದೌರ್ಜನ್ಯಕ್ಕೀಡಾದ ಲಕ್ಷ್ಮಿ ಗಾಂವ್ಕರ್

ಕನಸುಗಳೊಂದಿಗೆ ತನ್ನ ಮೇಲಾದ ಎಲ್ಲಾ ದೌರ್ಜನ್ಯಗಳನ್ನು ಸಹಿಸಿಕೊಂಡಿದ್ದ ತಾಯಿ ಇಡೀ ವ್ಯವಸ್ಥೆಗೆ ಹಿಡಿದ ಕೈಗನ್ನಡಿಯಂತೆ ಬದುಕುತ್ತಿದ್ದರು.

ಜೀತ ಪದ್ಧತಿ ಪ್ರಕರಣ ಬಯಲಿಗೆ ಬಂದಾಗೊಮ್ಮೆ ಈ ವ್ಯವಸ್ಥೆಯನ್ನೇ ನಿರ್ಮೂಲನ ಮಾಡುವುದಾಗಿ ಬೊಬ್ಬೆ ಹಾಕುವ ಸರ್ಕಾರ ಪ್ರಮಾಣಿಕವಾಗಿ ಈ ಕೆಲಸ ಮಾಡಿಲ್ಲ ಎನ್ನುವುದು ಅರ್ಥವಾಗುತ್ತಿದೆ. ಈ ಬಗ್ಗೆ ತೀವ್ರ ಕಳಕಳಿ ಇಲ್ಲದ ಜನಪ್ರತಿನಿಧಿಗಳು ಮತ್ತು ಅವರನ್ನೊಳಗೊಂಡ ಸರ್ಕಾರದ ಜಿಡ್ಡುಗಟ್ಟಿದ ನೀತಿಯಿಂದಾಗಿ ತಾವು ಮಾಡುತ್ತಿರುವುದು ಜೀತ ಎನ್ನುವುದೇ ಗೊತ್ತಿರದೇ ದುಡಿಯುತ್ತಿದ್ದಾರೆ; ಮಣ್ಣಾಗುತ್ತಿದ್ದಾರೆ; ಜಿಲ್ಲೆಯಲ್ಲಿ ಸಮೀಕ್ಷೆ ಮಾಡಿದರೆ ಇಂತಹ ಹತ್ತು ಹಲವು ಪ್ರಕರಣಗಳು ಬೆಳಕಿಗೆ ಬರುವುದರಲ್ಲಿ ಸಂಶಯವಿಲ್ಲ.

ಈ ಪ್ರಕರಣ ಕೂಡ ಜೀತಗಾರಿಕೆ ಮತ್ತು ಮಹಿಳೆಯರ ಮೇಲಿನ ದೌರ್ಜನ್ಯದ ಅಮಾನವೀಯ ಮುಖವಾಗಿದೆ. ಕೈಗೆ - ಕಾಲ್ಗೆ ಕಣ್ಣಿಗೆ ಕಾಣುವ ಕಬ್ಬಿಣದ ಸರಪಳಿ ಇಲ್ಲದಿದ್ದರೂ ಬೆದರಿಕೆ ಮತ್ತು ನಿರ್ಭಂದದ ಸರಪಳಿ ತಾಯಿಯನ್ನು ಬಂಧಿಸಿಟ್ಟಿತ್ತು. ಗಂಡನಿಂದ ಪರಿತ್ಯಕ್ತಳಾಗಿ ತಾಯಿಯ ಮನೆಯಲ್ಲಿಯೂ ನೆಲೆಯಿಲ್ಲದೇ ಕೈಯ್ಯಲ್ಲಿ ಹಸುಗೂಸನ್ನು ಇಟ್ಟುಕೊಂಡು ತುತ್ತುಕೂಳಿಗಾಗಿ ಕೂಲಿ ಅರಸುವ ಹೆಣ್ಣುಮಗಳೊಬ್ಬಳು ನಿಲ್ಲಲು ನೆಲೆ ಇಲ್ಲದ ಅಸಹಾಯಕತೆ ಈ ಬಂಧನದ ಸರಪಳಿಯನ್ನು ಹರಿದೊಗೆಯುವ ಧೈರ್ಯ ಕೊಡಲಿಲ್ಲ. ಇಂಥಹ ನೂರಾರು ಹೆಣ್ಣುಗಳು "ಭಾರತೀಯ ಸಂಸ್ಕೃತಿ"ಯ ಸ್ಮಾರಕಗಳಾಗಿ ಇಂದೂ ಉಸಿರಾಡುತ್ತಿದ್ದಾರೆ.

ಶೈಕ್ಷಣಿಕ ಮತ್ತು ಸಾಮಾಜಿಕವಾದ ಅನೇಕ ಹೋರಾಟವನ್ನು ಮಾಡುತ್ತಿರುವ ಭಾರತ ವಿಧ್ಯಾರ್ಥಿ ಫೆಡರೇಶನ್ (ಎಸ್‌ಎಫ್‌ಐ) ವಿಧ್ಯಾರ್ಥಿಗಳು ಆರ್.ಆರ್.ಭಟ್ ಎನ್ನುವವನ ಮನೆಯಿಂದ ಅವರ ಕಣ್ತಪ್ಪಿಸಿ ಓಡಿಬಂದು ತಾಯಿ ಮಗಳಿಗೆ ನ್ಯಾಯ ಕೊಡಿಸಲು ಮುಂದಾದರು. ಡಿವೈಎಫ್‌ಐನ ಶಾಂತಾರಾಮ ನಾಯಕ, ಅಂಗನವಾಡಿ ನೌಕರರ ಸಂಘದ ಯಮುನಾ ಗಾಂವ್ಕರ್, ಎಸ್‌ಎಫ್‌ಐನ ಪ್ರಸನ್ನ, ರೇಷ್ಮಾ, ಕವಿತಾ, ಅವರ ಮುಂದಾಳತ್ವದಲ್ಲಿ ಜಿಲ್ಲಾಧಿಕಾರಿಗಳು, ಪೋಲೀಸ್ ವರಿಷ್ಠಾಧಿ ಕಾರಿಗಳನ್ನು ಭೇಟಿ ಆಗಿ ನ್ಯಾಯ ಕೇಳಿದರು. ಜೀತ ವಿಮುಕ್ತಗೊಳಿಸಿ ತಾಯಿ ಮಗುವಿಗೆ ಒಂದು ಬಾಳು ಕೊಡಲು ವಿನಂತಿಸಿದರು.

ಇಷ್ಟೆಲ್ಲಾ ಹೇಳಿದ ಮೇಲೂ ಘಟನೆ ಏನು ಎನ್ನುವುದೇ ನಿಮ್ಮ ಯಕ್ಷಪ್ರಶ್ನೆ ಎನ್ನುವುದು ನನಗೆ ಗೊತ್ತು. ಈ ಮುಂದಿನ ವೇದನೆಯ ಕತೆಯನ್ನು ಜೀತದಂತೆ ಬದುಕಿದ ತಾಯಿಯೇ ಹೇಳಿದ್ದಾಳೆ. ಬಹುಶಃ ಈ ಹೇಳಿಕೆಗೆ ಬೇರೆ ವಿವರಣೆ ವ್ಯಾಖ್ಯಾನ ಬೇಕಾಗಿಲ್ಲ ಎನ್ನುವುದು ನನ್ನ ನಂಬಿಕೆ. ತಪ್ಪಿತಸ್ಥರ ವಿರುದ್ಧ ನಿಷ್ಪಕ್ಷಪಾತ ತನಿಕೆಯಾಗಬೇಕು. ತಾಯಿ - ಮಗಳಿಗೆ 15 ವರ್ಷದ ದುಡಿತದ ವೇತನ ಸಿಗಲಿ ಎಂದು ಒತ್ತಾಯಿಸುವುದು, ಒಮ್ಮೆ ನ್ಯಾಯ ಸಿಗದಿದ್ದರೆ ನಾವು ಹೋರಾಟಕ್ಕೆ ದನಿಗೂಡಿಸುತ್ತೇವೆ ಎಂದು ಎಚ್ಚರಿಸುವುದಷ್ಟೇ ನಮ್ಮ ಈಗಿನ ಕೆಲಸ.

★ ★ ★


ತಾಯಿ ಹೇಳಿದ ವ್ಯಥೆ-ಕಥೆ : ನಾನು ಮೂಲತಃ ಜೊಯ್ಡ ತಾಲೂಕು ಗುಂದದ ಯರಮುಖ ಗ್ರಾಮದ ಭೀಮ ಗಾಳಿಯವಳು. ನನ್ನ ವಯಸ್ಸು 49 ವರ್ಷ. ಮದುವೆಯಾಗಿ ಕೆಲವೇ ದಿನಗಳಲ್ಲಿ ಗಂಡನಿಂದ ಪರಿತ್ಯಕ್ತಳಾಗಿ ನಾನು ಜೀವನ ನಿರ್ವಹಣೆಗೆ ಬೇರೆ ಮನೆಗಳಲ್ಲಿ ಕೃಷಿಕೂಲಿಗಾಗಿ ಬದುಕುತ್ತಿದ್ದೆ. ಕೆಲ ವರ್ಷಗಳ ತರುವಾಯ ನನ್ನ ಗಂಡ ಮತ್ತೊಂದು ಮದುವೆಯಾಗಿ ನನ್ನನ್ನು ಪುನಃ ಕರೆಸಿಕೊಂಡರು. ಪುನಃ ಒಂದುವರೆ ವರ್ಷದಲ್ಲಿ ನನ್ನನ್ನು ಮನೆಯಿಂಧ ಹೊರಗಟ್ಟಿದರು. ಆಗ ನನಗೆ 2 ತಿಂಗಳ ಮಗು ಇತ್ತು. ನಾನು ಕೆಲಸಕ್ಕಾಗಿ ಮತ್ತೆ ಅಲೆದಾಡಿ ಮಗುವಿನ ಆರೈಕೆ ಮಾಡುತ್ತಿದ್ದೆ. ಅಷ್ಟರಲ್ಲಿ 1987-88ರಲ್ಲಿ ನನಗೆ ಜೊಯ್ಡಾ ತಾಲೂಕಿನ ನಗರೆ ಗ್ರಾಮದ ಆರ್.ಆರ್.ಭಟ್ಟ ಎನ್ನುವವರ ಮನೆಯಲ್ಲಿ ಕೃಷಿ ಮತ್ತು ಮನೆಗೆಲಸ ಸಿಕ್ಕಿತು. ಇಲ್ಲಿ ಮೊದಲು ಕೃಷಿ ಕೂಲಿಯೆಂದು ಸೇರಿದ್ದರೂ ಮನೆಯಲ್ಲಿ ಬೆಳಿಗ್ಗೆ 5 ಗಂಟೆಯಿಂದ ರಾತ್ರಿ 11 ಗಂಟೆಯ ತನಕ ಮನೆಗೆಲಸ, ಮಧ್ಯೆ ತೋಟದ ಕೆಲಸ, ಕೊಟ್ಟಿಗೆ ಕೆಲಸ, ಹಾಲು ತೋಡುವುದು ದಿನವೂ ಇರುತ್ತಿತ್ತು. ಮನೆ ಮತ್ತು ತೋಟದ ಕೆಲಸ ನನಗೆ ವಹಿಸಿ ತಿಂಗಳಿಗೆ 1000ರೂ ಕೊಡು ವುದಾಗಿ ಒಪ್ಪಿಕೊಂಡರು. ನಾನು ವಿದ್ಯಾಭ್ಯಾಸ ಬಲ್ಲವಳಲ್ಲ. ನನ್ನ ಕೂಲಿ ಪಗಾರಿನಲ್ಲಿ ಬ್ಯಾಂಕಿನ ಖಾತೆಗೆ ಹಾಕುವುದಾಗಿಯೂ, ಮಗಳಿಗೆ ಮದುವೆ ಮಾಡಿಸುವುದಾಗಿಯೂ ಹೇಳಿದ್ದನು. ಆದರೆ ಈವರೆಗೆ ಒಂದೇ ಒಂದು ರೂಪಾಯಿಯನ್ನು ಕೂಲಿಯಾಗಿ ಹಣ ಕೊಟ್ಟಿಲ್ಲ. 15 ವರ್ಷದಿಂದ ಆ ಕುಟುಂಬಕ್ಕಾಗಿ ದುಡಿದಿದ್ದೇನೆ. ನಾನೇ ದುಡಿದ ತೋಟ ಇಂದು ಫಲ ಕೊಡುತ್ತಿದೆ. ಈಗ ಈ ಆರ್.ಆರ್.ಭಟ್ಟ ಜೊಯ್ಡದ ದೂರಸಂಪರ್ಕ ಇಲಾಖೆಯಲ್ಲಿ ನೌಕರಿ ಮಾಡುತ್ತಿದ್ದಾರೆ.

ಮೊದಲು ಕಾರವಾರದಿಂದ ತಮ್ಮ ಜಮೀನಿನ ಮೇಲುಸ್ತುವಾರಿಕೆಗೆ ಬಂದಾಗ ಮೊದಮೊದಲು ಯಾವುದೇ ಅನುಮಾನ ಬರದ ಹಾಗೆ ವರ್ತಿಸಿದರು. ಕಾಲಕಳೆದಂತೆಲ್ಲಾ ನಮಗೆ ಹೊಡೆದು ಬಡಿದು ಹಿಂಸಿಸಲು ಪ್ರಾರಂಭವಾಯಿತು. ನಂತರ ದಾಂಡೇಲಿಗೆ ಆರ್.ಆರ್.ಭಟ್ಟ ವರ್ಗವಾಗಿ ಬಂದಾಗ ಇನ್ನಷ್ಟು ಹೆಚ್ಚಾಗಿ ದೈಹಿಕವಾಗಿ ಪೀಡಿಸಲು ಪ್ರಾರಂಬಿಸಿ ದನು. ನಮ್ಮನ್ನು ಕೂಡಿ ಹಾಕುವುದು, ನೆಂಟರ ಮನೆಗೆ ಹೋಗದಂತೆ ಪ್ರತಿಬಂಧಿಸುವುದು, ಕೂಲಿ ಕೇಳಿದರೆ ಇನ್ನಷ್ಟು ದಿನ ದುಡಿದರೆ ಮಾತ್ರ ಕೊಡುದುದಾಗಿ ಬೆದರಿಸುತ್ತಿದ್ದರು. ನಾನು ನನ್ನ ಚಿಕ್ಕ ಮಗುವಿನ ಶಾಲೆ ಬಿಡಿಸುವಂತಿರಲಿಲ್ಲ. ಹಾಗೂ ಅವಳನ್ನು ಎತ್ತಿಕೊಂಡು ಎಲ್ಲಿಯೂ ಹೋಗುವಂತಿರಲಿಲ್ಲ. ಒಂದು ವೇಳೆ ಕಾಡಿ ಬೇಡಿ ಹೋದರೂ ಯಾರನ್ನಾದರೂ ಕಳುಹಿಸಿ ಪುನಃ ಕರೆಯಿಸಿಕೊಳ್ಳುತ್ತಿದ್ದ.

ನನ್ನ ಮಗಳು ಕಷ್ಟಪಟ್ಟು ಓದುತ್ತಿರುವಾಗ ಅವಳ ಮೇಲೆ ಇವನ ಕಣ್ಣು ಬಿತ್ತು. ಕಾಮುಖ ದೃಷ್ಟಿಯಿಂದ ಹಲವಾರು ಬಾರಿ ನನ್ನನ್ನು, ಮಗಳನ್ನು ಹಿಂಸಿಸಿದ. ನಾನು ಆ ಹಳ್ಳಿಯಲ್ಲಿ ಕೂಗಿಕೊಳ್ಳುವಂತಿರಲಿಲ್ಲ. ಬೇರೆ ಮನೆ ಹತ್ತಿರವಿರಲಿಲ್ಲ. ನೆರೆಹೊರೆಯವರೊಂದಿಗೆ ಇವನ ಜಮೀನಿನ ವ್ಯಾಜ್ಯ ಇರುವುದರಿಂದ ಅವರಲ್ಲಿ ನಾನು ಮಾತನಾಡುವುದನ್ನು ನಿರ್ಬಂಧಿಸಿದ್ದರು. ನನ್ನನ್ನು ಹೊಡೆಯುವಾಗ ಯಾರು ತಪ್ಪಿಸಲು ಬರದಂತೆ ನೋಡುತ್ತಿದ್ದ. ಒಮ್ಮೆ ಆತನ ಹೊಡೆತಕ್ಕೆ ನನ್ನ ಮೂಗಿನಲ್ಲಿ ರಕ್ತ ಬಂದು ಪ್ರಜ್ಞೆ ತಪ್ಪಿ ಬಿದ್ದೆ. ಆಳುಗಳು ನನಗೆ ನೀರುಣಿಸಿದರು. ಆದರೆ ಅವರ ಮನೆಯಲ್ಲಿ ಕೆಲಸಕ್ಕಿದ್ದ ಅಸ್ಪೃಶ್ಯರನ್ನು ಮುಟ್ಟಿಸಿಕೊಂಡೆ ಎಂದು ಮತ್ತೆ ಹೊಡೆದ.

ನನ್ನ ಮಗಳು ಶಾಲೆಗೆ ಹೋದ ಸಮಯದಲ್ಲಿ ಇನ್ನಷ್ಟು ಹೊಡೆಯುತ್ತಿದ್ದ. ಆತ ದೈಹಿಕ ತೃಷೆಗೆ ನನ್ನನ್ನು ಬಳಸಿಕೊಳ್ಳುತ್ತಿದ್ದ. ಏನೇ ಪ್ರತಿಭಟಿಸಿದರೂ ಕೇಳುತ್ತಿರಲಿಲ್ಲ. ಹೆಚ್ಚು ಪ್ರತಿಭಟಿಸಿದಾಗ ಅಥವಾ ಇದನ್ನು ಹೊರಗೆ ಹೇಳಿದರೆ ನಿನ್ನ ಮಗಳಿಗೆ ಕೆಡುಕು ಬಯಸುವುದಾಗಿ ಹೇಳುತ್ತಿದ್ದ. ಅನಿವಾರ್ಯವಾಗಿ ಮಗಳಿಗೆ ಗೊತ್ತಿಲ್ಲವಂತೆ ಅವನ ರಾಕ್ಷಸಿಯ ಪ್ರವೃತ್ತಿಗೆ ನಾನು ಬಲಿ ಆಗಬೇಕಾಯಿತು. ನನ್ನ ಮಗಳು 9ನೇ ತರಗತಿಯಲ್ಲಿ ಇರುವಾಗಲೇ ಶಾಲೆ ತಪ್ಪಿಸಿ ಟೆಲಿಕಾಂ ಡಿಪಾರ್ಟ್‌ಮೆಂಟಿನಲ್ಲಿ ದಿನಗೂಲಿಗೆ ಹಚ್ಚಿದ. ಅವಳಿಗೆ ಬರುವ ಸಂಬಳವನ್ನು ಈತನೇ ಹೊಡೆದುಕೊಳ್ಳುತ್ತಿದ್ದ. ಆಕೆಗೂ ಕೂಡ ಕಛೇರಿಯಲ್ಲಿ ಹಿಂಸಿಸುವ, ಕಿರುಕುಳ ಕೊಡಲು ಮುಂದಾದ. ಇದನ್ನು ಸಹಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಒಂದು ದಿನ ರಾತ್ರಿ 12 ಗಂಟೆಗೆ ನನ್ನನ್ನು, ಮಗಳನ್ನು ಮನೆಯವರೆಲ್ಲ ಸೇರಿ ಹೊಡೆದು ಹೊರಗಟ್ಟಿದರು. ಮನೆಯ ಹೊರಗೆ ರಾತ್ರಿ ಕಳೆಯಬೇಕಾಯಿತು. ನನ್ನ ಎದುರೇ ನನ್ನ ಮಗಳಿಗೂ ಹಿಂಸೆ ಕೊಡಲು ಪ್ರಾರಂಭಿಸಿದಾಗ ನಾನು ಮತ್ತೆ ಕೂಲಿ ಕೇಳಿದೆ. ನಾನು ಹೇಳಿದಂತೆ ಕೇಳಿಕೊಂಡು ಬಿದ್ದಿರು. ನನ್ನ ದೈಹಿಕ ಆಸೆಯನ್ನು ತೀರಿಸುತ್ತಿದ್ದರೆ ಮಾತ್ರ ಕೂಲಿ ಕೊಡುತ್ತೇನೆಂದು ಬೆದರಿಸಿದ. ತೀರಾ ಅನಾಗರಿಕವಾಗಿ, ಅವಾಚ್ಯವಾಗಿ ಬೈದ. ನಾನು ಮತ್ತು ನನ್ನ ಮಗಳು ಅಲ್ಲಿರುವುದು ಉಚಿತವಲ್ಲ ಎಂದು ಅವನ ಕಣ್ತಪ್ಪಿಸಿ ಓಡಿಬಂದೆವು. ಒಂದಷ್ಟಾದರೂ ಓಡಿ, ನಡೆದು ಅಲ್ಲಲ್ಲಿ ಹಣಕೇಳಿ ಪರಿಚಯದವರಾದ ಸುಮಂಗಲಾ, ಯಮುನಾ ಅವರನ್ನು ಭೇಟಿ ಆಗಿ ಇಲ್ಲಿಗೆ ಬಂದಿದ್ದೇನೆ. ನಾನು ಇರುವ ಸ್ಥಳ ಪತ್ತೆ ಮಾಡಿ ಬೆದರಿಕೆ ಹಾಕಿದ್ದಾನೆ. ಕದ್ದೊಯ್ಯುವುದಾಗಿ ಹೇಳಿದ್ದಾನೆ. ದಯವಿಟ್ಟು ನನಗೆ ರಕ್ಷಣೆ ಕೊಡಬೇಕು. ನನ್ನ ಮಗಳ ಭವಿಷ್ಯವನ್ನು ರೂಪಿಸಲು ನೆರವಾಗಬೇಕು. 15 ವರ್ಷ ನಾನು ದುಡಿದ ಕೂಲಿ ಕಾಗದ ಪತ್ರ, ಬಟ್ಟೆಬರೆ ಕೊಡಿಸಬೇಕು, ನನ್ನನ್ನು ಅವನಿಂದ, ಜೀತಮುಕ್ತಗೊಳಿಸಬೇಕಾಗಿ ವಿನಂತಿಸುತ್ತೇನೆ". (ಇದು ತಾಯಿ D.C. ಯವರಲ್ಲಿ ಮನವಿ ಮಾಡಿಕೊಂಡ ವಿವರ. ಹೇಳಿಕೊಳ್ಳಲಾಗದ ಇನ್ನು ಅನೇಕ ಅಂಶಗಳನ್ನು ಇಲ್ಲಿ ಬಿಡಲಾಗಿದೆ).

ಚಪ್ಪಲಿಯೇಟು ಬಿಗಿದ ರುಕ್ಮಿಣಿ



70 ವರ್ಷದ ರುಕ್ಮಿಣಿ ತಾನು ಒಂದು ತಿಂಗಳ ದುಡಿದ ಹಣದಲ್ಲಿ 200 ರೂ. ನೀಡಿ ಉಳಿದ ಹಣ ನೀಡದಿರುವಾಗ ನಡು ರಸ್ತೆಯಲ್ಲಿ ಬೈಕ್ ನಿಲ್ಲಿಸಿ ಚಪ್ಪಲಿಯಿಂದ ಹೊಡೆದುದಾಗಿ ಹೇಳಿದರು. ಬಡವಳಾದ ನಾನು ಈತನ ಮನೆಗೆ ಕೂಲಿಗೆ ಹೋಗುತ್ತಿರುವಾಗ ಜನರು ಆತ ವಂಚಕ, ಹಣ ನೀಡುವುದಿಲ್ಲ ಎಂದು ಹೇಳಿದರೂ ಹೋದೆ. ತಿಂಗಳ ಸಂಬಳ 700 ರ ಬದಲು 200 ರೂ. ಕೊಟ್ಟು ಸತಾಯಿಸತೊಡಗಿದ. ನಂತರ ಜೋಯಿಡಾದಲ್ಲಿ ಆತನ ಬೈಕ್ ನಿಲ್ಲಿಸಿ ಕೇಳಿದಾಗ ಬೋಸುಡಿ ದಾರಿ ಮೇಲೇಕೆ ದುಡ್ಡು ಕೇಳುತ್ತೀ ಎಂದು ರೋಪು ಹಾಕಿದಾಗ ಚಪ್ಪಲಿ ತೆಗೆದು ಹೊಡೆದೆ ಎಂದು ಹೇಳಿದರು.

(ಕರಾವಳಿ ಮುಂಜಾವು- ನಿಂದ)

ಇಎಂಎಸ್ ಪತ್ನಿ 'ಆರ್ಯಂ' ನಿಧನ

ಭಾರತದ ಮಹಾನ್ ಕ್ರಾಂತಿಕಾರಿ, ಹಿರಿಯ ಮಾರ್ಕ್ಸ್‌ವಾದಿ ಚಿಂತಕ ಕಾಂ. ಇ.ಎಂ.ಎಸ್.ರವರ ಪತ್ನಿ ಆರ್ಯ ಅಂತರ್ಜನಂ ಇತ್ತೀಚೆಗೆ ನಿಧನರಾದರು. ಇ.ಎಂ.ಎಸ್. ರವರ ಬದುಕಿನುದ್ದಕ್ಕೂ ಎಲ್ಲಾ ಹೋರಾಟಗಳಲ್ಲಿ ತೆರೆಯ ಹಿಂದೆ ಪೂರ್ಣವಾಗಿ ಭಾಗವಹಿಸಿದ್ದ ಆರ್ಯರವರ ಬಗ್ಗೆ ಇ.ಎಂ.ಎಸ್. ರವರ ಆತ್ಮಕಥನದ ಭಾಗ ಈ ರೀತಿ ಇದೆ.

ಸಂಗ್ರಹ : **ಇ.ಕೆ.ಎನ್.ರಾಜನ್**



1937 ಅಕ್ಟೋಬರ್‌ನಲ್ಲಿ ನನ್ನ ವಿವಾಹವಾಯಿತು. ನಂಬೂದರಿ ಪಂಗಡದಲ್ಲಿ ಸಂಪ್ರದಾಯ ಪ್ರಕಾರ ಎರಡು ಕುಟುಂಬಗಳು ಸಮಾಲೋಚನೆ ನಡೆಸಿ ವಿವಾಹ ಏರ್ಪಟ್ಟಿತ್ತು ಹಾಗೂ ಹಳೆಯ ಸಂಪ್ರದಾಯದ ಪ್ರಕಾರದ ಎಲ್ಲಾ ಕ್ರಿಯೆಗಳನ್ನೊಳಗೊಂಡು ಈ ವಿವಾಹ ನೆರವೇರಿತು. ಆದರೆ ವಿವಾಹಕ್ಕೆ ಮುಂಚಿತವಾಗಿ ನನ್ನನ್ನು ನನ್ನ ಜಾತಿಯಿಂದ ಹೊರಗಿಡಲಾಗಿತ್ತು. ಈ ಕಾರಣದಿಂದ ಎರಡು ಕುಟುಂಬದ ಹಿರಿಯರು ಈ ವಿವಾಹದಲ್ಲಿ ಭಾಗವಹಿಸಲಿಲ್ಲ. ನಂಬೂದರಿ ಕುಟುಂಬದಲ್ಲಿ ಜನಿಸಿದ ನಾನು ಜೈಲುವಾಸ ಅನುಭವಿಸಿದ ಕಾರಣ ನನ್ನನ್ನು ಜಾತಿಯಿಂದ ಹೊರಗಿಡಲಾಗಿತ್ತು. ನನ್ನ ಮದುವೆ ಸಂಪ್ರದಾಯ ಪ್ರಕಾರ ನಡೆಯಲೇಬೇಕೆಂಬ ಒಂದು ರೀತಿಯ ಆಸೆ ಅಂದು ನನಗಿತ್ತು. ಆದುದರಿಂದ ಸಂಪ್ರದಾಯ ಪ್ರಕಾರ ನನ್ನ ಮದುವೆ ನಡೆಯಿತು. ಬ್ರಾಹ್ಮಣ ಸಮುದಾಯದಲ್ಲಿ ವಿಧವಾ ವಿವಾಹ, ಅಂತರ್ ಜಾತಿ ವಿವಾಹಗಳನ್ನು ಸಂಪ್ರದಾಯ ಪ್ರಕಾರವೇ ನಡೆಸಬೇಕೆಂದು ಅಂದು ನನ್ನ ವಾದವಾಗಿತ್ತು. ಈ ಕಾರಣದಿಂದ ಸಂಪ್ರದಾಯ ಪ್ರಕಾರ ನಡೆದ ನನ್ನ ವಿವಾಹ ನನಗೆ ಒಂದು ಗೆಲುವನ್ನು ಕೊಟ್ಟಿತು.

ವಿವಾಹದ ಬಗ್ಗೆ ವಿಚಾರ ಬರುವಾಗ ನಾನೊಬ್ಬ ಪೂರ್ಣ ಕಾಲದ ರಾಜಕೀಯ ಕಾರ್ಯಕರ್ತನಾಗಿದ್ದೆ. ರಾಜಕೀಯ ಕೆಲಸ ಕಾರ್ಯಗಳ ನಿಮಿತ್ತ ನಾನು ಬೇರೆ ಬೇರೆ ಊರುಗಳಿಗೆ ತೆರಳಬೇಕಾದ ಪರಿಸ್ಥಿತಿ ಇತ್ತು. ಆದುದರಿಂದ ವಿವಾಹದ ನಂತರ ನಾನೊಬ್ಬ ಗೃಹಸ್ಥನಾಗಿ ಮನೆಯಲ್ಲಿ ಉಳಿಯುತ್ತೇನೆ ಎಂದು ಯಾರೂ ತಿಳಿದಿರಲಿಲ್ಲ. ನನ್ನ ಮತ್ತು ನನ್ನ ವಧುವಿನ ಮನೆಯವರಿಗೂ ಇದು ಆತಂಕದ ವಿಷಯವಾಗಿತ್ತು. ಆದರೆ ನನ್ನ ಪಂಗಡದಲ್ಲಿ ಹಾಗೂ ಜನ ಸಮುದಾಯದೊಳಗೆ ನನಗೆ ಇದ್ದ ಸ್ಥಾನಮಾನ ನೋಡಿ ವಧುವಿನ ಸಹೋದರ ಈ ಮದುವೆಗೆ ಸಮ್ಮತಿಸಿದ. ವಧುವಿನ ಅಣ್ಣ ರಾಜಕೀಯ ಕಾರ್ಯಕರ್ತನಲ್ಲದಿದ್ದರೂ ಒಬ್ಬ ಸಮಾಜ ಸೇವಕನಾಗಿದ್ದ. ಆ ಕಾರಣದಿಂದ ನನ್ನ ಬಗ್ಗೆ ಗೌರವ ಹೊಂದಿದ್ದ. ಆದರೆ ಕುಟುಂಬ ಜೀವನಕ್ಕೆ ರಾಜಕೀಯ ಕೆಲಸ ಅಡ್ಡಿಯಾಗಬಹುದು ಎಂದು ಆತನಿಗೆ ಆತಂಕವಿತ್ತು ಹಾಗೂ ಈ ಆತಂಕ ಒಂದು ರೀತಿಯಲ್ಲಿ ನಿಜವಾಗಿತ್ತು.

ಆದರೆ ಈ ಮನುಷ್ಯ ಜೀವಂತವಾಗಿರುವಾಗಲೇ ನಾನು ಮೊದಲ ಬಾರಿಗೆ 27 ತಿಂಗಳ ಕಾರಗೃಹವಾಸ ಹಾಗೂ ಎರಡನೇ ಬಾರಿ 48 ತಿಂಗಳ ಭೂಗತವಾಸ ಅನುವಭವಿಸಿದೆ. ವಿವಾಹದ ನಂತರ ಮೊದಲು ಜೈಲು ವಾಸದ ಸಮಯದಲ್ಲಿ ನನಗೆ ಒಂದು ಮಗುವಿತ್ತು ಹಾಗೂ ಎರಡನೆ ಬಾರಿ ಭೂಗತ ಜೀವನದ ಸಮಯದಲ್ಲಿ

ಸಕಲಗೌರವಗಳೊಂದಿಗೆ ಅಂತಿಮ ಯಾತ್ರೆ

'ಆರ್ಯ' ರವರು ಜನವರಿ 3 ರಂದು ನಿಧನರಾದರು. ಅವರ ಪಾರ್ಥೀವ ಶರೀರವನ್ನು ಸಿಪಿಐ(ಎಂ) ಪಕ್ಷದ ರಾಜ್ಯ ಸಮಿತಿಯ ಕಛೇರಿಯಿಂದ ತ್ರಿವೆಂಡ್ರಂನ ಎ.ಕೆ.ಜಿ. ಸೆಂಟರ್‌ಗೆ ತರಲಾಯಿತು. ಪಕ್ಷದ ಹಿರಿಯ ಮುಖಂಡರಿಗೆ ಸೂಚಿಸಲಾಗುವ ಎಲ್ಲಾ ಗೌರವಗಳನ್ನು ಸಲ್ಲಿಸಿ ಅಂತ್ಯ ಸಂಸ್ಕಾರ ಮಾಡಲಾಯಿತು. ಮೆರವಣಿಗೆಯ ಈ ಅಂತಿಮ ಯಾತ್ರೆಯಲ್ಲಿ ಸಾವಿರಾರು ಜನ ಪಾಲ್ಗೊಂಡಿದ್ದರು.

ನನ್ನ ಪತ್ನಿ ಹಾಗೂ ಮಕ್ಕಳು ಅವರ ಸಹೋದರನ ಜೊತೆ ವಾಸವಾಗಿದ್ದರು. ನನ್ನ ಪತ್ನಿ ಹಾಗೂ ಅವರ ಕುಟುಂಬಕ್ಕೆ ನನ್ನ ರಾಜಕೀಯ ಚಟುವಟಿಕೆ ಬಗ್ಗೆ ಇರುವ ಆತಂಕ ಮುಂದೆ ನನ್ನ ಕೆಲಸಗಳಿಗೆ ಅಡ್ಡಿಯಾಗಬಾರದು ಎಂಬ ದೃಡ ನಿರ್ಧಾರ ನನಗಿತ್ತು. ನನ್ನ ಪತ್ನಿಗೆ ನನ್ನ ಮದುವೆ ಸಮಯದಲ್ಲಿ ಮುಂದಿನ ಜೀವನದ ಬಗ್ಗೆ ಅರಿವು ಇರಲಿಲ್ಲ. ಆದರೆ ನಾನು ಮೊದಲ ಬಾರಿಗೆ ಅವಳ ಹತ್ತಿರ ಮಾತನಾಡಿದಾಗ "ಬಹಳ ಓದಿದವರು, ಜೈಲಿಗೆ ಹೋಗಿದ್ದಾರೆ ಎಂದು ಕೇಳಿದ್ದೇನೆ" ಎಂದು ಹೇಳಿದರು. ನನ್ನ ರಾಜಕೀಯ ಕೆಲಸ ಕಾರ್ಯಗಳ ಬಗ್ಗೆ ಪತ್ರಿಕೆಗಳಲ್ಲಿ ಬರುವ ಸುದ್ದಿಗಳನ್ನು ನನ್ನ ಪತ್ನಿ ತಿಳಿದುಕೊಂಡಿದ್ದರು. ಆದುದರಿಂದ ನನ್ನ ಬಗ್ಗೆ ಆಕೆಗೆ ಬಹಳ ಗೌರವವಿತ್ತು ಹೀಗಿದ್ದರೂ ನನ್ನ ರಾಜಕೀಯ ಚಟುವಟಿಕೆ ಗಳ ಬಗ್ಗೆ ಹೊಂದಾಣಿಕೆ ಮಾಡಲು ಆಕೆಗೆ ಬಹಳ ಕಷ್ಟವಾಗುತ್ತಿತ್ತು ಈ ಸಮಸ್ಯೆ ನಮ್ಮ ದಾಂಪತ್ಯ ಜೀವನದ 61 ವರ್ಷಗಳಲ್ಲೂ ಭಾದಿಸಿತ್ತು.

ನನ್ನ ವಿವಾಹವಾಗಿ ಕೆಲವು ತಿಂಗಳೊಳಗೆ ನಮಗೆ ಒಂದು ಮನೆ ಕಟ್ಟಿಕೊಂಡೆವು. ನನ್ನ ಮೊದಲ ಮಗುವಿನ ಅನ್ನ ತಿನ್ನಿಸುವ ಶಾಸ್ತ್ರ ಹಾಗೂ ಗೃಹ ಪ್ರವೇಶ ಒಂದೇ ದಿನ ನಡೆಯಿತು. ಈ ಸಮಯದಲ್ಲಿ ಮಗಳನ್ನು ಹಾಗೂ ಮೊಮ್ಮಗುವನ್ನು ನೋಡಲು ನನ್ನ ಪತ್ನಿಯ ತಾಯಿ ನಮ್ಮ ಮನೆಯಲ್ಲಿ ಸ್ವಲ್ಪ ಕಾಲ ಉಳಿದಿದ್ದರು. ಈ ನಡುವೆ ಯಾರ ಬಳಿಯೂ ಹೇಳದೆ ನಾನು ಭೂಗತನಾಗಬೇಕಾಯಿತು. ಭೂಗತ ಜೀವನಕ್ಕೆ ತೆರಳುವ ಮೊದಲು ಯಾರ ಬಳಿಯೂ ಹೇಳಬಾರದು ಎಂದು ಪಕ್ಷದ ನಿರ್ದೇಶನವಿತ್ತು. ಹೀಗಿರುವಾಗ ನಾನು ಎಲ್ಲಿಗೆ ತೆರಳಿದ್ದೇನೆ ಎಂಬ ಸುಳಿವು ಯಾರಿಗೂ ಇರಲಿಲ್ಲ. ನಾನು ಭೂಗತನಾದ ನಂತರ ನನ್ನ ಪತ್ನಿ ಮಗುವಿನೊಂದಿಗೆ ತವರು ಮನೆಗೆ ಹೋದರು. ತವರು ಮನೆಯಲ್ಲಿ ಇರುವಾಗ ಆಕೆಗೆ ಹಲವಾರು ಆತಂಕದ ಸುದ್ದಿಗಳು ತಲುಪತೊಡಗಿದವು. **ನನ್ನನ್ನು ಪೊಲೀಸರು ಗುಂಡಿಕ್ಕಿ ಕೊಂದಿದ್ದಾರೆ ಎಂಬ ಸುದ್ದಿ ಹಬ್ಬಿದಾಗ ನನ್ನ ಪತ್ನಿ ಬಹಳ ಅಸ್ವಸ್ಥರಾಗಿದ್ದರು.** ಕೆಲವು ಸಮಯದ ನಂತರ ನನ್ನ ಕುಟುಂಬದ ಒಬ್ಬರ ಜೊತೆ ನಾನು ಒಂದು ಪತ್ರವನ್ನು ನನ್ನ ಪತ್ನಿಗೆ ತಲುಪಿಸಿದೆ.

ಈ ಪತ್ರ ಆಕೆಯನ್ನು ಮಾನಸಿಕ ಸಂಘರ್ಷದಿಂದ ಹೊರತಂದಿತು. ಈ ಭೂಗತ ಜೀವನ ನನಗೂ ಮಾನಸಿಕವಾಗಿ ಬಹಳ ಸಂಕಷ್ಟದ ದಿನಗಳಾಗಿದ್ದವು. ಪಕ್ಷದ ಮೇಲಿನ ನಿಷೇಧ ಹಿಂತೆಗೆದ ನಂತರ ನಾನು ಭೂಗತ ಜೀವನದಿಂದ

ಕ್ರಾಂತಿಕಾರಿ ಚಳುವಳಿಗೆ ತೆರೆಮರೆಯಲ್ಲಿದ್ದ ಶ್ರೀಮತಿ ಆರ್ಯಂರವರ ಕೊಡುಗೆ, ತ್ಯಾಗ ಅಪಾರ. ಅವರ ಬದುಕು ಎಲ್ಲರಿಗೂ ಆದರ್ಶ.

ಪಕ್ಷದ ಮುಖ್ಯ ಕಛೇರಿಗೆ ತೆರಳುವಂತೆ ನನಗೆ ಪಕ್ಷದಿಂದ ನಿರ್ದೇಶನ ಬಂದಿತು. ಆಗ ಪಕ್ಷದ ಕೇಂದ್ರ ಕಛೇರಿ ಮುಂಬಯಿಯಲ್ಲಿತ್ತು. ಭೂಗತ ಜೀವನ ಕೊನೆಗೊಂಡರೂ ಪತ್ನಿ ಮಕ್ಕಳನ್ನು ನೋಡದೇ ನಾನು ಮುಂಬೈಗೆ ತೆರಳಬೇಕಾಯಿತು.

ಎರಡು ವಾರಗಳ ನಂತರ ಹಿಂತಿರುಗಿ ಬಂದು ಪತ್ನಿ ಮಕ್ಕಳನ್ನು ನೋಡಬೇಕಾಯಿತು. **ಭೂಗತ ಜೀವನದಿಂದ ಹೊರಬಂದ ನಂತರ ಪತ್ನಿ ಹಾಗೂ ಮಗುವನ್ನು ಕರೆದುಕೊಂಡು ಕಲ್ಲಿಕೋಟೆ ಪಕ್ಷದ ಕಚೇರಿಯಲ್ಲಿ ಜೀವನ ಆರಂಭಿಸಿದೆ.** ಕೆಲವು ತಿಂಗಳ ನಂತರ ಪಕ್ಷದ ಕೇಂದ್ರ ಕಛೇರಿಯಲ್ಲಿ ಮುಂಬೈನಲ್ಲಿ ಕೆಲಸ ಮಾಡಲು ಪಕ್ಷದ ನಿರ್ದೇಶನ ಬಂದಿತು. ಆಗ ಕುಟುಂಬದ ಜೊತೆ ಮುಂಬೈ ಪಕ್ಷದ ಕಛೇರಿಯಲ್ಲಿ ವಾಸ ಆರಂಭಿಸಿದೆ. ಅಂದಿನಿಂದ ನನ್ನ ಕೆಲಸದ ಮುಖ್ಯ ಕೇಂದ್ರಗಳು ಮುಂಬೈ, ಮದ್ರಾಸ್, ದೆಹಲಿ, ಕಲ್ಕತ್ತಾಗಳಾದವು. ಇಲ್ಲೆಲ್ಲಾ ನಾನು ಕುಟುಂಬದೊಡನೆ ಪಕ್ಷದ ಕಛೇರಿಯಲ್ಲಿ ಜೀವನ ನಡೆಸಲು ವ್ಯವಸ್ಥೆಯಾಗಿತ್ತು. ಈ ನಡುವೆ ನನಗೆ ಎರಡು ಬಾರಿ ಸೋವಿಯತ್ ರಷ್ಯಾ ಹಾಗೂ ರುಮೇನಿಯಾ ವಿದೇಶ ಪ್ರವಾಸ ಮಾಡುವ ಅವಕಾಶ ಬಂದಾಗ ನನ್ನ ಪತ್ನಿ ಜೊತೆಯಲ್ಲಿದ್ದರು. ಮುಂದೆ ಅನಾರೋಗ್ಯದ ಕಾರಣ ಚಿಕಿತ್ಸೆಗೆ ಪೂರ್ವ ಜರ್ಮನಿಗೆ ತೆರಳಿದಾಗ ಸಹಾ ನನ್ನ ಪತ್ನಿ ಜೊತೆಗಿದ್ದರು. ಆದರೆ ಪರ ಊರುಗಳ ಜೀವನ ನನ್ನ ಪತ್ನಿಗೆ ಇಷ್ಟವಾಗುತ್ತಿರಲಿಲ್ಲ. ಈ ಕಾರಣದಿಂದ ನಾವು ಪ್ರತ್ಯೇಕವಾಗಿ ವಾಸಿಸಲು ತೀರ್ಮಾನ ಕೈಗೊಂಡೆವು. ಈ ಕಾರಣ ನಾನು ಸಂತೋಷದ ಕುಟುಂಬ ಜೀವನ ನಡೆಸಿದ್ದೇನೆ ಎಂದು ಹೇಳಲು ಸಾಧ್ಯವಿರಲಿಲ್ಲ. ಆದರೆ ನಮ್ಮಿಬ್ಬರ ನಡುವೆ ಪ್ರೀತಿ ವಿಶ್ವಾಸಕ್ಕೆ ಯಾವ ಅಡ್ಡಿ ಇರಲಿಲ್ಲ.

ನಾನು ಭೂಗತನಾಗಿದ್ದ ಒಟ್ಟು 6 ವರ್ಷದ ಅವಧಿಯಲ್ಲಿ ನನ್ನ ಪತ್ನಿ ಅನುಭವಿಸಿದ ಕಷ್ಟ ಅಸಾಧ್ಯವಾದದ್ದು. ಆರ್ಥಿಕ ಸಂಕಷ್ಟದಿಂದ ಜೀವನ ನಡೆಸುವುದು ಆಕೆಗೆ ಕಷ್ಟವಾಗಿತ್ತು. ಈ ನಡುವೆ ನನ್ನ ಬಗ್ಗೆ ಜನರ ಟೀಕೆ ಆಕೆಯನ್ನು ಇನ್ನೂ ಬೇಸರಕ್ಕೆ ಈಡುಮಾಡುತ್ತಿತ್ತು. ಈ ಎಲ್ಲ ಸಂಗತಿಗಳನ್ನು ಚೆನ್ನಾಗಿ ಅರ್ಥ ಮಾಡಿಕೊಳ್ಳಲು ನನಗೆ ಸಾಧ್ಯವಾಗುತ್ತಿತ್ತು. ಈ ಕಾರಣದಿಂದ ಆದಷ್ಟು ಆಕೆಯ ನೋವು, ಬೇಸರ, ಸಂಕಷ್ಟವನ್ನು ಕಡಿಮೆ ಮಾಡಲು ನಾನು ಪ್ರಯತ್ನ ನಡೆಸುತ್ತಿದ್ದೆ. ಆದರೆ ಇವೆಲ್ಲಾ ಕಾರಣಗಳಿಂದ ನನ್ನ ರಾಜಕೀಯ ಗುರಿಯಿಂದ ನಾನು ಹಿಂದೆ ಸರಿಯಲಿಲ್ಲ. **ರಾಜಕೀಯ ಜೀವನ ಬಿಡುವುದಕ್ಕಿಂತ ಆತ್ಮಹತ್ಯೆ ಒಳ್ಳೆಯದು ಎಂದು ನಾನು ತೀರ್ಮಾನಿಸಿದ್ದೆ. ಆದರೆ ನನ್ನನ್ನು ನನ್ನ ಪತ್ನಿಯನ್ನು ಬಹಳ ದುಃಖಕ್ಕೆ ಗುರಿಮಾಡಿದ್ದ ಸಂದರ್ಭವಾಗಿತ್ತು.**

1964 ರಲ್ಲಿ ಪಕ್ಷದ ವಿಭಜನೆಗೆ ಮುಂಚಿತವಾಗಿ ನಡೆದ ಪಕ್ಷದೊಳಗಿನ ಆಂತರಿಕ ಹೋರಾಟ. ಈ ಸಮಯದಲ್ಲಿ ನನಗೆ ಯಾವುದೇ ವರಮಾನವಿರಲಿಲ್ಲ. ಸಿಪಿಐ(ಎಂ) ಉದಯದ ನಂತರ ಅವಿಭಜಿತ ಕಮ್ಯುನಿಸ್ಟ್ ಪಕ್ಷ ನನಗೆ ನೀಡುತ್ತಿದ್ದ ಸಂಭಾವನೆಯನ್ನು ಮುಂದೆ ಸಿಪಿಐ(ಎಂ) ಕೊಡಲು ಕಷ್ಟವಾಗಿತ್ತು. ಸಂಭಾವನೆ ಇಲ್ಲದ ಕಾರಣದಿಂದ ನನ್ನ ಪತ್ನಿ ಹಾಗೂ ಮಕ್ಕಳ ಜೀವನ ಬಹಳ ಕಷ್ಟಕ್ಕೆ ಸಿಲುಕಿತು. ಜೈಲುವಾಸ, ಭೂಗತ ಜೀವನದ ಅವಧಿಗಿಂತಲೂ 1964ರ ಸಮಯದಲ್ಲಿ ಜೀವನ ನನಗೆ ಬಹಳ ಕಷ್ಟವಾಗಿತ್ತು. ನನ್ನ ಜೀವಾವಧಿಯಲ್ಲಿ ಈ 2-3 ವರ್ಷಗಳ ಅವಧಿಯ ಜೀವನ ಅತ್ಯಂತ ಕಷ್ಟದಾಯಕವಾಗಿತ್ತು. ಹಳೆಯ ಜೈಲುವಾಸ, ಭೂಗತವಾಸದ ಸಮಯದ ತರಹವೇ 1964ರ ಅವಧಿಯಲ್ಲಿ ಬಂದ ಸಂಕಷ್ಟಗಳಿಂದ ನನ್ನನ್ನು, ನನ್ನ ಕುಟುಂಬವನ್ನು ಪಾರು ಮಾಡಿದ್ದ ನನ್ನ ರಾಜಕೀಯ ತಿಳುವಳಿಕೆ. 1964 ಪಕ್ಷ ವಿಭಜಿತವಾಗುವ ಕೆಲವು ತಿಂಗಳು ಮೊದಲು ಅಂದಿನ ಅವಿಭಜಿತ ಪಕ್ಷದ ಬಲ ವಿಭಾಗದ ಜೊತೆ ಪೂರ್ಣವಾಗಿ ವಿರೋಧವಿರುವಾಗಲೇ ಎಡ ವಿಭಾಗದ ಜೊತೆ ಪೂರ್ಣ ಹೊಂದಾಣಿಕೆ ಮಾಡಲು ಕಷ್ಟವಿರುವಾಗಲೂ ನನ್ನ ನಿಲುವಿನಲ್ಲಿ ನಾನು ದೃಢವಾಗಿ ನಿಂತಿದ್ದೆ. ಬಲ ಎಡವಲ್ಲದ ಮಧ್ಯವರ್ತಿ ಎಂದು ಜನ ನನ್ನನ್ನು ಟೀಕಿಸಿದರು.

ಆದರೆ 1964ರಲ್ಲಿ ನಡೆದ ಪಕ್ಷದ 7ನೇ ಮಹಾಧಿವೇಶನಕ್ಕೆ ಮುಂಚಿತವಾಗಿ ನಡೆದ ಚರ್ಚೆಗಳ ಕಾರಣದಿಂದ ಮುಂದೆ ಸಿಪಿಐ(ಎಂ) ನಿಲುವಿನ ಬಗ್ಗೆ ಪೂರ್ಣವಾಗಿ ಹೊಂದಾಣಿಕೆ ಮಾಡಿಕೊಳ್ಳಲು ನನಗೆ ಸಾಧ್ಯವಾಯಿತು. ಆ ನಂತರ ನನ್ನ ವ್ಯಕ್ತಿ ಜೀವನದಲ್ಲಿಯೂ ಕುಟುಂಬ ಜೀವನದಲ್ಲಿಯೂ ನಾನು ಎದುರಿಸಿದ ಸಂಕಷ್ಟಗಳಿಗೆ ಒಂದು ಪರಿಹಾರ ಕಂಡುಕೊಳ್ಳಲು ಸಾಧ್ಯವಾಯಿತು. ನನ್ನ ರಾಜಕೀಯ ಜೀವನ ಸಮಯದ ಘಟನೆಗಳಲ್ಲಿ ನನ್ನನ್ನು ಬಹಳ ಪ್ರೀತಿಸುತ್ತಿದ್ದ ನನಗಾಗಿ ಯಾವ

ಪುಟ 11 ಕ್ಕೆ

ಬಾಳ ಸಂಜೆಯಲ್ಲಿ...



ಕಾಂ ಸಿ.ಆರ್.ಭಟ್ ನಿಮಗಿದೋ ಕೆಂಪು ನಮನ

ಜನಮುಖಿಯಾಗಿ ಸದಾ ತುಡಿಯುತ್ತಿದ್ದ, ದುಡಿದ ವರ್ಗದ ವಿಮೋಚನೆಗೆ ತೊಡಗಿದ್ದ ಕ್ರಿಯಾಶೀಲ ಸಂಗಾತಿ ಭಟ್ ಇನ್ನಿಲ್ಲ



"ಯಾವಾಗಲೂ ಹೆಗಲ ಮೇಲೊಂದು ಚೀಲ, ಅದರಲ್ಲಿ ವಿವಿಧ ಪುಸ್ತಕಗಳು. ಯಾವುದೇ ರ್‍ಯಾಲಿ, ಸಭೆಗಳಿಗೆ ಹಾಜರು. ಪ್ರತಿಯೊಬ್ಬರಲ್ಲಿಗೂ ಹೋಗಿ ವಿವಿಧ ಪುಸ್ತಕಗಳನ್ನು ಪರಿಚಯಿಸಿ, ಕೊಂಡುಕೊಳ್ಳಲು ಕೋರಿಕೆ. ಮಾರಾಟ ಮಾಡಿ ಬಂದ ಕಮಿಷನ್‌ನಿಂದ ಧಾರವಾಡ ಜಿಲ್ಲಾ ಪಕ್ಷದ ಚಟುವಟಿಕೆಗಳಿಗೆ ಬಳಕೆ" ಇದು ಕಾಮ್ರೇಡ್ ಸಿ.ಆರ್.ಭಟ್ ಅವರ ಪಕ್ಷದ ಚಟುವಟಿಕೆಗಳಲ್ಲಿ ಪ್ರಮುಖವಾದ ಒಂದು ಕೆಲಸ. ಈ ಕೆಲಸಕ್ಕೆ ಯುವಜನರನ್ನು ಉತ್ತೇಜಿಸುತ್ತಿದ್ದರು.

ಆದರೆ ಈ ಚೇತನ ಇನ್ನಿಲ್ಲ. ಮಾರ್ಚ್ 10 ರ ರಾತ್ರಿ ಸುಮಾರು 10 ಗಂಟೆಗೆ ಸಿಪಿಐ(ಎಂ) ಪಕ್ಷದ ರಾಜ್ಯ ಸಮಿತಿ ಸದಸ್ಯ, ಧಾರವಾಡ ಜಿಲ್ಲಾ ಸಂಘಟನಾ ಸಮಿತಿ ಕಾರ್ಯದರ್ಶಿ ಸಿ.ಆರ್.ಭಟ್ ಧಾರವಾಡದ ತಮ್ಮ ಮನೆಯಲ್ಲಿ ನಿಧನರಾದರು. ಕೆಲಕಾಲ ಕ್ಯಾನ್ಸರ್‌ನಿಂದ ಬಳಲುತ್ತಿದ್ದ ಅವರಿಗೆ 67 ವರ್ಷ ವಯಸ್ಸಾಗಿತ್ತು. ಪತ್ನಿ ಸೀತಾ, ಇಬ್ಬರು ಪುತ್ರಿಯರು, ಅಳಿಯ, ಮೊಮ್ಮಕ್ಕಳು ಹಾಗೂ ಪಕ್ಷದ ಸದಸ್ಯರು, ಹಿತೈಷಿಗಳನ್ನು ಅವರು ಅಗಲಿದ್ದಾರೆ.

ವಿಮಾ ಕೊಡುಗೆ

ಕಾಂ. ಭಟ್ಟರು ಸಂಘಟಿತ ನೌಕರ ವರ್ಗದ ಚಳುವಳಿಯ ಕೊಡುಗೆ. 1958 ರಲ್ಲಿ ಜೀವವಿಮಾ (ಎಲ್‌ಐಸಿ) ಉಡುಪಿ ಶಾಖೆಯಲ್ಲಿ ನೌಕರಿಗೆ ಸೇರಿದ ಅವರು 1964 ರಿಂದ 1972 ರವರೆಗೆ ಕೆಲಸ ಕಡಿತ ಮಾಡುವ ಯಾಂತ್ರೀಕರಣದ ವಿರುದ್ಧದ ಚಳುವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿದರು. ಅವರು ಎಐಐಇಎ ಯ ವಿಭಾಗೀಯ ಮಟ್ಟದಿಂದ ಅಖಿಲ ಭಾರತ ಮುಖಂಡತ್ವದ ವರೆಗೂ ಬೆಳೆದವರು. ಆ ಮೂಲಕ ಎಡ ಚಳುವಳಿಯತ್ತ ಆಕರ್ಷಿತರಾದರು. 1992 ರಲ್ಲಿ ನಿವೃತ್ತಿ ಹೊಂದಿದಾಗ ಪಕ್ಷದ ಪೂರ್ಣಾವಧಿ ಕಾರ್ಯಕರ್ತರಾಗಿ ದುಡಿದರು. ಅದಕ್ಕಾಗಿ ಪಕ್ಷದಿಂದ ಯಾವುದೇ ಸಂಭಾವನೆ ಪಡೆಯಲಿಲ್ಲ.

1971 ರಲ್ಲಿ ಅವರಿಗೊಂದು ಜಿಜ್ಞಾಸೆ ಕಾಡಿತ್ತು. ಅವರಿಗೆ ಭಡ್ತಿಯ ಅವಕಾಶ ದೊರೆಯಿತು. ಭಡ್ತಿಯೊಂದಿಗೆ ಅಧಿಕಾರಿಯಾಗುವುದೇ ಅಥವಾ ಸಹಾಯಕ ಹುದ್ದೆಯಲ್ಲಿದ್ದು ಸಂಘಟನೆಯ ಚಟುವಟಿಕೆ ಮುಂದುವರಿಸುವುದೇ ಎಂಬ ಅನುಮಾನ ಕಾಡತೊಡಗಿತು. ತನ್ನ ಸಂಶಯವನ್ನು ಬಗೆಹರಿಸಬೇಕೆಂದು ಜೀವವಿಮಾ ಸಂಘಟನೆಯ ಅಖಿಲ ಭಾರತ ಮುಖಂಡರನ್ನು ಕೇಳಿಕೊಂಡರು. ಆಗ ಅವರು ಪಕ್ಷದ ಸದಸ್ಯರಾಗಿರಲಿಲ್ಲ. ಆದ್ದರಿಂದ ಅಂದು ಜೀವವಿಮಾ ನೌಕರ ಸಂಘ (ಎಐಐಇಎ) ದ ಅಖಿಲ ಭಾರತ ಮುಖಂಡರಾಗಿದ್ದ, ನಂತರ ಸಿಪಿಐ(ಎಂ) ಪಕ್ಷದ ಪೊಲಿಟ್‌ಬ್ಯೂರೋ ಸದಸ್ಯರಾದ ಕಾಂ. ಸುನಿಲ್ ಮೈತ್ರರವರು ಅವರಿಗೆ ಸಮಜಾಯಿಷಿ ನೀಡಿದರು. 'ಎಡ ಚಳುವಳಿಯ ಹಿತೈಷಿಗಳು ಎಲ್ಲಾ ಹಂತಗಳಲ್ಲೂ ಕೆಲಸ ಮಾಡ ಬೇಕಾಗುತ್ತದೆ. ನೀವು ಅಧಿಕಾರಿ ಹುದ್ದೆಯಲ್ಲಿದ್ದು, ಅಲ್ಲಿನ ಸಂಘಟನೆಯಲ್ಲಿ ಸಕ್ರಿಯವಾಗಿ ಭಾಗವಹಿಸಿ ಎಡ ಚಳುವಳಿಗೆ ಕೊಡುಗೆ ನೀಡಬಹುದು' ಎಂದು ಸ್ಪಷ್ಟನೆ ನೀಡಿದರು. ಅಂದರೆ, ಸಂಘಟನಾ ಶಿಸ್ತಿಗೆ ಒಳಪಡಿಸಿಕೊಂಡ ಕಾಮ್ರೇಡ್ ಭಟ್ ಸ್ವಂತ ನಿರ್ಧಾರಕ್ಕೆ ಮೊರೆ ಹೋಗದೆ, ಪಕ್ಷದ, ಸಂಘಟನೆಯ ಆದೇಶದಂತೆ ನಡೆದುಕೊಳ್ಳುತ್ತಿದ್ದರು.

ಓದು - ಬರಹ

ಓದು ಮತ್ತು ಬರಹ ಭಟ್ಟರಿಗೆ ಅಚ್ಚುಮೆಚ್ಚು. ಮಾರ್ಕ್ಸ್‌ವಾದ, ಲೆನಿನ್‌ವಾದದ ಸಾಹಿತ್ಯವನ್ನು ಅಭ್ಯಸಿಸುವುದರ ಜತೆಯಲ್ಲಿ ಪ್ರಚಲಿತ ವಿದ್ಯಮಾನಗಳ ಬಗ್ಗೆ ಆಳವಾದ ಅಭ್ಯಾಸ ನಡೆಸಿ, ವಿವಿಧ ವಿಷಯಗಳಿಗೆ ಸಂಬಂಧಪಟ್ಟಂತೆ 13 ಪುಸ್ತಕಗಳನ್ನು ಬರೆದು ಪ್ರಕಟಿಸಿದರು. ಅವರು ಬರೆದು ಪ್ರಕಟಿಸಿದ 'ಜಾಗತೀಕರಣದ ಹತ್ತು ವರ್ಷಗಳು-ಭಾರತೀಯ ಅನುಭವ' ಮತ್ತು 'ಕೋಮುವಾದ ಎಂದರೇನು?' ಹೊತ್ತಿಗೆಗಳು ಮರುಮುದ್ರಣಗೊಂಡು ತಲಾ 10,000 ಪ್ರತಿಗಳು ಮಾರಾಟವಾದವು. ಕರ್ನಾಟಕದ ಮಟ್ಟಿಗೆ ಇದು ಗಮನಾರ್ಹ ಕೆಲಸವೇ ಸರಿ. ಐಕ್ಯರಂಗ ಪತ್ರಿಕೆಗೆ ಹಲವಾರು ವರ್ಷಗಳ ಕಾಲ ಆರ್ಥಿಕ ಸಮೀಕ್ಷೆಯ ಬರಹ ಕೊಡುಗೆಯಾಗಿ ನೀಡಿದ್ದಾರೆ.

ಪಕ್ಷದ ಶಿಕ್ಷಣಕ್ಕೆ ಒತ್ತು ನೀಡಿದ ಅವರು ಹಲವಾರು ರಾಜ್ಯ / ಜಿಲ್ಲಾ / ತಾಲ್ಲೂಕು ಮಟ್ಟದ ಶಿಬಿರಗಳಲ್ಲಿ ತರಬೇತಿ ನೀಡುತ್ತಿದ್ದರು. ಹಿಂದಿನ ರಾಜ್ಯ ಕಾರ್ಯದರ್ಶಿ ಪಿ.ರಾಮಚಂದ್ರರಾವ್ ಅವರು ಬರೆದ 'ಪಕ್ಷದ ಶಾಖೆಗಳು ಹೇಗೆ ಕಾರ್ಯ ನಿರ್ವಹಿಸಬೇಕು' ಎಂಬ ಕಿರು ಹೊತ್ತಗೆಯನ್ನು ಬರೆಯಲು ಸಹಾಯ ಮಾಡಿದರು.

ಸಾಂಸ್ಕೃತಿಕ ಚಳುವಳಿಯೊಂದಿಗೆ

1976 ರಿಂದಲೇ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡ ಕಾಂ. ಭಟ್ ರಾಜ್ಯದಲ್ಲಿ ಸಮುದಾಯ ಸಂಘಟನೆಯನ್ನು ಹುಟ್ಟುಹಾಕುವಲ್ಲಿ, ಸಕ್ರಿಯಗೊಳಿಸುವಲ್ಲಿ ಶ್ರಮವಹಿಸಿದರು. ಉಡುಪಿ, ಶಿವಮೊಗ್ಗ ಮತ್ತು ಹುಬ್ಬಳ್ಳಿ-ಧಾರವಾಡ ಘಟಕಗಳನ್ನು ಸ್ಥಾಪಿಸುವಲ್ಲಿ ಪ್ರಮುಖ ಪಾತ್ರವಹಿಸಿದರು. ಜೀವಿತದ ಕೊನೆಯವರೆಗೂ ರಾಜ್ಯ ಘಟಕದ ಕಾರ್ಯಾಧ್ಯಕ್ಷರಾಗಿದ್ದರು.

1980-82 ನವಲಗುಂದ-ನರಗುಂದ ರೈತರ ಹೋರಾಟ ತೀವ್ರವಾಗಿದ್ದ ಕಾಲ. ಅಂತಹ ಸಂದರ್ಭದಲ್ಲಿ 'ಸಮುದಾಯ' ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿತ್ತು. 'ಎಡ ಪ್ರಜಾಪ್ರಭುತ್ವ ಶಕ್ತಿಗಳು ಒಂದಾಗಿ ರೈತನೆಡೆಗೆ ಜಾಥಾ' ಎಂಬ ಘೋಷಣೆಯ ಅಡಿಯಲ್ಲಿ ಜಿಲ್ಲಾವಾರು ಜಾಥಾಗಳನ್ನು ಸಂಘಟಿಸಲಾಗಿತ್ತು. ಅಂದಿನ ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯದಿಂದ ಕುಂದಾಪುರದವರೆಗೆ 1981 ಜನವರಿ 1 ರಿಂದ 15 ರವರೆಗೆ ನಡೆದ 15 ದಿನಗಳ ಜಾಥಾದಲ್ಲಿ ಕಾಂ.ಭಟ್ಟರು ಸಂಚಾಲಕರಾಗಿ ಜನರೆಡೆಗೆ ಜಾಥಾವನ್ನು ಕೊಂಡೊಯ್ದರು. ಹಾಗೆ ಹುಬ್ಬಳ್ಳಿಯಲ್ಲಿ ಈದ್ಗಾಮೈದಾನದ ವಿವಾದ ಭುಗಿಲೆದ್ದಾಗ ಕೋಮುಸೌಹಾರ್ದತೆಗಾಗಿ ಹಲವು ಕಾರ್ಯಕ್ರಮ ರೂಪಿಸಲು ಶ್ರಮಿಸಿದರು.

ಐಕ್ಯಚಳುವಳಿಗಾಗಿ

ಸರಕಾರದ ನೀತಿಗಳ ವಿರುದ್ಧ ವಿವಿಧ ಕಾರ್ಮಿಕ ಮತ್ತು ಸಾಮೂಹಿಕ ಸಂಘಟನೆಗಳನ್ನು ಒಂದೆಡೆ ಸೇರಿಸಲು ಶ್ರೀಯುತ ಭಟ್ಟರು ಪ್ರಯತ್ನಿಸಿದರು. ಹಲವ ಕಾರ್ಮಿಕ ಸಂಘಟನೆಗಳ ಹೋರಾಟಗಳಲ್ಲಿ ಸ್ವತಃ ಭಾಗವಹಿಸಿ ಪ್ರೋತ್ಸಾಹ ನೀಡಿದ ಭಟ್ಟರದ್ದು ಬಹುಮುಖ ವ್ಯಕ್ತಿತ್ವ.

ವಿಜ್ಞಾನ ಮತ್ತು ಸಾಕ್ಷರತಾ ಚಟುವಟಿಕೆಗಳಲ್ಲೂ ಕಾಮ್ರೇಡ್ ಭಟ್ ತೊಡಗಿಸಿಕೊಂಡಿದ್ದರು. ಸಾಕ್ಷರತಾ ಸಮಿತಿಯ ಧಾರವಾಡ ಜಿಲ್ಲಾ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸಿದರು. ಗ್ರಾಮ ಪಂಚಾಯತಿ ನೌಕರರ ಸಂಘದ ರಾಜ್ಯ ಖಜಾಂಚಿಯಾಗಿದ್ದ ಅವರು ಧಾರವಾಡ, ಹಾವೇರಿ ಮತ್ತು ಗದಗ ಜಿಲ್ಲೆಗಳ ಸಮನ್ವಯ ಸಮಿತಿಯ ಅಧ್ಯಕ್ಷರಾಗಿ ಸಂಘಟನೆಯಲ್ಲಿ ತೊಡಗಿದರು. ಸಿಐಟಿಯು ನ ರಾಜ್ಯ ಸಮಿತಿ ಸದಸ್ಯರೂ ಆಗಿದ್ದರು.

ಗೌರವಾಂಜಲಿ

ಮಾರ್ಚ್ 11 ರಂದು ಬೆಳಿಗ್ಗೆ ಕಾಮ್ರೇಡ್ ಭಟ್ಟರ ನಿಧನದ ಸುದ್ದಿ ತಿಳಿಯುತ್ತಲೆ ರಾಜ್ಯ ಸಮಿತಿ ಕಚೇರಿಯಲ್ಲಿ ಪಕ್ಷದ ಬಾವುಟವನ್ನು ಅರ್ಧಕ್ಕೆ ಇಳಿಸಲಾಯಿತು. ನಂತರ 11.30 ಕ್ಕೆ ಜೀವವಿಮೆ ನೌಕರರ ಮುಖಂಡರಾದ ಅಮಾನುಲ್ಲಾ ಖಾನ್ ಅಧ್ಯಕ್ಷತೆಯಲ್ಲಿ ಶ್ರದ್ಧಾಂಜಲಿ ಸಭೆ ನಡೆಯಿತು. ಪಕ್ಷದ ರಾಜ್ಯ ಕಾರ್ಯದರ್ಶಿ ಮತ್ತು ಕೇಂದ್ರ ಸಮಿತಿ ಸದಸ್ಯ ಸೂರ್ಯನಾರಾಯಣ ರಾವ್ ಶ್ರದ್ಧಾಂಜಲಿ ಸಲ್ಲಿಸುತ್ತಾ, ಭಟ್ಟರ ಸರಳತೆ ಮತ್ತು ಪಕ್ಷದ ಚಟುವಟಿಕೆಗೆ ಅವರ ಕೊಡುಗೆಯನ್ನು ಸ್ಮರಿಸಿದರು. ಕಾರ್ಯದರ್ಶಿ ಮಂಡಳಿ ಸದಸ್ಯರಾದ ವಿ.ಜೆ.ಕೆ.ನಾಯರ್, ಐಕ್ಯರಂಗದಿಂದ ಎಸ್.ವೈ.ಗುರುಶಾಂತ್, ಸಿಐಟಿಯು ಮುಖಂಡ ಹಾಗೂ ಭಟ್ಟರ ನೌಕರ ಸಂಘದ ಚಟುವಟಿಕೆಗಳಲ್ಲಿ ಆತ್ಮೀಯ ಸಂಗಾತಿ ಯಾಗಿದ್ದ ಕೆ.ವಿ.ಶ್ರೀನಿವಾಸನ್, ಸಮುದಾಯದ ಪರವಾಗಿ ಎಸ್.ಸುರೇಂದ್ರ ಶ್ರದ್ಧಾಂಜಲಿ ಸಲ್ಲಿಸುತ್ತಾ ಅವರು ಹಾಕಿಕೊಂಡ ಗುರಿಯನ್ನು ತಲುಪಲು ಕೆಲಸ ಮಾಡುವುದೇ ಅವರಿಗೆ ಸಲ್ಲುವ ನಿಜವಾದ ಶ್ರದ್ಧಾಂಜಲಿ ಎಂದು ಬಣ್ಣಿಸಿದರು.

ಸರಳತೆ ಮತ್ತು ಪ್ರಮಾಣಿಕತೆ ತಮ್ಮ ಜೀವನದಲ್ಲಿ ಸದಾಕಾಲ ಅಳವಡಿಸಿಕೊಂಡಿದ್ದ ಭಟ್, ಬೆಂಗಳೂರಿಗೆ ಬಂದಾಗ ಹೆಚ್ಚಾಗಿ ಪಕ್ಷದ ರಾಜ್ಯ ಸಮಿತಿ ಕಛೇರಿಯ ಉದ್ದ ಮೇಜಿನ ಮೇಲೆ ಮಲಗುತ್ತಿದ್ದರು. ತಾನೊಬ್ಬ ನಿವೃತ್ತ ಅಧಿಕಾರಿ ಅನ್ನುವುದಕ್ಕಿಂತ ಪಕ್ಷದ ಪೂರ್ಣಾವಧಿ ಕಾರ್ಯಕರ್ತ ಎನ್ನುವ ಭಾವನೆಯೇ ಅವರಲ್ಲಿತ್ತು. ಯಾವುದೇ ಜವಾಬ್ದಾರಿಯನ್ನು ಅವರಿಗೆ ವಹಿಸಿದಾಗ ಅದು ಪೂರ್ಣಗೊಳ್ಳುವವರೆಗೂ ಬಿಡುತ್ತಿರಲಿಲ್ಲ. ತನ್ನ ಸಾವಿನ ಬಳಿಕ ತನ್ನೆರೆಡು ಕಣ್ಣುಗಳನ್ನು ದೃಷ್ಟಿಹೀನರಿಗೆ ನೀಡಬೇಕೆಂದು ಭಟ್ ಬಯಸಿದ್ದರು. ಅದರಂತೆ ಅವರ ಕಣ್ಣುಗಳನ್ನು ಹುಬ್ಬಳ್ಳಿಯ ಎಂ.ಎಂ.ಜೋಶಿ ಕಣ್ಣು 'ಬ್ಯಾಂಕ್' ಗೆ ನೀಡಲಾಯಿತು. ತಾನು ಜಗತ್ತಿನಿಂದ ದೂರವಾದರೂ ಇನ್ನೋರ್ವನಿಗೆ ಜಗತ್ತನ್ನು ಕಾಣಿಸಿದ ಉತ್ಕಟ ಕಮ್ಯುನಿಸ್ಟ್ ಗುಣ ಕಾಂ. ಭಟ್ಟರದ್ದು.

ಪ್ರತಿಭಾವಂತ ವಿದ್ಯಾರ್ಥಿ: ಸಿ.ಆರ್.ಭಟ್ ಪ್ರತಿಭಾವಂತರಾಗಿದ್ದರು. 1957 ರಲ್ಲಿ ಪುಣೆಯಲ್ಲಿ ಬಿ.ಕಾಂ. ಪದವಿ ಪಡೆದ ಅವರು ಒಂದು ವರ್ಷಕಾಲ ಉಡುಪಿಯ ಎಂ.ಜಿ.ಎಂ. ಕಾಲೇಜಿನಲ್ಲಿ ಟ್ಯೂಟರ್ ಆಗಿದ್ದರು. 1958 ರಲ್ಲಿ ಉಡುಪಿ ಜೀವವಿಮಾ ಶಾಖೆಯಲ್ಲಿ ಸಹಾಯಕ ಹುದ್ದೆಯಲ್ಲಿ ನೇಮಕ. ವೃತ್ತಿಯಲ್ಲಿರುವಾಗಲೇ ಎಲ್.ಎಲ್.ಬಿ., ಎಂ.ಕಾಂ. ಪದವಿಗಳನ್ನು ಗಳಿಸಿದ್ದು ಮಾತ್ರವಲ್ಲದೆ, ವಿಶ್ವವಿದ್ಯಾಲಯಕ್ಕೆ ಪ್ರಥಮ ಸ್ಥಾನಗಳಿಸಿದರು.

ಸಿ.ಆರ್.ಭಟ್‌ರನ್ನು ಕಳೆದುಕೊಂಡ ಪಕ್ಷಕ್ಕೆ ಎಡ, ಪ್ರಗತಿಪರ ಚಳುವಳಿಗೆ ಅದರಲ್ಲೂ ಧಾರವಾಡ ಜಿಲ್ಲಾ ಸಮಿತಿಗೆ ಅಪಾರ ನಷ್ಟವಾಗಿದೆ. ಸಿ.ಆರ್.ಭಟ್ ಅವರ ನಿಧನಕ್ಕೆ ಸಿಪಿಐ(ಎಂ) ಪೊಲಿಟ್‌ಬ್ಯೂರೋ ತನ್ನ ಶ್ರದ್ಧಾಂಜಲಿಯನ್ನು ತಿಳಿಸಿದೆ.

- ಬಾಲಕೃಷ್ಣಶೆಟ್ಟಿ

..........'ಆರ್ಯಂ' ನಿಧನ

ತ್ಯಾಗಗಳಿಗೂ ತಯಾರಿದ್ದ ನನ್ನ ತಾಯಿ ಹಾಗೂ ನನ್ನ ಪತ್ನಿ ಅನುಭವಿಸಿದ ಕಷ್ಟಗಳ ಬಗ್ಗೆ ನನಗೆ ಬಹಳ ಬೇಸರವಿದೆ"

ಈ ರೀತಿ ಚರಿತ್ರೆ ಶಿಲ್ಪಿಯಾಗಿದ್ದ ವ್ಯಕ್ತಿಯೊಬ್ಬರ ರಾಜಕೀಯ ತ್ಯಾಗಗಳಲ್ಲಿ 6 ದಶಕಗಳ ಕಾಲ ಜೊತೆಯಾಗಿದ್ದ ಈ ಮಾತೆಯ ಸಾವು ನಮಗೆಲ್ಲರಿಗೂ ಒಂದು ರೀತಿಯ ನಷ್ಟ. ಯಾವ ಆಸ್ತಿ, ಹಣಕ್ಕೆ ಆಸೆ ಪಡದ ಕೇವಲ ತ್ಯಾಗವೇ ಜೀವನವಾಗಿದ್ದ ಆರ್ಯ ಅಂತರ್ಜನಂ ಹೊಸ ವರ್ಷದ ಮೂರನೇ ದಿನದಲ್ಲಿ ನಮ್ಮನ್ನು ಅಗಲಿದ್ದಾರೆ. ಕೇರಳದ ಕೊಟ್ಟಾಯಂ ಜಿಲ್ಲೆಯ ರಾಜಕೀಯ ಪ್ರೌಢಿಮೆ ಇರುವಂತಹ ದೊಡ್ಡ ಶ್ರೀಮಂತ ಸಂಪ್ರದಾಯಸ್ಥ ಬ್ರಾಹ್ಮಣ ಕುಟುಂಬದಲ್ಲಿ 80 ವರ್ಷಗಳ ಮೊದಲು ಹುಟ್ಟಿದ 'ಆರ್ಯ' ಮನೆಯಾಚೆ ನಡೆದ ಯಾವುದೇ ಹೋರಾಟದಲ್ಲಿ ಭಾಗವಹಿಸದಿದ್ದರೂ ಚರಿತ್ರೆಯ ಬದಲಾವಣೆಯ ಘಟನೆಗಳನ್ನು ತಿಳಿದುಕೊಂಡು ತನ್ನ ಕೈಲಾದ ರೀತಿಯಲ್ಲಿ ಕ್ರಾಂತಿಕಾರಿ ಚಳುವಳಿಯಲ್ಲಿ ಭಾಗಿಯಾಗಿದ್ದರು. ಹಳೆಯ ಕಾಲದಲ್ಲಿ ಬ್ರಾಹ್ಮಣ ಹೆಣ್ಣು ಮಕ್ಕಳಿಗೆ ವಿದ್ಯಾಭ್ಯಾಸ ನಿಷೇಧವಾಗಿತ್ತು. ಆದುದರಿಂದ ಇವರಿಗೆ ಅಕ್ಷರಾಭ್ಯಾಸ ಸಿಕ್ಕಿರಲಿಲ್ಲ. ರಾಷ್ಟ್ರ ಕಂಡ ಅತೀ ಶ್ರೇಷ್ಟ ಕ್ರಾಂತಿಕಾರಿಯ ಜೀವನ ಸಂಗಾತಿಯಾಗುವುದರಲ್ಲಿ ಆರ್ಯರಿಗೆ ವಿಧ್ಯಾಭ್ಯಾಸ ಅಡ್ಡಿಯಾಗಿರಲಿಲ್ಲ. ದೊಡ್ಡ ಕುಟುಂಬದಲ್ಲಿ ಜನಿಸಿದ್ದ ಆರ್ಯ ಮುಂದೆ ಜೀವನದಲ್ಲಿ ಅನುಭವಿಸಿದ್ದ ದಾರಿದ್ರ್ಯ, ಕಷ್ಟಗಳಿಂದ ವಿಚಲಿತರಾಗಲಿಲ್ಲ. ದಾಂಪತ್ಯ ಜೀವನದ ಸಿಹಿ ಆರಂಭವಾಗುವ ಮೊದಲೇ ಭೂಗತ ಜೀವನ, ಜೈಲುವಾಸ, ಸಾಮ್ರಾಜ್ಯಶಾಹಿ ಶಕ್ತಿಗಳಿಗೆದುರಾಗಿ ರಾಷ್ಟ್ರ ವಿಮೋಚನೆಯ ಹೋರಾಟದ ರಣರಂಗಕ್ಕೆ ಧುಮುಕಿದ ಜೀವನ ಸಂಗಾತಿ ಬಗ್ಗೆ ಅವರಿಗೆ ಯಾವತ್ತೂ ಪರಿತಾಪವಿರಲಿಲ್ಲ. ಪತಿ ನಿಧನರಾಗಿದ್ದಾರೆ ಎಂಬ ಸುದ್ದಿ ತಿಳಿದಾಗಲೂ ಅವರು ವಿಚಲಿತರಾಗಿರಲಿಲ್ಲ.

ಪತಿ ಜೀವನಾವಧಿಯಲ್ಲಿ ಎರಡು ಬಾರಿ ಮುಖ್ಯಮಂತ್ರಿಯಾಗಿದ್ದರೂ ಆರ್ಯ ಅಂತರ್ಜನಂ ಅಧಿಕಾರ ಶಾಹಿಯ ಮಾಯಾಜಾಲದಲ್ಲಿ ಎಂದೂ ಮುಳುಗಿರಲಿಲ್ಲ. ಯಾವತ್ತು ಪತಿಯ ಜೊತೆ ಒಂದು ರೂಪಾಯಿಗೂ ದೂರದೆ ಮುಂದೆ **ನಾಲ್ಕು ಮಕ್ಕಳ ಸಂಸಾರದೊಂದಿಗೆ ಒಬ್ಬ ಕ್ರಾಂತಿಕಾರಿಯ ಮಾದರಿ ಪತ್ನಿಯಾಗಿ, ಗೃಹಸ್ಥೆಯಾಗಿ ಇದಕ್ಕಿಂತಲೂ ಹೆಚ್ಚಾಗಿ ಒಂದು ರೀತಿಯ ಸಂತಳಂತೆ ಜೀವಿಸಿದ್ದರು.** ಇವರ ಜೀವನದ ಅನುಭವಗಳು ಪತ್ರಿಕೆಗಳಲ್ಲಿ ಎಂದೂ ರಾರಾಜಿಸಲಿಲ್ಲ. ಅವರ ನಿಧನ ಬಳಿಕ ಕಣ್ಣುಗಳನ್ನು ದಾನ ಮಾಡಲು ಸೂಚಿಸಿದ್ದರು. ಅದರಂತೆ ಇತ್ತೀಚೆಗೆ 10ನೇ ತರಗತಿಯ ಬಾಲಕನಿಗೆ ಅವರ ಕಣ್ಣು ಅಳವಡಿಸಲಾಯಿತು. ಇವರ ಅಗಲಿಕೆ ಕ್ರಾಂತಿಕಾರಿ ಚಳುವಳಿಗೆ ಬಹಳ ನಷ್ಟ.

ಗುಜರಾತ್ ಹತ್ಯಾಕಾಂಡ ವಿರುದ್ಧ ದನಿಎತ್ತಿದ ಪತ್ರಿಕೆ, ಗಣ್ಯರ ಪ್ರತಿಕ್ರಿಯೆ

ಜ್ಞಾನಪೀಠ ಪ್ರಶಸ್ತಿವಿಜೇತ ಡಾ।। ಯು.ಆರ್.ಅನಂತಮೂರ್ತಿ ಅವರಿಂದಲೂ ಪೇಜಾವರ ಶ್ರೀಗಳಿಗೆ ಪತ್ರ


ಮುಗ್ಧರಾದ ಮುಸ್ಲಿಮರನ್ನು ಹಿಂದೂಗಳು ಕೊಲ್ಲುತ್ತಿರುವುದು ತಪ್ಪೆಂದು ಹೇಳುವ ಮೊದಲು ಗೋಧ್ರಾದಲ್ಲಿ ಮುಸ್ಲಿಮರು ಮಹಾ ಕಟುಕರಂತೆ ರೈಲ್ವೆ ಬೋಗಿಗೆ ಬೆಂಕಿ ಇಟ್ಟು ಹಿಂದೂಗಳನ್ನು ಕೊಂದದ್ದು ತಪ್ಪೆಂದು ಹೇಳಿ ಅರ್ಹತೆಯ ಸರ್ಟಿಫಿಕೇಟ್ ಪಡೆಯುವುದು ಹೇಸಿಗೆ ಎನಿಸುತ್ತದೆ.

ಯಾರು ಯಾರನ್ನೇ ಆಗಲಿ, ಯಾವ ಕಾರಣಕ್ಕೇ ಆಗಲಿ ಕೊಲ್ಲುವುದು ಅಕ್ಷಮ್ಯವೆಂದು ಹೇಳಲಾರದ ಕೆಟ್ಟ ಕಾಲದಲ್ಲಿ ನಾವಿದ್ದೇವೆ. ಮುಸ್ಲಿಮರ ಮತಾಂಧತೆ ಹಿಂದೂಗಳ ಮತಾಂಧತೆಯನ್ನು ಹೆಚ್ಚಿಸುತ್ತಿದೆ ಎಂದು ಹೇಳಬೇಕೋ ಅಥವಾ ಹಿಂದೂಗಳ ಮತಾಂಧತೆಯಿಂದ ಮುಸ್ಲಿಮರು ಕೆರಳುತ್ತಿದ್ದಾರೆ ಎಂದು ತಿಳಿಯಬೇಕೋ - ಈ ವಾದವೇ ಅರ್ಥಹೀನವೆನ್ನಿಸುವಂತೆ ಮನುಷ್ಯ ಮಾತ್ರರಾದ ಹಿಂದೂಗಳು, ಮುಸ್ಲಿಮರೂ ಒಬ್ಬರನ್ನೊಬ್ಬರು ದ್ವೇಷದಲ್ಲಿ ಬೇಯಿಸುತ್ತಿದ್ದಾರೆ. ಇದರ ಪರಿಣಾಮವೆಂದರೆ ನಾವು ಈಗ ಮೂರನೇ ದರ್ಜೆಯ ದೇಶವಾಗಿದ್ದೇವೆ.

ಇಂತಹ ದುಷ್ಟ ಕಾಲದಲ್ಲಿ ಅಯೋಧ್ಯೆಯಲ್ಲಿ ರಾಮನಿಗೆ ಒಂದು ದೇವಾಲಯ ಕಟ್ಟಿ ನಾವು ಸಾಧಿಸುವುದಾದರೂ ಏನು? ಸಾವಿರಾರು ಗಂಡಸಲು, ಹೆಂಗಸರು, ಮಕ್ಕಳನ್ನು ಕೊಂದು ನಾವು ರಾಮನನ್ನು ಪಡೆಯುವುದು ಸಾಧ್ಯವೇ? ಇವನು ಖಂಡಿತ ತುಳಸೀದಾಸರ ರಾಮನಲ್ಲ; ಎಳುತ್ತಚ್ಚನ್‌ನ ರಾಮನಲ್ಲ; ಕಂಬನ ರಾಮನಲ್ಲ; ಕುವೆಂಪುರವರ ರಾಮನಂತೂ ಖಂಡಿತಾ ಅಲ್ಲ; ಸತತ ರಾಮಧ್ಯಾನದಲ್ಲಿರುತ್ತಿದ್ದ ಗಾಂಧಿಯನ್ನು ಹಿಂದುತ್ವವಾದಿಯಾಗಿದ್ದ ಗೋಡ್ಸೆ ಕೊಂದಾಗ ಅವರ ತುಟಿಗಳಿಂದ ನುಡಿಯಾಗಿ ಹೊರಬಂದ ರಾಮನಂತೂ ಈ ಅಯೋಧ್ಯೆಯಲ್ಲಿ ವಿಗ್ರಹವಾಗಬೇಕೆಂದಿರುವ ರಾಮ ಅಲ್ಲವೇ ಅಲ್ಲ.

ಕೃಪೆ: ಜನವಾಹಿನಿ

.... ದೇಶ ವಿಭಜನೆಯ ನಂತರ ದೇಶದಲ್ಲಿ ಕೋಮುದ್ವೇಷವನ್ನು ಗರಿಷ್ಠ ಪ್ರಮಾಣದಲ್ಲಿ ಉಂಟುಮಾಡಿದ ವಿಚಾರ ಅಯೋಧ್ಯೆ ಪ್ರಕರಣ ಎನ್ನಲಡ್ಡಿಯಿಲ್ಲ. ಒಂದು ದಶಕಕ್ಕಿಂತಲೂ ಹೆಚ್ಚು ಕಾಲದಿಂದ ಇದು ಆಗಿಂದ್ದಾಗ್ಗೆ ಭುಗಿಲೆದ್ದು ಜನರ ವಿತ್ತ-ಪ್ರಾಣಗಳಿಗೆ ಮುಳುವಾಗುತ್ತಿದೆ.



ಸಂಘ ಪರಿವಾರ ಸಂಘಟನೆಗಳು ಸಮಾಜವಿರೋಧಿ ಶಕ್ತಿಗಳಾಗಿದ್ದು, ಧರ್ಮದ ಹೆಸರಿನಲ್ಲಿ ಹಿಂಸೆಯನ್ನು ಹರಡುತ್ತಿವೆ...... ವಿಶ್ವಹಿಂದೂ ಪರಿಷತ್‌ನ ಕಾರ್ಯಸೂಚಿಯನ್ನು ಕಾನೂನು ಸಮ್ಮತಗೊಳಿಸುವ ಉದ್ದೇಶದಿಂದ ಸರ್ಕಾರದ ಒತ್ತಡಕ್ಕೊಳಗಾಗಿ ಕಂಚಿ ಶಂಕರಾಚಾರ್ಯ ಜಯೇಂದ್ರ ಸರಸ್ವತಿ ಅವರು ಅಯೋಧ್ಯೆ ಬಿಕ್ಕಟ್ಟು ಕುರಿತು ಮಧ್ಯಸ್ಥಿಕೆ ವಹಿಸಿದ್ದಾರೆ. ವಿಹೆಚ್‌ಪಿಯ ಕಾರ್ಯಸೂಚಿಯು ಬಿಜೆಪಿಯದಕ್ಕಿಂತ ವಿಭಿನ್ನವಾಗಿಲ್ಲ.

.... ವಿಹೆಚ್‌ಪಿ, ಆರ್‌ಎಸ್‌ಎಸ್ ಮತ್ತು ಭಜರಂಗದಳಗಳು ಧರ್ಮದೊಡನೆ ವ್ಯವಹರಿಸಬೇಕಾಗಿಲ್ಲ. ಧರ್ಮದ ಹೆಸರಿನಲ್ಲಿ ಅವು ಅಪರಾಧ ಎಸಗುತ್ತಿವೆ. ರಾಮಮಂದಿರವು ಮುಗ್ಧ ಜನರನ್ನು ಹಿಂಸಿಸುತ್ತಿವೆ

- ಗೋವರ್ಧನ ಪೀಠದ ಶಂಕರಾಚಾರ್ಯಸ್ವಾಮಿ ಅಧೋಕ್ಷಜಾನಂದ ತೀರ್ಥರು

'ಶಾಂತಿದೂತ'ನ ನಾಡಿನಲ್ಲಿ ಹಿಂಸೆ ಭುಗಿಲೆದ್ದಿರುವುದು ವಿಪರ್ಯಾಸ. ...... ವಿವಾದಾಸ್ಪದ ಅಯೋಧ್ಯೆಗೆ ಕೆಲವು ದಿನಗಳ ಹಿಂದೆ ಕರಸೇವೆಗೆ ಹೊರಟವರು ಅದೇ ರೈಲಿನಲ್ಲಿ ವಾಪಸು ಬರುವಾಗ ಘಟನೆ ನಡೆದಿದೆ. ಹೋಗುವಾಗ ಕರಸೇವಕರು ಸ್ಥಳೀಯ ಅನ್ಯಕೋಮಿನವರ ವಿರುದ್ಧ ಅವಹೇಳನಕಾರಿ ಘೋಷಣೆಗಳನ್ನು ಕೂಗಿದ್ದರು ಎಂದೂ ಕೆಲವು ವರದಿಗಳು ಹೇಳಿವೆ. ಉದ್ರೇಕಕ್ಕೆ ಕಾರಣವಾಗಿರುವ ಅಂಶಗಳು ಏನೇ ಇದ್ದರೂ ಸರಕಾರ ಈ ಘಟನೆಯ ಕುರಿತು ಕೂಲಂಕುಷ ತನಿಖೆ ನಡೆಸಬೇಕು. ತಪ್ಪಿತಸ್ಥರು ಯಾರೇ ಆದರೂ ಅವರ ವಿರುದ್ಧ ಅತ್ಯಂತ ಕಠಿಣ ಕ್ರಮಗಳನ್ನು ಕೈಗೊಳ್ಳಬೇಕು.

... ಅಯೋಧ್ಯೆಯ ಬಾಬರಿ ಮಸೀದಿ-ರಾಮಮಂದಿರ ವಿವಾದ ಭಾರತೀಯ ಸಮಾಜದ ಮುಂದೆ ಅತ್ಯಂತ ಆತಂಕದ ಕ್ಷಣಗಳನ್ನು ಒಡ್ಡುತ್ತಿದೆ. ಕೋಮುವಾದದ ವಿಷಾನಿಲ ದೇಶದೆಲ್ಲೆಡೆ ಹಬ್ಬಿ ವಿಚ್ಛಿದ್ರ ಶಕ್ತಿಗಳ ಕೈ ಮೇಲಾಗುವುದಕ್ಕೆ ದಾರಿ ಮಾಡಿಕೊಡುತ್ತಿದೆ. ಮನುಷ್ಯರನ್ನು ಜೀವಂತ ಸುಡುವ ಮಟ್ಟಕ್ಕೆ ಪರಸ್ಪರ ದ್ವೇಷ ಬೆಳೆಯುತ್ತಿದೆ ಎನ್ನುವುದು ದೇಶದ ಭವಿಷ್ಯದ ದೃಷ್ಟಿಯಿಂದ ಖಂಡಿತವಾಗಿಯೂ ಹಿತಕರವಲ್ಲ. ಕಾನೂನನ್ನು ಉಲ್ಲಂಘಿಸುವ ಯಾರನ್ನೇ ಆದರೂ ಕಠಿಣ ದಂಡನೆಗೆ ಒಳಪಡಿಸುವ ಕ್ಷಿಪ್ರ ಕ್ರಮಗಳನ್ನು ಅಧಿಕಾರಿಗಳು ಕೈಗೊಳ್ಳಬೇಕು. ಇಲ್ಲವಾದಲ್ಲಿ ಕಾನೂನಿನ ಮೇಲಿನ ವಿಶ್ವಾಸವೇ ಹೊರಟುಹೋಗಿ ಪರಿಸ್ಥಿತಿ ಕೈ ಮೀರೀತು.

ಸಂಘ ಪರಿವಾರ ಸುಟ್ಟ - ಪ್ರಜಾವಾಣಿ ಸಂಪಾದಕೀಯ

ಸಾಮಾಜಿಕ ಪ್ರತೀಕಾರ ಮತ್ತು ಸೇಡುಗಳಿಗೆ ಅವಕಾಶವಿರದಂತೆ ನೋಡಿಕೊಳ್ಳುವುದಕ್ಕೇ ಪ್ರಜಾಪ್ರಭುತ್ವ ವ್ಯವಸ್ಥೆ ಎಂದು ಕರೆಯುವುದು. ಸಮಾಜದಲ್ಲಿ ವಿವಿಧ ಕೋಮುಗಳಲ್ಲಿ ಪರಸ್ಪರ ಸೇಡು ತೀರಿಸಿಕೊಳ್ಳಲು ಅವಕಾಶವಿದ್ದದ್ದೇ ಆದರೆ ಈ ಸರಕಾರ, ನ್ಯಾಯಾಲಯ, ಪೋಲೀಸ್, ಮಿಲಿಟರಿಗಳು ಏಕೆ ಬೇಕು?.........

..............ಗುಜರಾತಿನಲ್ಲಿ ನಡೆಯುತ್ತಿರುವ ಘಟನಾವಳಿಗಳು ಮೇಲು ನೋಟಕ್ಕೆ ತೋರುತ್ತಿರುವಂತ ಕೇವಲ ಸ್ವಾಂಟೇನಿಯಸ್ ಆದಂಥವು ಅಲ್ಲ. ಅವಕ್ಕೆ ಹಲವಾರು ಮಗ್ಗಲುಗಳಿವೆ. ರಾಷ್ಟ್ರೀಯ ಮತ್ತು ಅಂತರ್ರಾಷ್ಟ್ರೀಯ ರಾಜಕೀಯ ಸಂಚುಗಳು ಅಲ್ಲಿವೆ.....

.... ಸರ್ಕಾರಿ ಆಡಳಿತ ಯಂತ್ರ ಪೋಲೀಸ್ ಮತ್ತು ಮಿಲಿಟರಿಗಳನ್ನು ಕೇಸರೀಕರಣಗೊಳಿಸಬೇಕೆನ್ನುವುದು ಸಹ ಆರ್‌ಎಸ್‌ಎಸ್ ನ ಹಿಡನ್ ಅಜೆಂಡಾ ಆಗಿದೆ. ಈಗ ಬಿಜೆಪಿಯ ಆಡಳಿತಕ್ಕೊಳಪಟ್ಟ ರಾಜ್ಯಗಳ ಪೋಲೀಸ್ ವ್ಯವಸ್ಥೆ ಕೇಸರೀಕರಣಕ್ಕೊಳಗಾಗಿದೆ......

.... ವಾಜಪೇಯಿಯವರ ಸರಕಾರ ಮುಂದುವರಿಯಬೇಕಾದರೆ ಮುಸ್ಲಿಮರ ರಕ್ತ ಮಾತ್ರ ಸಾಕಾಗುವುದಿಲ್ಲ; ಹಿಂದೂ ರಕ್ತವೂ ಬೇಕು! ಇದಕ್ಕಾಗಿ 'ಆತ್ಮಾಹುತಿ' ಯ ಸಂಸ್ಕೃತಿಯನ್ನು ಯುವಜನರಲ್ಲಿ ಮೂಡಿಸುತ್ತಿದ್ದಾರೆ; ಹಿಟ್ಲರ್‌ನಂತೆ!....

- ಲಂಕೇಶ್ ಪತ್ರಿಕೆ, ಗಂಗಾಧರ ಕುಷ್ಟಗಿ

ಸೌಹಾರ್ದತೆಯ ಅಂತಃಕರಣ ಬೆಸೆದ ಮಾನವ ಸರಪಳಿ....

ಸರ್ವಜನಾಂಗದ ಶಾಂತಿಯ ತೋಟ ರಸಿಕರ ಕಂಗಳ ಸೆಳೆಯುವ ನೋಟ....

ಎಂಬ ಕವಿವಾಣಿ ವಾಸ್ತವಕ್ಕಿಳಿದಿದ್ದು ಮಾರ್ಚ್ 11 ರ ಸಂಜೆ ಮಾನವ ಸರಪಳಿಯಲ್ಲಿ... ಅತ್ತ ಗಾಂಧಿ ಪ್ರತಿಮೆಯಿಂದ ಹಿಂದು-ಮುಸ್ಲಿಂ-ಕ್ರೈಸ್ತ ಜನಾಂಗದ ನಾಗರೀಕರು ಸಹಸ್ರಾರು ಸಂಖ್ಯೆಯಲ್ಲಿ ಕೈ-ಕೈ ಹಿಡಿದು ಸೌಹಾರ್ದತೆಗಾಗಿ ಮಾನವ ಸರಪಳಿ ರಚಿಸಿದರೆ... ಇತ್ತ... ಕಾರ್ಪೋರೇಷನ್ ನಿಂದ ಟೌನ್‌ಹಾಲ್‌ವರೆಗೂ ನೂರಾರು ಕಲಾವಿದರು, ಬರಹಗಾರರು, ಸಾಹಿತಿಗಳು, ಮಹಿಳೆಯರು, ವಿದ್ಯಾರ್ಥಿ- ಯುವಜನರು ಶಾಂತಿಗಾಗಿ ಮಾನವಸರಪಳಿ ರಚಿಸಿದರು.


ಗುಜರಾತ್‌ನ ಗೋದ್ರಾ ರೈಲು ಹತ್ಯಾಕಾಂಡದ ನೆಪದಲ್ಲಿ ಸಹಸ್ರಾರು ಅಮಾಯಕರ, ಅಲ್ಪಸಂಖ್ಯಾತರ ಜೀವಗಳನ್ನು ಸಜೀವವಾಗಿ ದಹಿಸಿದ ಅಮಾನವೀಯ ಕ್ರೂರ ವರ್ತನೆಯನ್ನು ಪ್ರತಿಭಟಿಸಿ ಮತ್ತು ಶಾಂತಿ-ಸೌಹಾರ್ದತೆ, ಐಕ್ಯತೆಯ ರಕ್ಷಣೆಗಾಗಿ ವಿವಿಧ ಸಂಘ ಸಂಸ್ಥೆಗಳನ್ನೊಳಗೊಂಡ 'ಕೋಮುಸೌಹಾರ್ದತಾ ವೇದಿಕೆ'ಯು ಈ ಮಾನವ ಸರಪಳಿಯನ್ನು ಸಂಘಟಿಸಿತು.

ದೇಶದಲ್ಲಿ ಬಡತನ, ನಿರುದ್ಯೋಗ, ಬೆಲೆ ಏರಿಕೆಯಂತಹ ಸಮಸ್ಯೆಗಳು ತಾಂಡವ ವಾಡುತ್ತಿರುವಾಗ ದೇಶದ ಕೃಷಿ-ಕೈಗಾರಿಕೆ ಕ್ಷೇತ್ರಗಳು ಸಂಪೂರ್ಣ ದಿವಾಳಿಯಾಗುತ್ತಿರುವಾಗ ಮಂದಿರ-ಮಸೀದಿಯ ಪ್ರಶ್ನೆಗಳನ್ನು ಮಠಾಧಿಪತಿಗಳು ಕೋಮುವಾದಿ ಶಕ್ತಿಗಳೊಂದಿಗೆ ಕೈ ಜೋಡಿಸಿ ಜನತೆಯನ್ನು ದಿಕ್ಕು ತಪ್ಪಿಸುತ್ತಿರುವುದನ್ನು ಪ್ರತಿಭಟನಾಕಾರರು ತೀವ್ರವಾಗಿ ಖಂಡಿಸಿದರು.

ಮಾನವ ಸರಪಳಿಯ ನಂತರ ಕಾರ್ಪೋರೇಷನ್ ಆವರಣದಲ್ಲಿ ನೆರೆದ ಸಮೂಹವನ್ನುದ್ದೇಶಿಸಿ ಮಾತನಾಡಿದ ಭಾಷಣಕಾರರು ದೇಶದ ನ್ಯಾಯಾಂಗ, ಕಾನೂನು, ಸಂವಿಧಾನವನ್ನು ಧಿಕ್ಕರಿಸಿ, ಇಡೀ ದೇಶವನ್ನೇ ಕೋಮುಜ್ವಾಲೆಯ ಕೆನ್ನಾಲಿಗೆಗೆ ದೂಡುತ್ತಿರುವ ವಿಶ್ವ ಹಿಂದು ಪರಿಷತ್, ಭಜರಂಗ ದಳ ಹಾಗೂ ಸಂಘ ಪರಿವಾರವನ್ನು ತರಾಟೆಗೆ ತೆಗೆದುಕೊಂಡರಲ್ಲದೆ ಸಾವಿರಾರು ಜನರ ಮಾರಣ ಹೋಮ ನಡೆಸಿರುವ ಗುಜರಾತ್‌ನ ಮುಖ್ಯಮಂತ್ರಿ ನರೇಂದ್ರಮೋದಿ ರಾಜೀನಾಮೆ ನೀಡಬೇಕೆಂದು ಆಗ್ರಹಪಡಿಸಿದರು.

ನಾಡಿನ ಹಿರಿಯ ಚಿಂತಕರಾದ ಪ್ರೊ. ಜಿ.ಕೆ.ಗೋವಿಂದರಾವ್, ಡಾ. ಜಿ.ರಾಮಕೃಷ್ಣ, ಡಾ.ವಿಜಯ, ಗಿರೀಶ್ ಕಾಸರವಳ್ಳಿ, ವಕೀಲರಾದ ಹೆಚ್.ಎನ್.ನಾಗಮೋಹನ್‌ದಾಸ್, ಮಾಜಿ ಮೇಯರ್ ರಾಮಚಂದ್ರಪ್ಪ, ಸ್ವಾತಂತ್ರ್ಯ ಹೋರಾಟಗಾರರಾದ ಸತ್ಯವ್ರತ, ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಎಸ್.ಸೂರ್ಯನಾರಾಯಣ ರಾವ್, ಸಿಪಿಐ ರಾಜ್ಯ ಕಾರ್ಯದರ್ಶಿ ಎಂ.ಸಿ.ವೆಂಕಟರಾಮು, ಎಸ್‌ಯುಸಿಐನ ಡಾ. ಬಿ.ಆರ್.ಮಂಜುನಾಥ್, ದಲಿತ ಸಂಘರ್ಷ ಸಮಿತಿಯ ಲಕ್ಷ್ಮಿನಾರಾಯಣ ನಾಗವಾರ ಮೊದಲಾದವರು ಮಾತನಾಡಿ ದೇಶದ ಜನತೆಯು ಯಾವುದೇ ಮತೀಯ ಭಾವನೆಗಳಿಗೆ ಕಿವಿಗೊಡದೇ ಭಾವೋದ್ರೇಕಕ್ಕೆ ಒಳಾಗಗದೇ ದೇಶದಲ್ಲಿ-ರಾಜ್ಯದಲ್ಲಿ ಶಾಂತಿ-ಸೌಹಾರ್ದತೆ ಕಾಪಾಡಲು ಶ್ರಮಿಸಬೇಕೆಂದು ಕರೆ ನೀಡಿದರು.

ಇದಲ್ಲದೆ ವಿವಿಧ ಸಂಘಟನೆಗಳ ಮುಖಂಡರುಗಳಾದ ಸಾಜನ್ ಕೆ.ಜಾರ್ಜ್, ಪ್ರೊ. ಅಂಬ್ರೂಸ್ ಪಿಂಟೋ, ಸೈಯದ್ ಶಫಿಉಲ್ಲಾ, ನೂಪುರ್‌ಬಸು, ಅಮ್ಮುಜೋಸಫ್, ಗೀತಾ ಮೆನನ್, ಕೆ.ಎಸ್.ವಿಮಲಾ, ಎಸ್.ವೈ.ಗುರುಶಾಂತ್, ಪ್ರಸನ್ನಕುಮಾರ್, ಶೂದ್ರ ಶ್ರೀನಿವಾಸ್, ಬೆಂಗಳೂರು ಮಾಜಿ ಪೋಲಿಸ್ ಕಮಿಷನರ್ ರೇವಣಸಿದ್ದಯ್ಯ ಸೇರಿದಂತೆ ಸಿಐಟಿಯು, ವಿಮಾ ನೌಕರರ ಸಂಘಟನೆ, ಬ್ಯಾಂಕ್ ನೌಕರರ ಸಂಘ, ವಕೀಲರ ಸಂಘ, ಪ್ರಾಂತ ರೈತ ಸಂಘ, ಬಿಜಿವಿಎಸ್, ಡಿವೈಎಫ್‌ಐ, ಎಸ್‌ಎಫ್‌ಐ, ಎಐಎಸ್‌ಎಫ್ - ಎಐವೈಎಫ್, ಎಐಡಿಎಸ್‌ಓ - ಎಡಿವೈಓ, ಡಿಎಸ್‌ಎಸ್, ಪತ್ರಕರ್ತರು ಸೇರಿದಂತೆ ನೂರಾರು ಕಾರ್ಯಕರ್ತರು - ಮುಖಂಡರುಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು



ಮಾನವಸರಪಳಿಯಲ್ಲಿನ ಕೊಂಡಿಗಳು...... ಪ್ರೊ. ಜಿ.ಕೆ.ಗೋವಿಂದರಾವ್, ಡಾ.ವಿಜಯ, ಡಾ. ಜಿ.ಆರ್., ಡಾ.ಎನ್.ಗಾಯತ್ರಿ, ಸೂರಿ, ದಾಸ್, ಡಾ. ಮರುಳಸಿದ್ದಪ್ಪ, ಗಿರೀಶ್ ಕಾಸರವಳ್ಳಿ

... ರಾಜ್ಯದ ಮುಖ್ಯಮಂತ್ರಿ ನರೇಂದ್ರ ಮೋದಿ ತಮ್ಮ ಬಂಗಲೆಯಲ್ಲಿ ಕುಳಿತು ಎಲ್ಲಾ ಶಾಂತವಾಗಿದೆ ಎಂದು ಸುದ್ದಿಗಾರರಿಗೆ ಹೇಳುತ್ತಿದ್ದರು, ನ್ಯಾಯವಾಗಿ ಕೇಂದ್ರ ಗೃಹ ಸಚಿವ ಎಲ್.ಕೆ.ಅಡ್ವಾಣಿ ಅವರು ಇಲ್ಲಿ ಭೇಟಿ ನೀಡಿ ಜನರನ್ನು ಸಂತೈಸಬೇಕಾಗಿತ್ತು. ಹಿಂದೊಮ್ಮೆ ರಥಯಾತ್ರೆ ಮಾಡಿ ಪ್ರಕ್ಷುಬ್ಧ ಸ್ಥಿತಿ ನಿರ್ಮಾಣವಾಗಲು ಕಾರಣರಾದವರಿಗೆ ಇಂತಹ ನೈತಿಕ ಬಲ ಬರಲು ಹೇಗೆ ಸಾಧ್ಯ

- ಜನವಾಹಿನಿ ಸಂಪಾದಕೀಯ

PRB DECR 319-79/79 AIKYARANGA WEEKLY Reg. No. 17015/64 CPM(G)/KA/BGS-119/2002

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಎಸ್.ಸೂರ್ಯನಾರಾಯಣ ರಾವ್
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ.12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು.

Printed & Published by Communist Party of India(Marxist), Karnataka State Committee. Editor : S.Y.GURUSHANTH